
ಐಕ್ಯ ರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 30

ಜುಲೈ 21-27, 1997

ಬೆಲೆ ರೂ. 2.00



ಕೆ.ಆರ್.ನಾರಾಯಣನ್-ಮುಂದಿನ ರಾಷ್ಟ್ರಪತಿಗಳು

ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತದ ಮುಂದಿನ ರಾಷ್ಟ್ರಪತಿಗಳಾಗಿ ಈಗ ಉಪರಾಷ್ಟ್ರಪತಿಗಳಾಗಿರುವ ಕೆ.ಆರ್.ನಾರಾಯಣನ್ ಜುಲೈ 14ರಂದು ನಡೆದ ಚುನಾವಣೆಯಲ್ಲಿ ಭಾರೀ ಬಹುಮತದಿಂದ ಆಯ್ಕೆಯಾಗಿದ್ದಾರೆ.

ದೇಶವನ್ನು ಸ್ವಚ್ಛಗೊಳಿಸಲು, ಬಲಾಢ್ಯಗೊಳಿಸಲು ತನಗೊಬ್ಬನಿಗೇ ಸಾಧ್ಯವೆಂದು ಕೊಚ್ಚಿಕೊಳ್ಳುತ್ತಾ ಮಹಾರಾಷ್ಟ್ರದ ಸಂಕುಚಿತ ದೃಷ್ಟಿಕೋನದ ಶಿವಸೇನೆಯ ಬೆಂಬಲದಿಂದ ಸ್ಪರ್ಧಿಸಿದ್ದ ಮಾಜಿ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್.ಶೇಷನ್ ಠೇವಣಿಯನ್ನೂ ಕಳೆದುಕೊಂಡಿದ್ದಾರೆ. ನಾರಾಯಣನ್ ರವರಿಗೆ 91.4% ಮತಗಳು ದೊರೆತರೆ ಶೇಷನ್‌ರಿಗೆ 4.8% ಮಾತ್ರ ದೊರೆಯಿತು. ಕುಲಗೆಟ್ಟ ಮತಗಳ ಪ್ರಮಾಣವೂ 3.8%

ದೇಶದ ಏಕ್ಯತೆ ಹಾಗೂ ಸಮಗ್ರತೆಯನ್ನು ಬಯಸುವ ಶಕ್ತಿಗಳು ಹಾಗೂ ಛಿದ್ರಕಾರಿ ಶಕ್ತಿಗಳ ನಡುವಿನ ಸಮರದ ಭಾಗವಾಗಿಯೇ ಕಳೆದ ಬಾರಿ ಹಾಗೂ ಈ ಬಾರಿ ರಾಷ್ಟ್ರಪತಿ ಚುನಾವಣೆಗಳು ನಡೆದವು. 1992 ರಲ್ಲಿ ಈ ಚುನಾವಣೆಗಳು ನಡೆಯುವ ವೇಳೆಗೆ ಎಡಪಕ್ಷಗಳು ದೇಶದ ರಾಷ್ಟ್ರಪತಿ ಹಾಗೂ ಉಪರಾಷ್ಟ್ರಪತಿಗಳ ಸ್ಥಾನ ಅಲಂಕರಿಸುವವರಿಗೆ ಕೆಲವೊಂದು ಮೂಲಭೂತ ಅರ್ಹತೆಗಳಿರಬೇಕೆಂದು ಪ್ರತಿಪಾದಿಸಿದ್ದವು; ರಾಷ್ಟ್ರೀಯ ಐಕ್ಯತೆ, ಜಾತ್ಯಾತೀತತೆಯ ಮೌಲ್ಯಗಳನ್ನು ರಕ್ಷಿಸುವ, ಛಿದ್ರಕಾರಿ ಶಕ್ತಿಗಳನ್ನು ಖಡಾಖಂಡಿತವಾಗಿ ವಿರೋಧಿಸುವ ವ್ಯಕ್ತಿಗಳು ರಾಷ್ಟ್ರಪತಿಗಳು ಹಾಗೂ ಉಪರಾಷ್ಟ್ರಪತಿಗಳು ಆಗಬೇಕೆಂಬ ಮಾನದಂಡವನ್ನು ಮುಂದಿಟ್ಟಿದ್ದವು. ಆ ಪ್ರಕಾರ ಕಳೆದ ಬಾರಿ ಶಂಕರ್ ದಯಾಳ್ ಶರ್ಮರವರು ರಾಷ್ಟ್ರಪತಿಗಳಾಗಿ, ಕೆ.ಆರ್.ನಾರಾಯಣನ್ ಉಪರಾಷ್ಟ್ರಪತಿಗಳಾಗಿ ಆಯ್ಕೆಯಾಗಿದ್ದರು. ಮುಂದೆ ಅದೇ ವರ್ಷದ ಕೊನೆಯಲ್ಲಿ ದೇಶ ಬಾಬ್ರಿ ಮಸೀದಿಯ ಧ್ವಂಸದ ತೀರಾ ನಾಚಿಕೆಗೇಡಿ ಘಟನೆ ಕಂಡ ಸಂದರ್ಭದಲ್ಲಿ ಈ ಮಾನದಂಡ ಎಷ್ಟೊಂದು ಸಮರ್ಪಕ ಎಂದು ಎಲ್ಲರ ಅರಿವಿಗೆ ಬಂದಿತ್ತು. ಈ ಬಾರಿ ಮತ್ತೆ ರಾಷ್ಟ್ರಪತಿ ಚುನಾವಣೆಗಳಲ್ಲಿ ಅದಕ್ಕೆ ಪುರಸ್ಕಾರ ದೊರೆತಿದೆ.

ಶೇಷನ್‌ರವರು ಏನೇ ಹೇಳಿಕೊಂಡರೂ ಒಂದು ರೀತಿಯಲ್ಲಿ ಅವರು ಶಿವಸೇನೆಯಂತಹ ಸಂಕುಚಿತವಾದಿಗಳ ಬೆಂಬಲ ಪಡೆಯಲು ಹಿಂಜರಿಯದಿದ್ದುದು ಸಹಜವೂ ಆಗಿತ್ತು. ವಿ.ಹೆಚ್.ಪಿ. ಅಧ್ಯಕ್ಷ ಸಿಂಘಾಲ್‌ರಂತೂ ಕೆ.ಆರ್. ನಾರಾಯಣನ್‌ರವರು ರಾಷ್ಟ್ರಪತಿ ಭವನದಲ್ಲಿ ಹಿಂದೂ ಮೌಲ್ಯಗಳನ್ನು ಪ್ರೋತ್ಸಾಹಿಸುವುದಿಲ್ಲ, ಅದನ್ನು ಕ್ರಿಶ್ಚಿಯನ್ ಕೋಟೆಯಾಗಿಸುತ್ತಾರೆ ಎಂದು ಅರಚಾಡಿದ್ದರು. ಅವರ ಅರಚಾಟವೂ ಸಹಜವೇ ಆಗಿತ್ತು. ಏಕೆಂದರೆ ವಿ.ಹೆಚ್.ಪಿ. -ಬಿಜೆಪಿ ಮಂದಿ ಬಾಬ್ರಿಮಸೀದಿಯನ್ನು ಧ್ವಂಸಮಾಡಿದಾಗ ಆಗಿನ ಕಾಂಗ್ರೆಸ್ ಸರಕಾರ ತೆಪ್ಪಗಿದ್ದಾಗ ಆ ಹೀನ ಕಾರ್ಯವನ್ನು ಅತ್ಯಂತ ಕಠಿಣವಾಗಿ ಖಂಡಿಸಿದವರು ಕೆ.ಆರ್. ನಾರಾಯಣನ್. ಹೀಗಿದ್ದರೂ ಆ ಧ್ವಂಸ ಕಾರ್ಯವನ್ನು ಸಮರ್ಥಿಸಿಕೊಳ್ಳುವ ಹಾಗೂ ಸಂಸತ್ತಿನಲ್ಲಿ ಅತೀ ದೊಡ್ಡ ಪಕ್ಷವೆನಿಸಿರುವ ಬಿಜೆಪಿ ತನ್ನ ಶಿವಸೇನೆ, ವಿ.ಹೆಚ್.ಪಿ. ಮಿತ್ರರ ಇಚ್ಛೆಗೆ ವಿರುದ್ಧವಾಗಿ ಶೇಷನ್‌ರಿಗೆ ಬೆಂಬಲ ನೀಡದೆ ನಾರಾಯಣನ್‌ರವರಿಗೆ ಬೆಂಬಲ ನೀಡಿದ್ದು ಕೆಲವರಿಗೆ ಆಶ್ಚರ್ಯವುಂಟು ಮಾಡಿತ್ತು. ಆದರೆ ಆ ಪಕ್ಷದ ಸಮಯಸಾಧಕತನದ, ಹಿಂದುತ್ವ ಅದಕ್ಕೆ ದಿಲ್ಲಿಯ ಗದ್ದುಗೆ ಹಿಡಿದುಕೊಳ್ಳಲು ಒಂದು ಸಾಧನ ಮಾತ್ರ ಎಂಬುದರ ಅರಿವಿರುವವರಿಗೆ ಇದರಿಂದ ಆಶ್ಚರ್ಯವಾಗಿರಲಿಲ್ಲ.

ಇರಲಿ,77 ವರ್ಷಗಳ ಹಿಂದೆ ಕೇರಳದ ಕೊಟ್ಟಾಯಂ ಜಿಲ್ಲೆಯ ಒಳವೂರು ಎಂಬ ಗ್ರಾಮದಲ್ಲಿ ದಲಿತ ಆಯುರ್ವೇದ ವೈದ್ಯರ ಕುಟುಂಬವೊಂದರಲ್ಲಿ ಜನಿಸಿದ ನಾರಾಯಣನ್ ಅಧ್ಯಾಪಕರಾಗಿ, ಪತ್ರಕರ್ತರಾಗಿ, ನಂತರ ಒಬ್ಬ ಯಶಸ್ವಿ ರಾಯಭಾರಿಯಾಗಿ ಕಾರ್ಯನಿರ್ವಹಿಸಿ ಈಗ ದೇಶದ ಅತ್ಯುನ್ನತ ಸ್ಥಾನವನ್ನು ಅಲಂಕರಿಸುತ್ತಿರುವುದು ನಮ್ಮ ಪ್ರಜಾಪ್ರಭುತ್ವದಲ್ಲಿ ಸಾಕಷ್ಟು ಸಕಾರಾತ್ಮಕ ಅಂಶಗಳು ಇವೆ ಎಂಬುದನ್ನು ನೆನಪಿಸಿಕೊಡುತ್ತಿದೆ. ಈ ಸಕಾರಾತ್ಮಕ ಅಂಶ ಗಳನ್ನು ಬಲಪಡಿಸಿ ನಕಾರಾತ್ಮಕ ಅಂಶಗಳ ವಿರುದ್ಧ ಹೋರಾಡುತ್ತಿರುವ ದೇಶದ ಪ್ರಜಾ ಪ್ರಭುತ್ವ ಆಂದೋಲನಕ್ಕೆ ಇದೊಂದು ಸಂತಸದ ಸಂದರ್ಭ.

ಹವಾಲಾ ಮೊಕದ್ದಮೆಯಲ್ಲಿ ನ್ಯಾಯಾಧೀಶರ ಮೇಲೆ ಒತ್ತಡ!

ಸಿಪಿಐ(ಎಂ) ಖಂಡನೆ

ಹವಾಲಾ ಮೊಕದ್ದಮೆಯನ್ನು ಕೈಗೆತ್ತಿಕೊಳ್ಳಬಾರದೆಂದು ಕೆಲವು ಆಸಕ್ತ ಶಕ್ತಿಗಳು ದೇಶದ ಸರ್ವೋಚ್ಛ ನ್ಯಾಯಾಲಯದ ಮೇಲೂ ಒತ್ತಡ ಹೇರುತ್ತಿದ್ದಾರೆ ಎಂದು ಸ್ವತಃ ಮುಖ್ಯ ನ್ಯಾಯಾಧೀಶರೇ ಕಟುವಾಗಿ ಹೇಳಿರುವುದು ದೇಶವನ್ನು ತಲ್ಲಣ ಗೊಳಿಸಿದೆ. ಇದನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸುತ್ತಾ ಎಲ್ಲಾ ಪ್ರಮುಖ ಭ್ರಷ್ಟಾಚಾರದ ಮೊಕದ್ದಮೆಗಳಲ್ಲಿ ತಪ್ಪಿತಸ್ಥರನ್ನು ಗುರುತಿಸಿ ಶಿಕ್ಷಿಸುವ ಕಾನೂನು ಪ್ರಕ್ರಿಯೆಯನ್ನು ತೀವ್ರಗೊಳಿಸಬೇಕು ಎಂದು ಸರಕಾರವನ್ನು ಆಗ್ರಹಿಸಿದೆ.

"ಭಾರತದ ಮುಖ್ಯ ನ್ಯಾಯಾಧೀಶರು ಹೊರಗೆಡಹಿರುವ ಈ ಆಘಾತಕಾರಿ ಸಂಗತಿ ಸಿಪಿಐ (ಎಂ) ಆಗಾಗ ವ್ಯಕ್ತಪಡಿಸುತ್ತಾ ಬಂದಿರುವ ಸಂದೇಹ ನಿಜವೆಂದು ತೋರಿಸಿಕೊಟ್ಟಿದೆ" ಎಂದು ಪೊಲಿಟ್‌ಬ್ಯೂರೋ ಹೇಳಿದೆ. ತನಿಖೆಗಳಲ್ಲಿ ಕಂಡು ಬರುತ್ತಿರುವ ಶಿಥಿಲತೆ, ಅಪೀಲು ಹಾಕುವುದು ಇತ್ಯಾದಿಗಳ ಬಗ್ಗೆ ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ವಿಳಂಬ, ಹವಾಲಾ, ಬೋಫೋರ್ಸ್, ಇಂಡಿಯನ್ ಬ್ಯಾಂಕ್ ಹಗರಣ ಇತ್ಯಾದಿಗಳ ವಿಚಾರಣೆಗಳನ್ನು ವಿಫಲಗೊಳಿಸಲು ವಿಚಾರಣಾ ಅಧಿಕಾರಿಗಳನ್ನು ಇದ್ದಕ್ಕಿದ್ದಂತೆ ಬದಲಿಸುವುದು ಇವೆಲ್ಲದರ ಬಗ್ಗೆ ಸಿಪಿಐ(ಎಂ) ತನ್ನ ಬಲವಾದ ಆಕ್ಷೇಪವನ್ನು ವ್ಯಕ್ತಪಡಿಸುತ್ತಾ ಬಂದಿದ್ದು ಈಗಲಾದರೂ ಸರಕಾರ ಕಾನೂನಿನ ಪ್ರಕ್ರಿಯೆಯನ್ನು ತ್ವರಿತಗೊಳಿಸುವಲ್ಲಿ ತನ್ನ ಪ್ರಾಮಾಣಿಕತೆಯನ್ನು ತೋರ್ಪಡಿಸಬೇಕು ಎಂದು ಒತ್ತಾಯಿಸಿದೆ.

ಈ ನಡುವೆ ಸಂಯುಕ್ತ ರಂಗದ ಚಾಲನಾ ಸಮಿತಿ ಮೇವು ಹಗರಣದಲ್ಲಿ ಆರೋಪಿಯಾಗಿರುವ ಲಾಲೂ ಪ್ರಸಾದ್ ಯಾದವ್‌ರ ರಾಷ್ಟ್ರೀಯ ಜನತಾದಳಕ್ಕೆ ಸಂಯುಕ್ತ ರಂಗದಲ್ಲಿ ಸ್ಥಾನವಿಲ್ಲವೆಂದು ಸ್ಪಷ್ಟಪಡಿಸಿದ ಸುದ್ದಿ ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ಬಂದಿದೆ. ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಸಡಿಲತೆ ಸಲ್ಲ ಎಂಬ ಎಡಪಕ್ಷಗಳ, ಮತ್ತಿತರ ಪ್ರಜಾಪ್ರಭುತ್ವವಾದೀ ಶಕ್ತಿಗಳ ಒತ್ತಡಕ್ಕೆ ತಲೆಬಾಗಬೇಕಾಗಿ ಬಂದಿದೆ.

ಪರಿಹಾರ ಒದಗಿಸುವಲ್ಲಿ ಸರಕಾರದ ವೈಫಲ್ಯ ರಾಜ್ಯದ ಹಲವೆಡೆ ಹಿಂದೆಂದೂ ಕಾಣದ ನೆರೆಹಾವಳಿ

- ಎನ್.ಕೆ.ಉಪಾಧ್ಯಾಯ

ದಕ್ಷಿಣ ಕನ್ನಡ, ಉತ್ತರ ಕನ್ನಡ, ಬಿಜಾಪುರ ಮೊದಲಾದ ಜಿಲ್ಲೆಗಳು ಅಪಾರ ಪ್ರವಾಹ ಪೀಡೆಗೆ ಒಳಗಾಗಿವೆ. ಮಕ್ಕಳು, ಮುದುಕ-ಮುದುಕಿಯರನ್ನೊಳಗೊಂಡು ಹಲವಾರು ಜನ ಜಡಿಮಳೆ, ನೆರೆಹಾವಳಿಗೆ ಬಲಿಯಾಗಿದ್ದಾರೆ. ಒಟ್ಟು ಸಂಖ್ಯೆ ಇನ್ನೂ ತಿಳಿದಿಲ್ಲ. ಅಪಾರ ಆಸ್ತಿಪಾಸ್ತಿ ಬೆಳೆ ದನಕರುಗಳಿಗೆಲ್ಲ ಹಾನಿಯಾಗಿದೆ. ಅದು ಹಲವಾರು ಕೋಟಿ ಸಂಖ್ಯೆಯನ್ನು ಮೀರಿದೆಂದು ಅಂದಾಜು. ದಕ್ಷಿಣ ಕನ್ನಡ, ಉತ್ತರ ಕನ್ನಡದಲ್ಲಿ ಭಾರಿ ಮಳೆಗಳಿಂದಾಗಿ ಮನೆ, ಹೊಲಗದ್ದೆಗಳು ಮುಳುಗಿದ್ದರೆ, ಬಿಜಾಪುರ ಮತ್ತಿನ್ನಿತರ ಬಯಲು ಸೀಮೆಯಲ್ಲಿ ಕೃಷ್ಣೆ, ಘಟಪ್ರಭಾ, ಮಲಪ್ರಭಾ ಮೊದಲಾದ ನದಿಗಳ ಹಿನ್ನೀರಿನ ಪ್ರಭಾವದಿಂದಾಗಿ ಅಪಾಯಕ್ಕೊಳಗಾಗಿ ಹಾನಿಯನ್ನನುಭವಿಸಿವೆ. ಆಲಮಟ್ಟಿ ಯೋಜನೆಯ ಜಲಾನಯನ ಪ್ರದೇಶದಲ್ಲಿ ನೀರು ಉಕ್ಕಿ ಬರುತ್ತಿದ್ದು ಹಲವಾರು ಗ್ರಾಮಗಳೇ ನೀರು ಪಾಲಾಗಿವೆ. ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳ ಸಮಸ್ಯೆ ಒಂದಾದರೆ, ಬಿಜಾಪುರ, ಬೆಳಗಾವಿ, ಧಾರವಾಡ ಜಿಲ್ಲೆಗಳ ಸಂಕಷ್ಟ ಮತ್ತೊಂದು. ಉತ್ತರ - ದಕ್ಷಿಣ ಕನ್ನಡದ ಜನರು ಪ್ರತಿವರ್ಷ ಮಳೆಗಾಲದಲ್ಲಿ ಎದುರಿಸುವ ಪ್ರಶ್ನೆ ಸಮುದ್ರ ಕೊರೆತ, ಅದರಿಂದುಂಟಾಗುತ್ತಿರುವ ಹಾನಿ ಇನ್ನೂ ಹತ್ತು ಹನ್ನೆರಡು ವರ್ಷಕ್ಕೊಂದು ಸಲ ಈ ವರ್ಷದಂತೆ ಎದುರಿಸಬೇಕಾಗಿ ಬರುವ ಅಪಾರ ಜಡಿಮಳೆ, ಗಾಳಿಯಿಂದಾಗಿ ನದಿ ಪ್ರವಾಹ, ಅದರಿಂದಾಗಿ ಮುಳುಗಡೆಯಾಗುವ ಭೂಮಿ, ತೋಟ, ಮನೆಗಳು. ಮಳೆಗಾಲದಲ್ಲಿ ಸಮುದ್ರದ ನೀರು ಉಕ್ಕೇರಿ ಬಂದು ಮಂಗಳೂರು - ಕಾರವಾರದವರೆಗೆ ಸಮುದ್ರ ದಂಡೆಯಲ್ಲಿರುವ ಸಾವಿರಾರು ಎಕ್ರೆ ಭೂಮಿ, ತೆಂಗಿನ ಮರ ಮತ್ತಿನ್ನಿತರ ಬೆಳೆಯನ್ನೂ, ಮನೆ ಗುಡಿಸಲುಗಳನ್ನೂ ನಾಶಗೊಳಿಸುತ್ತಿದೆ. ವರ್ಷದಲ್ಲಿ ಮೂರು ತಿಂಗಳು ಸಮುದ್ರ ತೀರದ ಜನ ಸಮುದ್ರ ಕೊರೆತಕ್ಕೆ ಒಳಗಾಗುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ 18 ಪ್ರದೇಶಗಳಲ್ಲಿ ಸಮುದ್ರ ಕೊರೆತದ ಪ್ರಭಾವ ಹೆಚ್ಚಾಗಿರುತ್ತದೆಂದು ಅಧಿಕಾರಿಗಳ ಹೇಳಿಕೆ. ಮೊಗವೀರರ ಮತ್ತು ಈ ಪ್ರದೇಶದಲ್ಲಿರುವ ಜನರ ಕೂಗು, ಬೆಂಗಳೂರಿಗೂ - ದಿಲ್ಲಿಗೂ ಪ್ರತಿ ವರ್ಷವೂ ಗಂಟೆ ಬಾರಿಸುತ್ತದೆ. ಮಂತ್ರಿಗಳೂ, ಶಾಸಕರೂ, ಪುಢಾರಿಗಳೂ ತಾವು ಮೊದಲೇ ತಯಾರಿಸಿಟ್ಟಿದ್ದ ಆಶ್ವಾಸನೆಗಳನ್ನು ಪತ್ರಿಕೆಗಳ ಮೂಲಕ ಪ್ರಕಟಗೊಳಿಸುತ್ತಾರೆ. ಜನರ ಕಣ್ಣಿಗೆ ಮಣ್ಣೆರಚಲು ಪರಿಹಾರಕ್ಕಾಗಿ ಒಂದಷ್ಟು ಸಮುದ್ರ ಕೊರೆತವನ್ನು ತಡೆಯುವ ಕೆಲಸಕ್ಕಾಗಿ ಹಣ ಮಂಜೂರು ಮಾಡುತ್ತಾರೆ. ಸಮುದ್ರ ಕೊರೆತ ತಡೆಯುವ ಕಾಮಗಾರಿ ಮಾತ್ರ ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳ ಸಮುದ್ರ ತೀರದಲ್ಲೆಲ್ಲೂ ಕಾಣಬರುವುದಿಲ್ಲ. ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಅಂಥ ಕಾಮಗಾರಿ ಎಲ್ಲಿಯಾದರೂ ನಡೆದಿದ್ದರೆ, ಜನರು ಮರುವರ್ಷ ಇಂಥ ಅಪಾರಹಾನಿಗೆ ತುತ್ತಾಗಿ ಬೊಬ್ಬಿಡುತ್ತಿರಲಿಲ್ಲ. ಸಮುದ್ರ ಕೊರೆತವನ್ನು ತಡೆಯುವ ಕಾಮಗಾರಿಗಾಗಿ ಲಕ್ಷಾವಧಿ ರೂಪಾಯಿ ಸರಕಾರಿ ಖಜಾನೆಯಿಂದ ಖರ್ಚಾಗಿದೆ. ಅದು ಯಾರ ಕಿಸೆಯನ್ನೋ ಸೇರಿದೆ. ಆದರೆ ಸಮುದ್ರ ದಂಡೆಯ ಜನರ, ಮೊಗವೀರರ ಅಳಲನ್ನು ಮಾತ್ರ ಶಮನಗೊಳಿಸಿರುವುದಿಲ್ಲ. ಈಗ ದಕ್ಷಿಣ ಕನ್ನಡ ಜಿಲ್ಲೆಯವರಾದ ಬಂದರು ಮತ್ತು ಮೀನುಗಾರಿಕೆ ಮಂತ್ರಿ ಜಯಪ್ರಕಾಶ್ ಹೆಗಡೆಯವರು ಸಮುದ್ರ ಕೊರೆತ ತಡೆಯುವ ತುರ್ತು ಕಾಮಗಾರಿಗಾಗಿ 1.18 ಕೋಟಿ ರೂಪಾಯಿ ಅಂದಾಜು ಲೆಕ್ಕ ಕಳುಹಿಸಿರುವುದಾಗಿ ಹೇಳಿದ್ದಾರೆ. ಅದೇ ರೀತಿ ಈ ಸಮುದ್ರ ಕೊರೆತಕ್ಕೆ ಖಾಯಂ ರೀತಿಯ ಪರಿಹಾರಕ್ಕಾಗಿ 450 ಕೋಟಿ ರೂಪಾಯಿಯ ಬೇಡಿಕೆಯನ್ನು ಮಂಡಿಸಿರುವ ವಿಚಾರವನ್ನು ಪ್ರಕಟಿಸಿದ್ದಾರೆ. ಜಯಪ್ರಕಾಶ್ ಹೆಗಡೆಯವರಂತೆಯೇ ಹಿಂದಿನ ಮಂತ್ರಿಗಳಾದ ಮನೋರಮಾ ಮಧ್ವರಾಜ್, ವೀರಪ್ಪಮೊಯಿಲಿ(ಮುಖ್ಯಮಂತ್ರಿಯೂ ಆಗಿದ್ದರು) ಮೊದಲಾದವರೂ ಜನರ ಸಮಾಧಾನಕ್ಕಾಗಿ ಬಾಯಿಗೆ ಬೆಣ್ಣೆ ಒರೆಸುವ ಕೆಲಸಗಳನ್ನು ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ಪ್ರತಿವರ್ಷ ಮಳೆಗಾಲದಲ್ಲಿ ಸಮುದ್ರ ಬಾಯಿ ತೆರೆಯುತ್ತದೆ. ಸಮುದ್ರ ದಂಡೆಯ ಭೂಮಿ, ಬೆಳೆ, ಮನೆ-ಗುಡಿಸಲುಗಳನ್ನು ನುಂಗುತ್ತದೆ. ಈ ಬಂಡ

ಪುಟ 2 ನೋಡಿ



ಕರ್ನಾಟಕದಲ್ಲಿ ರಾಷ್ಟ್ರೀಯ ಪ್ರಚಾರಾಂದೋಲನ ಆರಂಭ

ಬೆಂಗಳೂರಿನ ಜನನಿಬಿಡ ಮೆಜೆಸ್ಟಿಕ್ ಪ್ರದೇಶದಲ್ಲಿ ಜುಲೈ 10 ರಂದು ಸಭೆ ಹಾಗೂ ಬೀದಿನಾಟಕ ಪ್ರದರ್ಶನದೊಂದಿಗೆ ಕರ್ನಾಟಕದಲ್ಲಿ ಸಿಪಿಐ(ಎಂ) ಕರೆಯ ಮೇರೆಗೆ ರಾಷ್ಟ್ರೀಯ ಪ್ರಚಾರಾಂದೋಲನ ಆರಂಭವಾಗಿದೆ. ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಸಂಘಟಿಸಿದ್ದ ಈ ಸಭೆಯನ್ನುದ್ದೇಶಿಸಿ ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಸಮಿತಿ ಸದಸ್ಯರಾದ ಆರ್.ಶ್ರೀನಿವಾಸ್ ಹಾಗೂ ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿ.ಜೆ.ಕೆ.ನಾಯರ್ ಮತ್ತಿತರರು ಮಾತನಾಡಿದರು. ಜನರ ಸಮಸ್ಯೆಗಳಿಗೆ ಧ್ವನಿ, ಸಂಕಷ್ಟಗಳಿಗೆ ದನಿ ನೀಡುವ 'ಸೌಗಂಧಿಕಾ ಪುಷ್ಪ' ಎಂಬ ಬೀದಿ ನಾಟಕಕ್ಕೆ ಜನ ಅಪಾರವಾಗಿ ಸ್ಪಂದಿಸುತ್ತಿದ್ದಾರೆ. ನಗರದ ಇತರ ಹಲವೆಡೆ ಇದರ ಪ್ರದರ್ಶನ ಹಾಗೂ ಬಹಿರಂಗ ಸಭೆಗಳು ನಡೆಯುತ್ತಿವೆ. ರಾಜ್ಯದ ಇತರೆಡೆಗಳಿಂದಲೂ ಪ್ರಚಾರಾಂದೋಲನ ಆರಂಭವಾಗಿರುವ ಸುದ್ದಿಗಳು ಬರುತ್ತಿವೆ.

ಸಂವಿಧಾನದ 356ನೇ ಕಲಮಿನ ಬಗ್ಗೆ ಸಿಪಿಐ(ಎಂ)ನ ನಿಲುವು ಬದಲಾಗಿಲ್ಲ

- ಪ್ರಕಾಶ್ ಕಾರಟ್

ಯಾವುದೇ ರಾಜ್ಯದಲ್ಲಿ ರಾಷ್ಟ್ರಪತಿ ಆಳ್ವಿಕೆ ತರುವ ಕುರಿತಾದ ಸಂವಿಧಾನದ 356ನೇ ಕಲಮನ್ನು ಕೈಬಿಡಬೇಕು ಎಂಬ ತನ್ನ ಬಹುಕಾಲದ ಬೇಡಿಕೆಯನ್ನು ಸಿಪಿಐ(ಎಂ) ಕೈಬಿಟ್ಟಿದೆ ಎಂದು ತಮಿಳುನಾಡಿನ ಮುಖ್ಯಮಂತ್ರಿ, ಡಿಎಂಕೆ ಅಧ್ಯಕ್ಷ, ಎಂ.ಕರುಣಾನಿಧಿಯವರು ಮತ್ತೆ ಮತ್ತೆ ಆಪಾದಿಸುತ್ತಿದ್ದಾರೆ. ಕೆಲವು ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ಈ ಆಪಾದನೆ ಮಾಡಿದ್ದ ಅವರು ಈಗ ಡಿಎಂಕೆ ಸಮ್ಮೇಳನದಲ್ಲಿ ಪುನರುಚ್ಚರಿಸಿದ್ದಾರೆ. ತಪ್ಪು ತಿಳುವಳಿಕೆ ಮತ್ತು ಗೊಂದಲವುಂಟು ಮಾಡುವಂತಹ ಇಂತಹ ಹೇಳಿಕೆ ಡಿಎಂಕೆ ಅಧ್ಯಕ್ಷರಿಂದ ಬಂದಿರುವುದು ದುರದೃಷ್ಟಕರ. ಸಹಕಾರವಿರಬೇಕಾದ ಒಂದು ಪ್ರಶ್ನೆಯಲ್ಲಿ ಹೀಗೆ ದಾರಿ ತಪ್ಪಿಸುವ ಆಪಾದನೆಗಳನ್ನು ಹಾಕುವುದು ಸರಿಯಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್‌ಕಾರಟ್ ಹೇಳಿದ್ದಾರೆ. ಅವರು ಕರುಣಾನಿಧಿಯವರ ಹೇಳಿಕೆಗೆ ಸಿಪಿಐ(ಎಂ) ಪರವಾಗಿ ಒಂದು ಪ್ರತ್ಯುತ್ತರ ನೀಡಿ ಸಿಪಿಐ(ಎಂ) ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ಅದು ಹೀಗಿದೆ:

1. 356ನೇ ಕಲಮನ್ನು ಅದರ ಈಗಿರುವ ರೀತಿಯಲ್ಲಿ ರದ್ದು ಮಾಡಬೇಕೆಂದು ಈಗಲೂ ಸಿಪಿಐ(ಎಂ) ಒತ್ತಾಯಿಸುತ್ತಿದೆ. 1964ರಲ್ಲಿ ಪಕ್ಷ ರಚನೆಯಾದಾಗಿನಿಂದ ನಿರಂತರವಾಗಿ ಮುಂದಿಟ್ಟಿರುವ ಬೇಡಿಕೆಯಿದು. ಈ ಕರಾಳ ಕಲಮಿಗೆ ಮೊದಲು ಬಲಿಯಾದದ್ದು ಸಿಪಿಐ(ಎಂ) ಎಂಬುದು ಡಿಎಂಕೆ ಮುಖಂಡರಿಗೆ ಚೆನ್ನಾಗಿ ಗೊತ್ತು. 1959ರಲ್ಲಿ ಕೇರಳದಲ್ಲಿ ಇಎಂಎಸ್ ಸರಕಾರವನ್ನು ಉರುಳಿಸಲು ಇದನ್ನು ಮೊಟ್ಟ ಮೊದಲು ಬಳಸಲಾಯಿತು. ನಂತರ 1968-71ರ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಇದನ್ನು ಎರಡು ಬಾರಿ ನಮ್ಮ ವಿರುದ್ಧ ಬಳಸಲಾಯಿತು. ಈ ಕಲಮನ್ನು ಕೇಂದ್ರದಲ್ಲಿನ ಆಳುವ ಕಾಂಗ್ರೆಸ್ ಪಕ್ಷ, ನಂತರ ಇತರ ಪಕ್ಷಗಳೂ ಹೇಗೆ ದುರುಪಯೋಗಪಡಿಸಿಕೊಂಡಿವೆ ಎಂಬುದರ ಕಹಿ ಅನುಭವ ಡಿಎಂಕೆಯಂತೆ ಸಿಪಿಐ(ಎಂ)ಗೂ ಇದೆ. ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್ರಚಿಸಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ನೀಡುವ ಮೂಲಭೂತ ಪ್ರಶ್ನೆಯಲ್ಲಿ 356ನೇ ಕಲಮಿನ ರದ್ದತಿ ಒಂದು ಮುಖ್ಯ ಬೇಡಿಕೆ.

2. 356ನೇ ಕಲಮನ್ನು ರದ್ದು ಮಾಡುವಾಗ ಇನ್ನೊಂದು ಪ್ರಶ್ನೆ ಏಳುತ್ತದೆ-ಕೆಲವು ರಾಜಕೀಯ ಸನ್ನಿವೇಶಗಳಿಂದಾಗಿ ಎಲ್ಲಾ ಪ್ರಯತ್ನ ನಡೆದಾಗಲೂ ಬಹುಮತವಿರುವ ಒಂದು ಸರಕಾರವನ್ನು ರಾಜ್ಯದಲ್ಲಿ ರಚಿಸಲು ಸಾಧ್ಯವಾಗದಾಗ ಏನು ಮಾಡುವುದು? ರಾಷ್ಟ್ರಪತಿ ಆಳ್ವಿಕೆ ಹಾಕುವ ವಿಧಾನ ಯಾವುದಿರಬೇಕು? ಆಳುವ ಪಕ್ಷದಲ್ಲಿ ವಿಭಜನೆ ಇತ್ಯಾದಿಗಳಿಂದ ಬಹುಮತ ಕಳಕೊಂಡಾಗ ಸರಕಾರ ವಿಸರ್ಜನೆಗೊಂಡು ಆರು ತಿಂಗಳೊಳಗೆ ಮರು ಚುನಾವಣೆ ಅಥವಾ ಒಂದು ತ್ರಿಶಂಕು ವಿಧಾನಸಭೆಯುಂಟಾಗಿ ಯಾವ ಪಕ್ಷ, ಕೂಟವೂ ಸರಕಾರ ರಚಿಸದಾದಾಗ ಹೊಸ ಚುನಾವಣೆಗಳನ್ನು ನಡೆಸುವವರೆಗೆ ರಾಷ್ಟ್ರಪತಿ ಆಳ್ವಿಕೆ ಇರಬೇಕಾಗುತ್ತದೆ ಎಂಬುದನ್ನು ಡಿಎಂಕೆಯೂ ಒಪ್ಪಬೇಕಾಗುತ್ತದೆ. ಆದ್ದರಿಂದ 356ನೇ ಕಲಮಿನ ಈ ಸ್ಥಾನದಲ್ಲಿ ಒಂದು ಸೂಕ್ತ ವ್ಯವಸ್ಥೆ ಇರಬೇಕಾಗುತ್ತದೆ.

3. ಒಕ್ಕೂಟ ಸ್ವರೂಪಕ್ಕೆ, ರಾಜ್ಯಗಳ ಅಧಿಕಾರಗಳಿಗೆ ವಿರುದ್ಧವಾದ ಸಾಂವಿಧಾನಿಕ ಮತ್ತು ಇತರ ಕ್ರಮಗಳನ್ನು ತೆಗೆದು ಹಾಕುವ ಹೋರಾಟವನ್ನು ಕೇವಲ 356ನೇ ಕಲಮನ್ನು ರದ್ದು ಮಾಡುವ ಮಟ್ಟಕ್ಕೆ ಇಳಿಸಲು ಸಾಧ್ಯವಿಲ್ಲ, ರಾಜ್ಯಪಾಲರ ನೇಮಕದ ಸ್ವರೂಪವನ್ನು, ಆ ಸ್ಥಾನದ ಪಾತ್ರವನ್ನೂ ಬದಲಿಸಬೇಕಾಗುತ್ತದೆ. ಡಿಎಂಕೆಗೂ ಈ ಬಗ್ಗೆ ಚೆನ್ನಾಗಿ ಗೊತ್ತಿದೆ. ಈ ಪ್ರಕ್ರಿಯೆಯಲ್ಲಿ ಸಂವಿಧಾನದ ವಿಭಿನ್ನ ಅಂಶಗಳನ್ನು, ಕೇಂದ್ರ-ರಾಜ್ಯ ಸಂಬಂಧಗಳಲ್ಲಿನ ಸಂಪ್ರದಾಯ, ನೀತಿ ನಿಯಮಾವಳಿಗಳನ್ನು ಬದಲಿಸಬೇಕಾಗುತ್ತದೆ.

4. ಕೇಂದ್ರ-ರಾಜ್ಯ ಸಂಬಂಧಗಳ ಪ್ರಶ್ನೆಗಳನ್ನು ಎತ್ತಬೇಕಾದ ವೇದಿಕೆಯಾದ ಅಂತರರಾಜ್ಯ ಮಂಡಳಿಯನ್ನು ಸಂಯುಕ್ತ ರಂಗ ಸರಕಾರ ಪುನರುಜ್ಜೀವನಗೊಳಿಸಿದೆಯೆಂಬುದು ಒಂದು ಸಕಾರಾತ್ಮಕ ಹೆಜ್ಜೆ. ಗೃಹಮಂತ್ರಿಗಳು ಅಧ್ಯಕ್ಷರಾಗಿರುವ ಹಾಗೂ 5 ಮುಖ್ಯಮಂತ್ರಿಗಳಿರುವ ಅಂತರ ರಾಜ್ಯ ಮಂಡಳಿಯ ಸ್ಥಾಯೀ ಸಮಿತಿ 356ನೇ ಕಲಮಿನ ಪ್ರಶ್ನೆಯನ್ನು ಪರಿಶೀಲಿಸಿತು. ಈ ಸ್ಥಾಯೀ ಸಮಿತಿಯಲ್ಲಿ ಸಿಪಿಐ(ಎಂ) ಪ್ರತಿನಿಧಿಯಾಗಿರುವ ಜ್ಯೋತಿ ಬಸುರವರು ಅಂತರ-ರಾಜ್ಯ ಮಂಡಳಿಯ ಶಿಫಾರಸುಗಳಿಗೆ ಒಂದು ಸಂವಿಧಾನ ತಿದ್ದುಪಡಿ ಬೇಕಾಗುತ್ತದೆ, ಅಂದರೆ ಸಂಸತ್ತಿನ ಎರಡೂ ಸದನಗಳಲ್ಲಿ ಮೂರನೇ ಎರಡು ಬಹುಮತ ಬೇಕಾಗುತ್ತದೆ ಎಂದು ಗಮನಿಸಿ ಎಲ್ಲರಿಗೂ ಒಪ್ಪಿಗೆಯಾಗಬಹುದಾದ ಒಂದು ಒಮ್ಮತ ರೂಪಿಸಿ ಸಂವಿಧಾನ ತಿದ್ದುಪಡಿಯನ್ನು ಅಂಗೀಕರಿಸುವಂತಾಗಬೇಕು ಎಂದು ಪ್ರಯತ್ನಿಸಿದೆ. ಹೀಗಾಗಬೇಕಾದರೆ ಈಗಿನ ಹಂತದಲ್ಲಿ 356ನೇ ಕಲಮನ್ನು ಕೈಬಿಡುವ ಬದಲು ಅದನ್ನು ಪರಿಷ್ಕರಿಸಬೇಕು ಎಂಬುದು ಸ್ಪಷ್ಟ.

5. ಸ್ಥಾಯೀ ಸಮಿತಿ ನೀಡಿದ ಪ್ರಸ್ತಾವಗಳೆಂದರೆ 356ನೇ ಕಲಮಿನ ದುರುಪಯೋಗವನ್ನು ಕಷ್ಟಕರಗೊಳಿಸುವುದು. ಮೊದಲನೆಯದಾಗಿ, 356ನೇ ಕಲಮಿನಡಿ ರಾಷ್ಟ್ರಪತಿ ಆಳ್ವಿಕೆಯ ಯಾವುದೇ ಘೋಷಣೆಯನ್ನು ಒಂದು ತಿಂಗಳೊಳಗೆ ಸಂಸತ್ತು ಮೂರನೇ ಎರಡು ಬಹುಮತದಿಂದ ಅನುಮೋದಿಸಬೇಕು. ಅದುವರೆಗೆ ವಿಧಾನ ಸಭೆಯನ್ನು ವಿಸರ್ಜಿಸಲಾಗುವುದಿಲ್ಲ. ಈಗ ಸಾಮಾನ್ಯ ಬಹುಮತದಿಂದ ಸಂಸತ್ತಿನ ಅನುಮೋದನೆ ಸಾಕು ಹಾಗೂ ಇಂತಹ ಅನುಮೋದನೆಯ ಮೊದಲೇ ವಿಧಾನಸಭೆಯನ್ನು ವಿಸರ್ಜಿಸುವ ಅವಕಾಶವಿದೆ. ಎರಡನೆಯದಾಗಿ ಸ್ಥಾಯೀ ಸಮಿತಿಯ ಇನ್ನೊಂದು ಪ್ರಸ್ತಾವವೆಂದರೆ ಕೇಂದ್ರ ಸರಕಾರ ರಾಜ್ಯ ಸರಕಾರದ ವಿರುದ್ಧ 356ನೇ ಕಲಮಿನ ಪ್ರಕಾರ ಕ್ರಮ ಕೈಗೊಳ್ಳಬಯಸಿದರೆ ಆ ಬಗ್ಗೆ ರಾಜ್ಯ ಸರಕಾರಕ್ಕೆ ಕಾರಣ ತಿಳಿಸಬೇಕೆನ್ನುವ (ಶೋಕಾಸ್) ಒಂದು ವಾರದ ನೋಟೀಸನ್ನು ಕೊಡಬೇಕು. 356ನೇ ಕಲಮನ್ನು ಬಳಸಿದರೆ ಶೋಕಾಸ್ ನೋಟೀಸಿನ ಜತೆಗೆ ರಾಜ್ಯ ಸರಕಾರದ ಒಪ್ಪಂದವನ್ನು ಲಗತ್ತಿಸಬೇಕು. ಬೊಮ್ಮಾಯಿ ಕೇಸಿನಲ್ಲಿ ಸುಪ್ರೀಂಕೋರ್ಟ್ 356ನೇ ಕಲಮಿನ ಬಳಕೆ ಸಮರ್ಥನೀಯ ಮತ್ತು ಅದನ್ನು ದುರುಪಯೋಗಪಡಿಸಿದರೆ ವಿಸರ್ಜಿಸಲ್ಪಟ್ಟ ವಿಧಾನಸಭೆ ಮತ್ತು ಚುನಾಯಿತ ಸರಕಾರಗಳನ್ನು ಮತ್ತೆ ಸ್ಥಾಪಿಸಲು ಸಾಧ್ಯ ಎಂದು ಸ್ಪಷ್ಟಪಡಿಸಿದೆ. ಆದ್ದರಿಂದ ಸ್ಥಾಯೀ ಸಮಿತಿ ಸೂಚಿಸಿದ ವಿಧಾನದಿಂದ ಅಗತ್ಯ ಬಿದ್ದಾಗ ಒಂದು ನ್ಯಾಯಾಂಗ ವಿಮರ್ಶೆಗೆ ನೆರವಾಗುತ್ತದೆ.

6. ವಿಳಂಬದಿಂದ ವಿನಾಶಕಾರಿ ಪರಿಣಾಮಗಳಾಗುವಂತಿದ್ದರೆ ಶೋಕಾಸ್ ನೋಟೀಸನ್ನು ಕೊಡಬೇಕೆಂಬ ನಿಯಮವನ್ನು ಮನ್ನಾ ಮಾಡುವ ಅವಕಾಶವಿದೆ. ಡಿಸೆಂಬರ್ 1992ರಲ್ಲಿ ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯ ಧ್ವಂಸದ ಸಮಯದಲ್ಲಿ ಇಂತಹದೊಂದು ಸನ್ನಿವೇಶ ಸೃಷ್ಟಿಯಾಗಿತ್ತು ಎಂಬುದು ಕರುಣಾನಿಧಿಯವರಿಗೆ ಮತ್ತು ಡಿಎಂಕೆಗೂ ಖಂಡಿತಾ ಗೊತ್ತಿದೆ. ಮುಖ್ಯಮಂತ್ರಿ ನ್ಯಾಯಾಲಯದೆದುರು ಗಂಭೀರ ವಚನ ನೀಡಿರುವಾಗ ಚುನಾಯಿತ ಸರಕಾರದ ವಿರುದ್ಧ ತಾನು ಕ್ರಮ ಕೈಗೊಳ್ಳುವಂತಿಲ್ಲ ಎಂದು ನರಸಿಂಹರಾಯರು ನಿಲುವು ತಳೆದರು. ಕೇಂದ್ರದ ಈ ನಿಷ್ಕ್ರಿಯತೆಯ ವಿನಾಶಕಾರಿ ಪರಿಣಾಮಗಳ ಬಗ್ಗೆ ಈಗ ಎಲ್ಲರಿಗೂ ಗೊತ್ತಿದೆ. ದೇಶದ ಐಕ್ಯತೆ ಮತ್ತು ಸಮಗ್ರತೆಗೆ ಬೆದರಿಕೆ ಬರುವ ಅಂತಹ ವಿಶಿಷ್ಟ ಸಂದರ್ಭಗಳನ್ನು ಎದುರಿಸಲು ಈ ಅಂಶ ಇದೆ ಎಂದು ಸಿಪಿಐ(ಎಂ) ಭಾವಿಸುತ್ತದೆ. ಡಿಎಂಕೆಗೆ ಈ ಅಭಿಪ್ರಾಯವಿರಲಿಕ್ಕಿಲ್ಲ.

7. 'ಕೇಂದ್ರ ಸರಕಾರ ರಾಜ್ಯಪಾಲರ ವರದಿ ಅಥವಾ ಬೇರೆ ರೀತಿಯಲ್ಲಿ ಕ್ರಮ ಕೈಗೊಳ್ಳಬಹುದು' ಎಂಬ ಅಂಶ ಮುಂದುವರೆಯಬಹುದು ಎಂಬ ಶಂಕೆ ವ್ಯಕ್ತಪಡಿಸಿದ್ದಾರೆ. ಕೇಂದ್ರ 356ನೇ ಕಲಮನ್ನು ಬಳಸಲು ಅಗತ್ಯವಾದ ವರದಿಯನ್ನು ರಾಜ್ಯಪಾಲರು ಕೊಡದಿದ್ದರೂ ಈ "ಬೇರೆ ರೀತಿಯಲ್ಲಿ" ಎಂಬ ಪದವನ್ನು ಬಳಸಿ ರಾಜ್ಯಪಾಲರನ್ನು ಬದಿಗೊತ್ತಿ ಈ ಕಲಮಿನ ದುರುಪಯೋಗ ಮಾಡಬಹುದು. 1991ರಲ್ಲಿ ತಮಿಳುನಾಡಿನಲ್ಲಿ ಡಿಎಂಕೆ ಸರಕಾರದೊಂದಿಗೆ ಹೀಗೆಯೇ ವರ್ತಿಸಲಾಗಿತ್ತು. ಇದೊಂದು ಗಮನಾರ್ಹ ಅಂಶ. ವಿನಾಶಕಾರಿ ಪರಿಣಾಮಗಳನ್ನು ಕುರಿತಂತೆ ಸೇರಿಸಿದ ಅಂಶದಿಂದಾಗಿ ರಾಜ್ಯಪಾಲರನ್ನು ಸಾಮಾನ್ಯ ಸಂದರ್ಭಗಳಲ್ಲಿ ಬದಿಗೊತ್ತಲು ಬಿಡಬಾರದು. ಅಂತರ ರಾಜ್ಯ ಮಂಡಳಿ ಈ ಬಗ್ಗೆ ಅಂತಿಮ ಶಿಫಾರಸು ಮಾಡುವ ಮೊದಲು ಇದನ್ನು ಚರ್ಚಿಸಬಹುದು.

ಈಗಿನ ರಾಜಕೀಯ ಸನ್ನಿವೇಶದಲ್ಲಿ, ಕೇಂದ್ರದ ಸಂಯುಕ್ತ ರಂಗ ಸರಕಾರದ ಹೆಚ್ಚಿನ ಅಂಗ ಪಕ್ಷಗಳು ರಾಜ್ಯಗಳ ಹಕ್ಕುಗಳ ಬಗ್ಗೆ ಸಂವೇದನಾಶೀಲವಾಗಿರುವಾಗ 356ನೇ ಕಲಮನ್ನು ರದ್ದು ಮಾಡುವುದನ್ನೇ ಮೂಲಭೂತ ಬೇಡಿಕೆಯಾಗಿ ಇಡಬೇಕೇ ಅಥವಾ ಅದರ ದುರುಪಯೋಗವನ್ನು ಗಂಭೀರವಾಗಿ ತಡೆಯಲು ಪ್ರಯತ್ನಿಸುವುದು ಒಳ್ಳೆಯದೇ ಎಂಬ ಬಗ್ಗೆ ಡಿಎಂಕೆ ಮತ್ತು ಕರುಣಾನಿಧಿಯವರನ್ನು ಕೇಳಬೇಕಾಗುತ್ತದೆ ಎನ್ನುತ್ತಾರೆ ಪ್ರಕಾಶ್ ಕಾರಟ್‌ರವರು. ಏಕೆಂದರೆ 356ನೇ ಕಲಮನ್ನು ರದ್ದು ಮಾಡುವ ಬೇಡಿಕೆ ಈಗಿರುವ ವಿವಿಧ ಶಕ್ತಿಗಳ ಬಲಾಬಲಗಳ ಸನ್ನಿವೇಶದಲ್ಲಿ ಸಂಸತ್ತಿನಲ್ಲಿ ಅಂಗೀಕಾರವಾಗುವಂತಹ ಸ್ಥಿತಿಯಿಲ್ಲ. ಆದರೆ ಅದರ ದುರುಪಯೋಗವಾಗದಂತೆ ತಡೆಯುವ ತಿದ್ದುಪಡಿಯನ್ನು ಮೂರನೇ ಎರಡು ಬಹುಮತದಿಂದ ಅಂಗೀಕರಿಸುವ ಸಾಧ್ಯತೆ ಇದೆ. ಆದ್ದರಿಂದ ಈಗ ಈ ಕಲಮಿನ ದುರುಪಯೋಗವನ್ನು ತಡೆಯುವ ತಿದ್ದುಪಡಿ ಒಂದು ಉತ್ತಮ ಹೆಜ್ಜೆ ಎಂದು ಸಿಪಿಐ(ಎಂ)ನ ಅಭಿಪ್ರಾಯ. ಮುಂದೆ ಸಂಸತ್ತಿನಲ್ಲಿ ವಿವಿಧ ಶಕ್ತಿಗಳ ಬಲಾಬಲ ಅನುಕೂಲಕರವಾದಾಗ 356ನೇ ಕಲಮಿನ ಜಾಗದಲ್ಲಿ ಬೇರೆ ಸೂಕ್ತ ಕಲಮನ್ನು ತರುವ ಕ್ರಮವನ್ನು ಕೈಗೊಳ್ಳಬಹುದು.

ಕಾಂಗ್ರೆಸ್ 356ನೇ ಕಲಮಿನ ರದ್ದತಿಯನ್ನು ವಿರೋಧಿಸುತ್ತದೆ. ಸಿಪಿಐ(ಎಂ)ನ ನಿಲುವು ಕಾಂಗ್ರೆಸ್‌ನ ಆ ನಿಲುವಿಗೆ ಅನುಸಾರವಾಗಿ ಇದೆ ಎಂಬ ಕರುಣಾನಿಧಿಯವರ ಭಾವನೆಯನ್ನು ಸರಿಪಡಿಸಬೇಕಾಗಿದೆ ಎಂದೂ ಪ್ರಕಾಶ್ ಕಾರಟ್ ಹೇಳಿದ್ದಾರೆ. ಸಿಪಿಐ(ಎಂ)ನ ನಿಲುವು ಹೇಗೆ ಕಾಂಗ್ರೆಸ್(ಐ) ನಿಲುವಿಗಿಂತ ಭಿನ್ನವಾಗಿದೆ ಎಂಬುದು ಮೇಲಿನ ವಿವರಣೆಯಿಂದ ಸ್ಪಷ್ಟ. ಇತ್ತೀಚೆಗೆ ನಡೆದ ಐದು ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳ ರಾಜ್ಯ ಸರಕಾರಗಳ ಮುಖ್ಯಮಂತ್ರಿಗಳ ಸಭೆ ಕೂಡಾ 356ನೇ ಕಲಮನ್ನು ಕೈಬಿಡಬೇಕೆಂದು ಕೇಳಿಲ್ಲ. ಅದನ್ನು ಸಾಧ್ಯವಾದಷ್ಟು ವ್ಯಾಪಕ ಸಮಾಲೋಚನೆಗಳ ನಂತರ ತಿದ್ದುಪಡಿ ಮಾಡಬೇಕೆಂದು ಕೇಳಿದೆ. ಅಷ್ಟೇ ಅಲ್ಲ, ಕರುಣಾನಿಧಿಯವರು ರಾಜಾಸ್ತಾನದ ಬಿಜೆಪಿ ಮುಖ್ಯಮಂತ್ರಿಗಳ ನಿಲುವನ್ನು ಒಪ್ಪಿದ್ದಾರೆ ಕೂಡಾ. ಬಿಜೆಪಿ ಮುಖ್ಯಮಂತ್ರಿಗಳು ಇಂತಹ ನಿಲುವು ತಳೆಯಲು ಏನು ಕಾರಣ ಎಂದು ಕರುಣಾನಿಧಿಯವರು ಕಂಡು ಹಿಡಿಯಬೇಕು ಎಂದಿರುವ ಪ್ರಕಾಶ್ ಕಾರಟ್‌ರವರು ಈ ಪ್ರಶ್ನೆಯನ್ನು ಕುರಿತಂತೆ ಪರಸ್ಪರ ಸಹಕಾರ ಇರಬೇಕೇ ಹೊರತು ದಾರಿ ತಪ್ಪಿಸುವ ಆಪಾದನೆಗಳನ್ನು ಹಾಕುವುದು ಸರಿಯಲ್ಲ ಎಂದಿದ್ದಾರೆ. ಡಿಎಂಕೆಯ ಉನ್ನತ ಮುಖಂಡರು ಸಾರ್ವಜನಿಕವಾಗಿ ಸಿಪಿಐ(ಎಂ)ನ್ನು ದೂರಿರುವುದು ದುರದೃಷ್ಟಕರ ಎಂದು ಅವರು ಹೇಳಿದ್ದಾರೆ.

ನೆರೆ ಹಾವಳಿ, ಸರಕಾರದ ವೈಫಲ್ಯ........

ಪುಟ 1 ರಿಂದ

ವಾಳಶಾಹಿ ಸರಕಾರಗಳಿಂದ ಅದಕ್ಕೆ ಪರಿಹಾರ ಸಿಗುವುದು ಮಾತ್ರ ದೂರದ ಮಾತು.

ಈ ವರ್ಷದಂತೆಯೇ ಮಲೆನಾಡಿನಲ್ಲಿ ಅಪಾರ ಮಳೆಯಿಂದಾಗಿ ನೇತ್ರಾವತಿ ಮತ್ತಿನ್ನಿತರ ನದಿಗಳೆಲ್ಲ ತುಂಬಿ ಹರಿದು ನದಿ ದಂಡೆಗಳ ಸುತ್ತಿರುವ ಮನೆಗಳನ್ನು ಜಲಮಯಗೊಳಿಸಿ ಸಂದಿಗ್ಧ ಪರಿಸ್ಥಿತಿಯನ್ನುಂಟು ಮಾಡುವ ಪ್ರಸಂಗಗಳು ಯಾವಾಗಾದರೊಮ್ಮೆ ಉಂಟಾಗುತ್ತದೆ. ಈ ವರ್ಷ ಅಂಥ ಪರಿಸ್ಥಿತಿಯುಂಟಾಗಿದೆ. ಇದಕ್ಕೆ ಕಾರಣವನ್ನು ಕಂಡುಹಿಡಿಯಲು ಯಾರೂ ಪ್ರಯತ್ನ ಮಾಡುತ್ತಿಲ್ಲ. ಹಾಗೆ ನೋಡಿದರೆ ದಕ್ಷಿಣ ಕನ್ನಡ ಇಂಥ ಭೀಕರವಾದ, ಅಪಾರ ನಷ್ಟ ಉಂಟುಮಾಡುವ ಪರಿಸ್ಥಿತಿಯನ್ನು ಎದುರಿಸಬೇಕಾದ ಅಗತ್ಯವಿಲ್ಲ. ಎಷ್ಟು ಮಳೆಯಾದರೂ ಮಳೆ ನೀರು ಹರಿದು ಸಮುದ್ರ ಸೇರುವಂತೆ ಮಾಡಲು ಜಿಲ್ಲೆಯಾದ್ಯಂತ ಸಾಕಷ್ಟು ನದಿಗಳಿವೆ. ಆದರೆ ನದಿಗಳ ತಳದಲ್ಲಿ ಮಣ್ಣು, ಉಸುಬು, ಕಲ್ಲುಗಳು ತುಂಬಿವೆ. ಅಲ್ಲಲ್ಲಿ ಅವುಗಳ ಗಡ್ಡೆಗಳೂ ಆಗಿವೆ. ಹೀಗಾಗಿ ಇಪ್ಪತ್ತು ವರ್ಷಗಳ ಹಿಂದೆ ಈಗ ಸುರಿಯುತ್ತಿರುವ ಮಳೆಗಿಂತಲೂ ಹತ್ತಿಪ್ಪತ್ತು ಪಟ್ಟು ಹೆಚ್ಚು ಮಳೆ ಬೀಳುತ್ತಿದ್ದಾಗಿನ ಅಪಾರ ನೀರನ್ನು ಯಾರಿಗೂ ಅಪಾಯವಾಗದ ರೀತಿಯಲ್ಲಿ ಸಮುದ್ರಕ್ಕೆ ಕೊಂಡೊಯ್ದ ನೇತ್ರಾವತಿ ಮೊದಲಾದ ನದಿಗಳಿಗೆ ಹಿಂದಿನಕ್ಕಿಂತ ಕಡಿಮೆ ಬೀಳುವ ನೀರನ್ನು ಸುಗಮವಾಗಿ ಹರಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಈಗ ಇಪ್ಪತ್ತೈದು ಮೂವತ್ತು ಮೊಳದಷ್ಟು ನದಿಯ ಕೆಳೆ ತುಂಬಿಕೊಂಡಿದೆ. ನದಿಯತಳ ತುಂಬಿಕೊಂಡಿರುವುದರಿಂದನೀರು ಹರಿದು ಹೋಗಲು ಅವಕಾಶ ಕಡಿಮೆಯಾಗಿದೆ. ಆ ನೀರು ನದಿಯ ಮೇಲಿನಿಂದ ಹರಿದು ನದಿಯ ದಂಡೆಯನ್ನು ಆವರಿಸಿ ವಿಸ್ತೃತಗೊಳ್ಳುತ್ತದೆ. ಎರಡನೆಯದಾಗಿ ನದಿ ದಂಡೆಗಳಲ್ಲಿ ಮನೆಗಳು ಕಟ್ಟಲ್ಪಟ್ಟಿರುವುದರಿಂದ ಹಿಂದಿನ ಕಾಲದಂತೆ ಮಳೆ ನೀರು ಹರಿದು ಹೋಗಲು ಅನುಕೂಲವಾಗುವಂತೆ ತೋಡುಗಳಿಲ್ಲದಾಗಿದೆ. ಬಯಲು ಪ್ರದೇಶ ಉಳಿದಿಲ್ಲ. ಹೀಗಾಗಿ ನೆರೆ ಹಾವಳಿಯ ಸಮಸ್ಯೆ ಎಲ್ಲೆಡೆ ಎದುರಿಸಬೇಕಾಗಿದೆ. ನದಿ ಹೂಳಿನ ಸಮಸ್ಯೆ ಬರೇ ದಕ್ಷಿಣ ಕನ್ನಡ ಜಿಲ್ಲೆಗಷ್ಟೆ ಸೀಮಿತವಾಗಿಲ್ಲ. ಆ ಸಮಸ್ಯೆ ಇತರ ನದಿಗಳಿಗೂ ಅನ್ವಯವಾಗುತ್ತದೆ. ಹೆಚ್ಚು ಮಳೆ ನೀರು ಸಂಗ್ರಹಿಸುವ ಉದ್ದೇಶದಿಂದ ಕೃಷಿ ಮಂತ್ರಿ ಬೈರೇಗೌಡರು ಕೆರೆಗಳ ಹೂಳು ತೆಗೆಯುವ ಕ್ರಮ ಕೈಗೊಂಡಿದ್ದಾರೆ. ನದಿಗಳ ನೆರೆ ನೀರು ಹರಿದು ಹೋಗಲು ಸಹಾಯವಾಗುವಂತೆ ನದಿಗಳ ಹೂಳು ತೆಗೆಯಲಿಕ್ಕೆ ಪ್ರಯತ್ನ ಮಾಡಿದರೆ ಮಂಗಳೂರು ಉಡುಪಿಗಳಲ್ಲಿ ಅಲ್ಲಿಯ ಜನ ಎದುರಿಸಬೇಕಾದಂಥ ಸಂಕಷ್ಟಕ್ಕೆ ಸ್ವಲ್ಪವಾದರೂ ಪರಿಹಾರ ಸಿಗಬಹುದೇನೋ! ಇದು ರಾಜ್ಯದ ಇತರ ನದಿಗಳಿಗೂ ಅನ್ವಯವಾಗುತ್ತದೆ

ಕೃಷ್ಣಾ ನದಿಯ ಹಿನ್ನೀರಿನ ಪ್ರಶ್ನೆ

ಕೃಷ್ಣಾ-ಘಟಪ್ರಭಾ, ಮಲಪ್ರಭಾ ನದಿಗುಂಟ ಇರುವ ಹಳ್ಳಿಗಳು ಒಂದರ ಮೇಲೊಂದರಂತೆ ಮುಳುಗುತ್ತಿವೆಂಬ ಸುದ್ದಿ ಪ್ರಕಟವಾಗುತ್ತಿದೆ. ಇದಕ್ಕೆಲ್ಲ ಸರಕಾರ ಮತ್ತು ಆಲಮಟ್ಟಿ ಯೋಜನೆಯಡಿಯಲ್ಲಿ ಬರುವ ಹಳ್ಳಿ ಜನರೇ ಜವಾಬ್ದಾರರೆಂದರೆ ತಪ್ಪಾಗಲಾರದು. ದಕ್ಷಿಣ ಕನ್ನಡ ಜಿಲ್ಲೆಯಂತೆ ಮಹಾಪೂರ ಬಿಜಾಪುರ ಜಿಲ್ಲೆಯದ್ದಲ್ಲ. ಅದು ಆಲಮಟ್ಟಿನ ಯೋಜನೆಯಿಂದಾಗಿ ಮುಳುಗಡೆಯಾಗುವ ಹಳ್ಳಿಗಳ ಸಮಸ್ಯೆ. ಮಹಾರಾಷ್ಟ್ರದ ಸಹ್ಯಾದ್ರಿಯಲ್ಲಿ ಹೆಚ್ಚು ಮಳೆಯಾದಾಗ ಮಳೆ ನೀರು ಹರಿದು ಹೋಗಲಿಕ್ಕೆ ಕೃಷ್ಣಾ ನದಿಗೆ ಆಲಮಟ್ಟಿಯಲ್ಲಿ ನಿರ್ಮಿಸಲಾಗುತ್ತಿರುವ ಆಣೆಕಟ್ಟಿಗೆ ಅಡ್ಡಿಯಾಗಿರುವುದರಿಂದ ಆಣೆಕಟ್ಟೆಯ ಹಿನ್ನೀರು ಮುಳುಗಡೆ ಪ್ರದೇಶಕ್ಕೆ ಆವರಿಸಿರುವುದರಿಂದಾಗಿ ನೆರೆಹಾವಳಿ ಉಂಟಾಗಿದೆ. ಉತ್ತಮ ಭೂಮಿ, ಮನೆ ಮಾರು, ದನಕರುಗಳಿಗೆಲ್ಲ ಅಪಾರ ಹಾನಿ ಉಂಟಾಗಿದೆ. 1964 ರಲ್ಲಿ ಕಮ್ಯುನಿಸ್ಟ್ ಪಾರ್ಟಿ ಈ ಯೋಜನೆ ಕೈಗೊಳ್ಳಬೇಕೆಂದು ಉಪವಾಸ ಸತ್ಯಾಗ್ರಹ ಕೈಗೊಂಡು ಯೋಜನೆಯ ಕೆಲಸ ಪ್ರಾರಂಭವಾದಂದಿನಿಂದಲೇ ಆಲಮಟ್ಟಿ ಯೋಜನೆಯಿಂದಾಗಿ ಮುಳುಗಡೆಯಾಗುವ ಹಳ್ಳಿ ಜನರಿಗೆ ಪುನರ್ವಸತಿ ನಿರ್ಮಿಸುವ ಕಾರ್ಯಕೈಗೊಳ್ಳಬೇಕೆಂದು ಅವರಿಗೆ ನ್ಯಾಯಯುತ ಪರಿಹಾರ ಕೊಡಬೇಕೆಂದೂ ಒತ್ತಾಯಿಸುತ್ತಲೇ ಬಂದಿತ್ತು. 1964 ರಲ್ಲಿ 100 ಕೋಟಿ ರೂಪಾಯಿ ಖರ್ಚಿನಿಂದ ನಿರ್ಮಾಣಗೊಂಡು 8-10 ಲಕ್ಷ ಎಕರೆ ಭೂಮಿಗೆ ನೀರು ಪೂರೈಸಬೇಕಾಗಿದ್ದ ಈ ಯೋಜನೆಗೆ ಈಗ 5000 ಕೋಟಿ ಗಿಂತಲೂ ಹೆಚ್ಚು ಹಣ ಖರ್ಚು ಮಾಡಬೇಕಾಗಿದೆ. ಪರಿಹಾರಧನವನ್ನೂ ಹೆಚ್ಚು ಕೊಡಬೇಕಾಗಿದೆ. ಮುಳುಗಡೆಯಾಗಲಿರುವ ಬಹಳಷ್ಟು ಹಳ್ಳಿ ಜನ ಪರಿಹಾರ ಪಡೆದಿದ್ದಾರೆ. ಅದರ ಸದುಪಯೋಗ ಮಾಡಿಕೊಳ್ಳುತ್ತಿದ್ದರೆ ಈಗೆದುರಿಸಬೇಕಾಗಿರುವ ಸಂಕಷ್ಟಗಳನ್ನೆದುರಿಸಬೇಕಾಗುತ್ತಿರಲಿಲ್ಲವೆಂದು ಕಾಣುತ್ತದೆ. ಸರಕಾರದ ಅಸಡ್ಡೆತನದಿಂದ ನಿರ್ಲಕ್ಷ್ಯದಿಂದಾಗಿ ಜನರ ಒತ್ತಡಗಳ ಮಧ್ಯೆಯೂ ಆಲಮಟ್ಟಿ ಯೋಜನೆಯತ್ತ ಗಮನ ಹರಿಸದೆ ಅನ್ಯಾಯವೆಸಗುತ್ತಾ ಬಂದಿದ್ದಾರೆ. ಬಚಾವತ್ ಯೋಜನೆಯ ಪ್ರಕಾರ 2000 ಇಸವಿಯೊಳಗೆ ನಮ್ಮ ಪಾಲಿನ ನೀರನ್ನುಪಯೋಗ ಮಾಡಿಕೊಳ್ಳದಿದ್ದರೆ ನಮ್ಮ ಹಕ್ಕನ್ನು ಬಿಟ್ಟುಕೊಟ್ಟಂತಾಗುತ್ತದೆ. ರೈತರಿಗೆ ಅಪಾರ ಅನ್ಯಾಯವೆಸಗಿದಂತಾಗುತ್ತದೆಂಬಂಶದ ಅರಿವಿದ್ದಾಗ್ಯೂ ಬಂಡವಾಳಶಾಹಿ ಸರಕಾರ ಈ ಮಹಾ ನೀರಾವರಿ ಯೋಜನೆಯತ್ತ ಗಮನ ಹರಿಸಲು, ಮುಳುಗಡೆ ಪ್ರದೇಶದ ಜನರಿಗೆ ಪರಿಹಾರವಾಗಿ ಪುನರ್ವಸತಿ ವ್ಯವಸ್ಥೆ ಮಾಡಿಕೊಡಲು ಮುವತ್ತು ವರ್ಷಗಳಿಂದಲೂ ಹಿಂದೇಟು ಹಾಕುತ್ತಿರುವುದನ್ನು ಕಂಡ ಮುಳುಗಡೆ ಪ್ರದೇಶದ ಜನ ಈ ಕಾಂಗ್ರೆಸ್ ಮತ್ತು ಜನತಾಪಕ್ಷ-ಜನತಾದಳದ ಸರಕಾರದ ಕರ್ತವ್ಯದಕ್ಷತೆಯ ಮೇಲಿನ ಅಪನಂಬಿಕೆಯಿಂದ ತಮ್ಮ ಗ್ರಾಮ, ಹಿರಿಯರ ಮನೆ, ತಮ್ಮ ಹೊಟ್ಟೆಗೆ ಅನ್ನ ಕೊಡುತ್ತಿದ್ದ ಭೂಮಿ, ಮಕ್ಕಳಿಗೆ ಹಾಲು ಕುಡಿಸುತ್ತಿದ್ದ ದನ, ಆಡುಕುರಿಗಳನ್ನು ಬಿಟ್ಟು ಹೋಗಲು ಹಿಂದೇಟು ಹಾಕುತ್ತಲೇ ಬಂದಿದ್ದರು. ಪರಿಹಾರ, ಪುನರ್ವಸತಿ ಹೆಸರಿನಲ್ಲಿ ಕೋಟ್ಯಾವಧಿ ರೂಪಾಯಿ ಪೋಲಾಗಿದೆ. ಸರಕಾರದ ಉದಾಸೀನ ಮನೋಭಾವದಿಂದಾಗಿ ಪುನರ್ವಸತಿ ಕೆಲಸಕ್ಕೆ ಅಡ್ಡಿ ಉಂಟು ಮಾಡಿದರು. ಈಗಲೂ ಮಾಡುತ್ತಿದ್ದಾರೆ. ಆಲಮಟ್ಟಿ ಯೋಜನೆಯ ಕುರಿತು ಮುಳುಗಡೆ ಜನರ ಸ್ಥಳಾಂತರದ ಕುರಿತು, ಅವರ ಪುನರ್ವಸತಿ ಕುರಿತು ಸರಕಾರ ದೃಢ ನಿಲುಮೆ ತಾಳಲಿಕ್ಕೆ ಹಿಂದೇಟು ಹಾಕುತ್ತಿರುವುದರಿಂದಲೇ ಕೃಷ್ಣಾ ನದಿಗುಂಟ ಇರುವ ಹಳ್ಳಿಗಳು ನೆರೆ ನೀರಿನಿಂದ ಮುಳುಗಡೆಯಾಗಿ ಅಲ್ಲಿಯ ಜನ ನರಕಯಾತನೆ, ಅಪಾರ ನಷ್ಟ ಅನುಭವಿಸಬೇಕಾದ ಪರಿಸ್ಥಿತಿ ಉಂಟಾಗಿದೆ. ಮೇಲ್ವರ್ಗದ ಪಕ್ಕಾ ಮನೆಗಳಿರುವವರ ಕುರಿತಷ್ಟೆ ಸರಕಾರ ಪರಿಹಾರದ, ಪುನರ್ವಸತಿಯ ವಿಚಾರ ಮಾಡುತ್ತಿದೆಯಲ್ಲದೆ ಮನೆ, ಮಠ ಇಲ್ಲದ ಹೊಲ ಇಲ್ಲದ, ಕೃಷಿ ಕಾರ್ಮಿಕರ ಬಡಜನರ ಕುರಿತು ಸರಕಾರ ಏನೂ ಚಿಂತನೆ ನಡೆಸಿಲ್ಲ. ಅವರು ನಿರಾಶ್ರಿತರಾಗಿ ದಿಕ್ಕಾಪಾಲಾಗುವ ಸಂದಿಗ್ಧ ಪರಿಸ್ಥಿತಿ ಉಂಟಾಗಿದೆ.

ಆಲಮಟ್ಟಿ ಆಣೆಕಟ್ಟಿನ ಎತ್ತರ ಹೆಚ್ಚುತ್ತಿರುವಂತೆ ಹಿನ್ನೀರಿನ ಪ್ರತಾಪ ಹೆಚ್ಚಾಗುತ್ತದೆ. ಹಿನ್ನೀರಿನಿಂದಾಗಿ ಹೆಚ್ಚು ಪ್ರದೇಶ ಮುಳುಗಡೆಯಾಗುತ್ತದೆ. 2000 ಇಸವಿ ತುಂಬಲು ಇನ್ನೂ ಮೂರೇ ವರ್ಷ ಇರುವುದರಿಂದ ಜನರ ಒತ್ತಡಕ್ಕೆ ಮಣಿದು ಸರಕಾರ ಆಣೆಕಟ್ಟಿನ ಕೆಲಸಕ್ಕೆ ಹೆಚ್ಚು ಗಮನ ಹರಿಸುತ್ತಿರುವುದರಿಂದ ಮುಳುಗಡೆ ಪ್ರದೇಶದ ಜನ ಸರಕಾರದ ಉದ್ದೇಶದ ಕುರಿತು ಎಷ್ಟೇ ಸಂಶಯ, ಅಸಮಾಧಾನ ವ್ಯಕ್ತಮಾಡಿದರೂ ಕೂಡ ಪುನರ್ವಸತಿ ನಿವೇಶನಗಳನ್ನು ಆಶ್ರಯಿಸುವುದು ಅತ್ಯಗತ್ಯ. ಪುನರ್ವಸತಿಗೆ ಯೋಗ್ಯವಾದ, ಎಲ್ಲಾ ಅನುಕೂಲತೆಗಳಿರುವ ಹೊಸ ನಗರಗಳನ್ನು ಕೂಡಲೇ ನಿರ್ಮಿಸಬೇಕು, ಅವರಿಗೆ ಭೂಮಿ, ಉದ್ಯೋಗ ಸಿಗುವಂತೆ ವ್ಯವಸ್ಥೆ ಮಾಡಬೇಕು. ಆಡಳಿತೆಯನ್ನು ಚುರುಕುಗೊಳಿಸಿ ಜನರೆಲ್ಲ ಪುನರ್ವಸತಿ ಪ್ರದೇಶಗಳಿಗೆ ಹೋಗಬೇಕೆಂಬ ಆಕರ್ಷಣೆ ಬರುವ ರೀತಿಯಲ್ಲಿ ವರ್ತಿಸಬೇಕು. ಹಾಗೆಯೇ ಮುಳುಗಡೆ ಪ್ರದೇಶದ ಜನರು ಕೂಡ ತಮ್ಮನ್ನು ತಪ್ಪುದಾರಿಗೆಳೆಯುವ ಪುಢಾರಿಗಳಿಂದ ದೂರ ಇರಬೇಕು. ಸರಕಾರದ ಮೇಲೆ ಒತ್ತಾಯ ತರಬೇಕು, ಪುನರ್ವಸತಿ ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳಲಿಕ್ಕೆ ಹೋರಾಡಬೇಕು. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಇವರಿಗೆ ಎಲ್ಲ ರೀತಿಯ ಸಹಾಯ ಮಾಡಬೇಕು. ನೆರೆ ಹಾವಳಿಗೆ ತುತ್ತಾಗಿ ಅಸುನೀಗಿದವರಿಗೆಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಸಂತಾಪ ವ್ಯಕ್ತಮಾಡುತ್ತದೆ. ಆಸ್ತಿ ಮನೆ ಮಠಗಳನ್ನು ಕಳಕೊಂಡವರಿಗೆ ಸಹಾನುಭೂತಿ ವ್ಯಕ್ತಪಡಿಸುತ್ತದೆ.

ಸ್ವಚ್ಛತಾ ಕಾರ್ಯ ಖಾಸಗಿಯವರಿಗೆ

ಸಿಪಿಐ(ಎಂ) ಹಾಗೂ ಸಿಐಟಿಯು ವಿರೋಧ

ತುಮಕೂರು: ನಗರದ ಸ್ವಚ್ಛತಾ ಕಾರ್ಯವನ್ನು ಟೆಂಡರ್ ಮುಖಾಂತರ ಖಾಸಗಿಯವರಿಗೆ ನೀಡುವುದಾಗಿ ಪ್ರಕಟಿಸಿರುವ ತುಮಕೂರು ನಗರಸಭೆಯ ನೂತನ ಆಯುಕ್ತರ ಹೇಳಿಕೆಯನ್ನು ಸಿಪಿಐ(ಎಂ) ಹಾಗೂ ಸಿಐಟಿಯು ಜಿಲ್ಲಾ ಸಮಿತಿಗಳು ಖಂಡಿಸಿವೆ.

ಕಳೆದ ಸುಮಾರು ವರ್ಷಗಳಿಂದ ದಿನಗೂಲಿಗಳಾಗಿ ಕೆಲಸ ಮಾಡುತ್ತಿದ್ದ ಪೌರ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿ ಸ್ವಚ್ಛತಾ ಕಾರ್ಯವನ್ನು ಖಾಸಗಿಯವರಿಗೆ, ನೀಡುವ ಕ್ರಮ ಕಾರ್ಮಿಕ ವಿರೋಧಿಯೆಂದು ಸಿಪಿಐ(ಎಂ) ಮತ್ತು ಸಿಐಟಿಯು ಖಂಡಿಸಿ ಹಿಂದಿನ ಕೆಲಸದಿಂದ ತೆಗೆದುಹಾಕಿರುವ ಕಾರ್ಮಿಕರಿಗೆ ಆದ್ಯತೆ ನೀಡಿ ಕೆಲಸಕ್ಕೆ ಕೂಡಲೇ ನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸಿದೆ. ತಪ್ಪಿದಲ್ಲಿ ಈ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಸಿಪಿಐ(ಎಂ) ಹಾಗೂ ಸಿಐಟಿಯು ನಗರ ಸಭೆಯನ್ನು ಎಚ್ಚರಿಸಿದೆ.

ಸ್ಥಳ ತನಿಖೆಗೆ ಬಾರದ ನಗರ ಸಭಾ ಅಧ್ಯಕ್ಷರು ಹಾಗೂ ಆಯುಕ್ತರು, ಬೇಸತ್ತ ಜನ

ಜುಲೈ 2 ರಂದು ನಗರದ ಕೊಳಚೆ ಪ್ರದೇಶಗಳಲ್ಲಿ ಒಂದಾದ ನಜರಾಬಾದ್, ವೀರಸಾಗರ, ಜಯನಗರ ಮುಂತಾದ ಪ್ರದೇಶಗಳಿಗೆ 2 ದಿನಗಳೊಳಗಾಗಿ ಭೇಟಿ ನೀಡಿ ಸ್ಥಳ ಪರಿಶೀಲಿಸುವುದಾಗಿ ಆಯುಕ್ತರು ಹಾಗೂ ಅಧ್ಯಕ್ಷರು ನೀಡಿದ ಆಶ್ವಾಸನೆಯನ್ನು ನಂಬಿದ ಜನರು ತಮ್ಮ ತಮ್ಮ ಸಮಸ್ಯೆಯನ್ನು ತೋಡಿಕೊಳ್ಳಲು ಕಾದು ಅಧ್ಯಕ್ಷರು ಹಾಗೂ ಆಯುಕ್ತರು ಬಾರದಿದ್ದನ್ನು ಕಂಡು ನಿರಾಶರಾಗಿದ್ದಾರೆ. ಆಯುಕ್ತರು ಹಾಗೂ ಅಧ್ಯಕ್ಷರು ಎಂದು ಬರುತ್ತಾರೆಂಬ ನಿರೀಕ್ಷೆಯಲ್ಲಿ ಮುಂದಿನ ಹಂತದ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ.

ದಾವೆ ವಾಪಸ್ಸಿಗಾಗಿ, ವಿದ್ಯುತ್ ದರ ವಿರೋಧಿಸಿ

ಕೂಲಿಕಾರರ ಮೆರವಣಿಗೆ

ಧಾರವಾಡ : ಬ್ಯಾಡಗಿ ತಾಲ್ಲೂಕಿನ ಕಾಸಂಬಿ, ಕಾಗಿನೆಲೆ, ಮುತ್ತೂರು, ಗುಂಡೇನಹಳ್ಳಿ, ಛತ್ರ, ಮಾಸಣಗಿ, ಕೆಂಗೊಂಡ, ಕೆರವಡಿ, ತಡಸ, ತಿಣಕಾಪುರ, ಚಿಕ್ಕಬಾಸೂರು ಮೊದಲಾದ ಗ್ರಾಮಗಳ ನೂರಾರು ಜನ ಭೂ ಹೀನ ಕೃಷಿಕೂಲಿಕಾರರು ಮತ್ತು ಬಡ ರೈತರು ಜುಲೈ 7 ರಂದು ಮೆರವಣಿಗೆ ನಡೆಸಿ, ಬಗರ್‌ಹುಕುಂ ಸಾಗುವಳಿ ಪ್ರಕರಣಗಳನ್ನು ಸಕ್ರಮ ಗೊಳಿಸಬೇಕೆಂದು ಹಾಗೂ ಬಗರ್‌ಹುಕುಂ ಸಾಗುವಳಿದಾರರ ಮೇಲೆ ದಾಖಲು ಮಾಡಿಕೊಳ್ಳಲಾದ ಪ್ರಕರಣ ಗಳನ್ನು ಹಿಂತೆಗೆದುಕೊಳ್ಳಬೇಕೆಂದು ರಾಜ್ಯದ ಮುಖ್ಯಮಂತ್ರಿಯನ್ನು ಒತ್ತಾಯಿಸುವ ಮನವಿಯನ್ನು ತಹಶೀಲ್ದಾರರಿಗೆ ಸಲ್ಲಿಸಿದರು.

ಪ್ರದರ್ಶನಕಾರರನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಸ್ವಾಮಿಯವರು ರಾಜ್ಯ ಸರಕಾರ ವಿದ್ಯುತ್ ದರಗಳನ್ನು ಹೆಚ್ಚಿಸುವ ಮೂಲಕ ಮತ್ತು ಪಡಿತರ ವಿತರಣೆಯಲ್ಲಿ ಒದಗಿಸುವ ಆಹಾರ ಧಾನ್ಯಗಳ ಕಡಿತ ಮಾಡುವ ಮೂಲಕ ರಾಜ್ಯದ ಜನತೆಗೆ ಭಾರೀ ಅನ್ಯಾಯಮಾಡಿದೆ ಎಂದು ಟೀಕಿಸಿದರು.

ಸಿಪಿಐ(ಎಂ) ಪಕ್ಷದ ಮುಖಂಡ ಸಿ.ಆರ್.ಭಟ್ ಮಾತನಾಡಿ ಪಕ್ಷವು ಜುಲೈ 15 ರಿಂದ 30 ರ.ವರೆಗೆ ನಡೆಸಲಿರುವ ರಾಷ್ಟ್ರೀಯ ಪ್ರಚಾರಾಂದೋಲನವನ್ನು ಯಶಸ್ವಿಗೊಳಿಸಬೇಕೆಂದರು. ಸಹದೇವಪ್ಪ, ಸುಲ್ತಾನ್ ಸಾಬ್, ಹಾವೇರಿ, ಗುಡ್ಡಪ್ಪ ಮುದಿಗೌಡ್ರ, ಹಕ್ಕಲಗೌಡ ಪಾಟೀಲ್, ಮುರಾರಿ ಡಾಂಗೆ, ಮಹೇಶ್ ಪತ್ತಾರ ಮೊದಲಾದವರು ಮೆರವಣಿಗೆಯ ನೇತೃತ್ವವಹಿಸಿದ್ದರು.

ಕರ್ನಾಟಕದಲ್ಲಿ ಕಳೆದವಾರ

ಜುಲೈ 10

❒ ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಾಗಲಿರುವ ಪ್ರದೇಶಗಳ ಪರಿಶೀಲನೆಯೊಂದಿಗೆ ಪರಿಹಾರ ಕಾರ್ಯಕ್ಕೆ ಸೇನೆ ಸಜ್ಜು.

❒ ದಕ್ಷಿಣ ಕನ್ನಡದಲ್ಲಿ ಸತತ ಮಳೆ. ಇಬ್ಬರ ಬಲಿಯೊಂದಿಗೆ ಮುಂಗಾರಿನ ಪ್ರಕೋಪಕ್ಕೆ ಬಲಿಯಾದವರ ಸಂಖ್ಯೆ 8.

❒ ಕರಾವಳಿಯಲ್ಲಿ ಕಡಲ ಕೊರೆತ ತಡೆಗೆ 50 ಲಕ್ಷ ರೂ. ಬಿಡುಗಡೆ ಮಾಡಿರುವುದಾಗಿ ಬಂದರು ಮತ್ತು ಮೀನುಗಾರಿಕೆ ರಾಜ್ಯ ಸಚಿವರು.

ಜುಲೈ 11

❒ ಚಿಕ್ಕಬಳ್ಳಾಪುರದ ಶಾಸಕ ಎಂ.ಶಿವಾನಂದ ಜನತಾದಳದ ಸಹಸದಸ್ಯತ್ವ ಬಿಟ್ಟು, ರಾಜ್ಯ ಸರಕಾರಕ್ಕೆ ನೀಡಿರುವ ಬೆಂಬಲವನ್ನು ತಾನು ವಾಪಸು ಪಡೆಯುವುದಾಗಿ ಪ್ರಕಟಣೆ. ಲೋಕಶಕ್ತಿ ಸೇರುವ ವದಂತಿ.

❒ ಮೈಸೂರಿನಲ್ಲಿ ಉದ್ಬೂರು ಘಟನೆಯ ಪ್ರತಿಧ್ವನಿ ಯಾಗಿ ಹಿಂಸಾಚಾರ-ನಿಷೇದಾಜ್ಞೆ ಜಾರಿ.

ಜುಲೈ 12

❒ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಸತ್ತವರ ಸಂಖ್ಯೆ 14 ಕ್ಕೆ ಏರಿಕೆ. ಇದುವರೆಗೆ ಒಟ್ಟು 15 ಲಕ್ಷ ರೂ. ನಷ್ಟದ ಅಂದಾಜು.

❒ ಮುಂಬೈಯಲ್ಲಿನ ದುಷ್ಕೃತ್ಯದಿಂದ ಕಲ್ಬುರ್ಗಿಯಲ್ಲಿ ಉದ್ರಿಕ್ತ ಸ್ಥಿತಿ-ಮಹಾರಾಷ್ಟ್ರ ಸಾರಿಗೆ ಬಸ್‌ಗೆ ಬೆಂಕಿ.

ಜುಲೈ 13

❒ ಕುಖ್ಯಾತ ಕಾಡುಗಳ್ಳ ವೀರಪ್ಪನ್‌ನಿಂದ 9 ಅರಣ್ಯ ಸಿಬ್ಬಂದಿ ಅಪಹರಣ. ತನಗೆ "ಕ್ಷಮಾದಾನ" ನೀಡದಿದ್ದರೆ ಎಲ್ಲ ಒತ್ತೆಯಾಳುಗಳನ್ನು ಕೊಲ್ಲುವ ಬೆದರಿಕೆ.

❒ ರಾಜ್ಯದಲ್ಲಿ 85 ತಾಲ್ಲೂಕುಗಳಲ್ಲಿ ಕ್ರೀಡಾಂಗಣಕ್ಕೆ ಮಂಜೂರಾತಿ ನೀಡಿದ್ದು, 25 ಸದ್ಯದಲ್ಲೇ ಪೂರ್ಣಗೊಳ್ಳಲಿವೆ ಎಂದು ಕ್ರೀಡಾ ಮತ್ತು ಯುವಜನ ಸೇವೆ ಸಚಿವರು.

ಜುಲೈ 14

❒ ಕಾಡುಗಳ್ಳ ವೀರಪ್ಪನ್ ಷರತ್ತಿನಂತೆ ಆತನ ಶರಣಾಗತಿಯನ್ನು ಒಪ್ಪಿಕೊಂಡು ಜೀವ ರಕ್ಷಣೆ ಕೊಡಲು ರಾಜ್ಯ ಸರಕಾರ ಸಮ್ಮತಿ.

ಜುಲೈ 15

❒ ಆಲಮಟ್ಟಿ ಹಿನ್ನೀರು ಇಳಿತ-ಜನಸಂಚಾರ ಸಹಜ ಸ್ಥಿತಿಗೆ ಬರಲಾರಂಭ.

❒ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 80 ಸಾವಿರ ನೌಕರರಿಗೆ ಜನವರಿ1, 1996 ರಿಂದ ಅನ್ವಯವಾಗುವಂತೆ ವೇತನ ಪರಿಷ್ಕರಣವನ್ನು ಜಾರಿ ಮಾಡಲು ರಾಜ್ಯ ಸರಕಾರ ತಾತ್ವಿಕವಾಗಿ ಒಪ್ಪಿದೆಯೆಂದು ಸಾರಿಗೆ ಸಚಿವರು.

ಜುಲೈ 16

❒ ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ ಧರ್ಮಸಿಂಗ್ ಭಾರಿ ಬಹುಮತದಿಂದ ಆಯ್ಕೆ.

❒ ಮುಂಬೈ ಘಟನೆಯನ್ನು ಪ್ರತಿಭಟಿಸಿ ರಾಯಚೂರು ಬಂದ್. ಅಲ್ಲಲ್ಲಿ ಹಿಂಸಾತ್ಮಕ ಘಟನೆಗಳು.

ಸರಕಾರಿ ಆಸ್ಪತ್ರೆ ಮುತ್ತಿಗೆ: ಡಿವೈಎಫ್ಐ ಕಾರ್ಯಕರ್ತರ ಬಂಧನ

ಮಳವಳ್ಳಿ: ಇಲ್ಲಿನ ಸರಕಾರಿ ಆಸ್ಪತ್ರೆಯ ಅವ್ಯವಸ್ಥೆಯ ವಿರುದ್ಧ ಪ್ರತಿಭಟನೆ ನಡೆಸುವ ಸಲುವಾಗಿ ಜುಲೈ 8 ರಂದು ಆಸ್ಪತ್ರೆಗೆ ಮುತ್ತಿಗೆ ಹಾಕಲೆತ್ನಿಸಿದ ಡಿವೈಎಫ್ಐ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ತಾಲ್ಲೂಕು ಮಟ್ಟದ ಆಸ್ಪತ್ರೆಯಾಗಿದ್ದರೂ ಸಹ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆ ಜೊತೆಗೆ ಔಷಧಿ, ವೈದ್ಯರು,ಸಿಬ್ಬಂದಿ ಕೊರತೆಯಿಂದಾಗಿ ಹಲವಾರು ವರ್ಷಗಳಿಂದ ಅವ್ಯವಸ್ಥೆಯ ಆಗರವಾಗಿದ್ದರೂ ಸರಕಾರ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಆರೋಪಿಸಿ ಈ ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಇಲ್ಲಿನ ಬಸ್ ನಿಲ್ದಾಣದಿಂದ ಮೆರವಣಿಗೆ ಹೊರಟ ಕಾರ್ಯಕರ್ತರು ಸರಕಾರಿ ಆಸ್ಪತ್ರೆ ತಲುಪುತ್ತಿದ್ದಂತೆ ಪೋಲೀಸರು ಆಸ್ಪತ್ರೆ ಬಳಿ ಬಿಡದಂತೆ ತಡೆಗಟ್ಟಿದರು. ನಂತರ ನಿಂತ ಸ್ಥಳದಲ್ಲೇ ತಮ್ಮ ಪ್ರತಿಭಟನಾ ಭಾಷಣ ಮಾಡಿದ ಡಿವೈಎಫ್ಐ ನ ತಾಲ್ಲೂಕು ಅಧ್ಯಕ್ಷರಾದ ಟಿ.ಹೆಚ್.ಆನಂದ್‌ರವರು ಇಲ್ಲಿನ ಸರಕಾರಿ ಆಸ್ಪತ್ರೆಯು ಹಲವಾರು ವರ್ಷಗಳಿಂದ ಅವ್ಯವಸ್ಥೆಯಿಂದ ನರಳುತ್ತಿದ್ದರೂ ತಾಲ್ಲೂಕಿನ ಇಬ್ಬರು ಸಚಿವರು ಈ ಬಗ್ಗೆ ಗಮನ ಹರಿಸದಿರುವುದನ್ನು ಖಂಡಿಸಿದರು.

ಕಾರ್ಯದರ್ಶಿಯಾದ ಎನ್.ಎಲ್. ಭರತ್‌ರಾಜ್ ಅವರು ಮಾತನಾಡಿ ಪ್ರಾಣಿಗಳ ವಾಸಕ್ಕೂ ಯೋಗ್ಯವಲ್ಲದ ಆಸ್ಪತ್ರೆಯ ಸುತ್ತಮುತ್ತ ಹೊಲಸು ಕೊಳಕಿನ ರಾಶಿಯನ್ನು ಅಧಿಕಾರಿಗಳು ಕಂಡು ಕಾಣದಂತಿರುವುದೂ ಹಾಗೂ ಆಸ್ಪತ್ರೆಯಲ್ಲಿ ಅಗತ್ಯ ಔಷಧಿ ಚಿಕಿತ್ಸೆ ದೊರೆಯದಿರುವ ಕ್ರಮವನ್ನು ಖಂಡಿಸಿದರು.

ಸಿಪಿಐ(ಎಂ) ತಾಲ್ಲೂಕು ಕಾರ್ಯದರ್ಶಿಯಾದ ಜಿ.ರಾಮಕೃಷ್ಣ ಅವರು ಮಾತನಾಡಿ, 2000 ಇಸವಿಯೊಳಗೆ ಎಲ್ಲಾ ಗ್ರಾಮಗಳಿಗೂ ಆಸ್ಪತ್ರೆ ನೀಡುವುದಾಗಿ ಬೊಬ್ಬೆ ಹೊಡೆಯುತ್ತಿರುವ ಸರ್ಕಾರ ಆಸ್ಪತ್ರೆಗಳ ದುರಾವಸ್ಥೆಯ ಬಗ್ಗೆ ನಿರ್ಲಕ್ಷ್ಯತಾಳಿರುವುದು ನಾಚಿಕೇಗೇಡು ಎಂದರು. ಇಲ್ಲಿನ ಆಸ್ಪತ್ರೆಗಳ ಬಗ್ಗೆ ನಂಬಿಕೆ ಇಲ್ಲದೆ ಅಮೆರಿಕಾಕ್ಕೆ ಚಿಕಿತ್ಸೆಗೆಂದು ಹೋಗುವ ಮುಖ್ಯಮಂತ್ರಿಗಳಿಗೆ ಜನರ ಆರೋಗ್ಯದ ಬಗ್ಗೆ ಕಾಳಜಿ ಇಲ್ಲ ಎಂದು ಟೀಕಿಸಿದರು.

ನಂತರ ಆಸ್ಪತ್ರೆಗೆ ಮುತ್ತಿಗೆ ಹಾಕಲು ಯತ್ನಿಸುತ್ತಿದ್ದಂತೆ ಸುಮಾರು 50 ಕ್ಕೂ ಹೆಚ್ಚು ಮಂದಿ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಬಂಧಿತರಲ್ಲಿ ಮೂವರು ಮಹಿಳೆಯರು ಇದ್ದರು. ಆಸ್ಪತ್ರೆಯ ಸುತ್ತ ಹೆಚ್ಚಿನ ಪೋಲೀಸರ ಬಂದೋಬಸ್ತ್ ಹಾಕಲಾಗಿತ್ತು. ಈ ಸಂದರ್ಭದಲ್ಲಿ ವೈದ್ಯಾಧಿಕಾರಿಗಳಿಗೆ ಮನವಿಯೊಂದನ್ನು ಸಲ್ಲಿಸಿದ ಪ್ರತಿಭಟನಾಕಾರರು ಪ್ರತಿ ಗ್ರಾಮ ಪಂಚಾಯಿತಿಗೊಂದು ಪ್ರಾಥಮಿಕ ಆರೋಗ್ಯ ಘಟಕ, ಪ್ರತಿ ಹಳ್ಳಿಗೆ ಆರೋಗ್ಯ ಕಾರ್ಯಕರ್ತೆಯರ ನೇಮಕ ಮುಂತಾದ ಹಲವು ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿದರು. ಮನವಿ ಸ್ವೀಕರಿಸಿದ ವೈದ್ಯಾಧಿಕಾರಿಗಳು ಈ ಮನವಿಯನ್ನು ಸರಕಾರಕ್ಕೆ ತಲುಪಿಸುವುದಾಗಿ ತಿಳಿಸಿದರು.

ಧರಣಿ ಸತ್ಯಾಗ್ರಹಕ್ಕೆ ಅಡ್ಡಿ ಎಸ್‌ಎಫ್ಐ ಖಂಡನೆ

ಮಂಡ್ಯ: ಎಸ್‌ಎಫ್‌ಐ ರಾಜ್ಯ ಸಮಿತಿಯ ಕರೆಯ ಮೇರೆಗೆ ಶಿಕ್ಷಣದ ವ್ಯಾಪಾರೀಕರಣ ವಿರೋಧಿಸಿ ಎಸ್‌ಎಫ್‌ಐ ನಿಂದ ನಡೆಯಬೇಕಾಗಿದ್ದ ಧರಣಿ ಸತ್ಯಾಗ್ರಹ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ಅಪ್ರಜಾಸತ್ತಾತ್ಮಕ ಕ್ರಮವನ್ನು ಎಸ್‌ಎಫ್‌ಐ ಜಿಲ್ಲಾ ಸಮಿತಿ ಬಲವಾಗಿ ಖಂಡಿಸಿದೆ.

ಆಡಳಿತ ಮಂಡಳಿಯಿಂದ ಪ್ರಚೋದಿತರಾದ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರಂತಿದ್ದ ಹಲವರು ಅಭಿನವ ಭಾರತಿ ಶಿಕ್ಷಣ ಸಂಸ್ಥೆಯ ಮುಂದೆ ಧರಣಿ ನಡೆಯಬೇಕಾಗಿದ್ದ ಸ್ಥಳಕ್ಕಾಗಮಿಸಿ ಅರೆ ಫ್ಯಾಸಿಸ್ಟ್ ರೀತಿಯಲ್ಲಿ ಅಡ್ಡಿಪಡಿಸಿದರು.

ಬೆಳಿಗ್ಗೆ ಶಾಮಿಯಾನ ಹಾಕಲು ಆರಂಭಿಸುತ್ತಿದ್ದಂತೆಯೇ ಶಾಮಿಯಾನವನ್ನು ಬಿಸಾಡಿದ ಅವರು ಎಸ್‌ಎಫ್‌ಐ ಕಾರ್ಯಕರ್ತರೊಂದಿಗೆ ವಾಗ್ವಾದಕ್ಕಿಳಿದರು. ಇಲ್ಲಿ ಧರಣಿ ಮಾಡಲು ನಾವು ಬಿಡುವುದಿಲ್ಲ, ಇದು ಹಿಂದುಗಳ ಸಂಸ್ಥೆ, ಪೋಷಕರೇ ಕೊಡುವಾಗ ತಡೆಯಲು ನೀವ್ಯಾರು ಎನ್ನುತ್ತಿದ್ದರು.

"ಇಂಥ ಎಷ್ಟೇ ತಡೆಯೊಡ್ಡಿದರೂ ಎಸ್‌ಎಫ್‌ಐ ತನ್ನ ಹೋರಾಟಗಳನ್ನು ತೀವ್ರಗೊಳಿಸುತ್ತದೆಯೇ ಹೊರತು ಹಿಂದೆ ಸರಿಯುವುದಿಲ್ಲ. ಇಂಥ ಪ್ರತಿಗಾಮಿತನವನ್ನು ಎಸ್‌ಎಫ್‌ಐ ಬಲವಾಗಿ ವಿರೋಧಿಸುತ್ತದೆ ಮತ್ತು ಇದಕ್ಕೆ ಎದುರಾಗಿ ಹೋರಾಡುವ ಸಾಮರ್ಥ್ಯ ಎಸ್‌ಎಫ್‌ಐ ಗೆ ಇದೆ" ಎಂದು ಜಿಲ್ಲಾ ಸಮಿತಿ ಸ್ಪಷ್ಟಪಡಿಸಿದೆ.

ಇದೇ ಸಂದರ್ಭದಲ್ಲಿ ನಿಷ್ಕ್ರಿಯತೆಯನ್ನು ಪ್ರದರ್ಶಿಸಿದ ಪೋಲೀಸಿನವರ ವರ್ತನೆಯನ್ನು ಸಹ ಎಸ್‌ಎಫ್‌ಐ ಬಲವಾಗಿ ಖಂಡಿಸಿದೆ.

ಪಿಯುಸಿ ಪ್ರತ್ಯೇಕ, ವಿಪರೀತ ಶುಲ್ಕ ಹೆಚ್ಚಳದ ವಿರುದ್ಧ ಶಾಲಾ ಕಾಲೇಜ್ ಬಂದ್

ಧಾರವಾಡ: ಪದವಿ ಕಾಲೇಜುಗಳಿಂದ ಪಿಯುಸಿ ಪ್ರತ್ಯೇಕ ಮಾಡುವ ಸರಕಾರದ ಕ್ರಮದಿಂದ ವಿದ್ಯಾರ್ಥಿಗಳು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿ, ಇದೂವರೆಗೂ ಪ್ರವೇಶ ಪಡೆಯದೇ ಅಲೆದಾಡುತ್ತಿದ್ದು ಅಲ್ಲದೆ ಗಾಯದ ಮೇಲೆ ಬರೆ ಎನ್ನುವಂತೆ ಏಕಾಏಕಿ 5 ಪಟ್ಟು ಶುಲ್ಕ ಹೆಚ್ಚಿಸಿ ಸರಕಾರ ಆದೇಶ ಹೊರಡಿಸಿದ ಹಿನ್ನಲೆಯಲ್ಲಿ ಧಾರವಾಡ ಜಿಲ್ಲೆಯ ನರಗುಂದದಲ್ಲಿ ಜುಲೈ 4 ರಂದು ಶಿಕ್ಷಣ ಸಂಸ್ಥೆಗಳ ಬಂದ್ ಹಾಗೂ ಪ್ರತಿಭಟನಾ ಮೆರವಣಿಗೆ ಮಾಡಿ ತಹಶೀಲ್ದಾರರಿಗೆ ಮನವಿ ಅರ್ಪಿಸಲಾಯಿತು.

ಎಸ್‌ಎಫ್‌ಐ ನೇತೃತ್ವದಲ್ಲಿ ಎನ್‌ಎಸ್‌ಯುಐ ವಿದ್ಯಾರ್ಥಿದಳ ಸೇರಿದ ವಿದ್ಯಾರ್ಥಿ ಹೋರಾಟ ಸಮಿತಿಯಡಿಯಲ್ಲಿ ಇವೆ. ಶಿಕ್ಷಣ ಇಲಾಖೆ, ಶಿಕ್ಷಣ ಮಂತ್ರಿಗಳು ವಿದ್ಯಾರ್ಥಿಗಳ ಜೊತೆಗೆ ಚೆಲ್ಲಾಟ ಆಡುತ್ತಿದ್ದಾರೆ. ಸರಕಾರದ ಈ ಶಿಕ್ಷಣ ವಿರೋಧಿ ನೀತಿಗಳಿಂದ ಉಳ್ಳವರು ಶಿಕ್ಷಣ ಪಡೆದು ಉಳಿದವರು ವಂಚಿತರಾಗುವಂತೆ ಆಗಿದೆ. ತಕ್ಷಣ ಈ ಎರಡು ಆದೇಶಗಳನ್ನ ಹಿಂತೆಗೆದು ಕೊಳ್ಳದಿದ್ದರೆ ಉಗ್ರ ಹೋರಾಟ ಅನಿವಾರ್ಯ ಎಂದು ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಮಹೇಶ್ ಪತ್ತಾರ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಗುರುನಾಥ ಕಗದಾಳ, ವಿ.ಆರ್.ಜಾಲವಾಡಗಿ, ಚನ್ನು ನಂದಿ, ಅಹ್ಮದ ಖಾಜಿ, ಮುಂತಾದವರು ನೇತೃತ್ವ ವಹಿಸಿದ್ದರು.

ಟಿಕೇಟ್ ರಹಿತ ಪ್ರಯಾಣ ಚಳುವಳಿ : ಬಸ್‌ಪಾಸ್ ವಿತರಣೆಗೆ ಇನ್ನೂ ತಾಲ್ಲೂಕಿನಲ್ಲಿ ವ್ಯವಸ್ಥೆ ಮಾಡಿಲ್ಲ ಶಾಲಾ ಕಾಲೇಜುಗಳು ಪ್ರಾರಂಭವಾಗಿ ತಿಂಗಳ ಮೇಲಾಯಿತು. ತರಗತಿಗಳಿಗೆ ಹಾಜರಾಗಲು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿಲ್ಲ. ತಕ್ಷಣ ಬಸ್‌ಪಾಸ್ ವಿತರಣೆ ವ್ಯವಸ್ಥೆ ಮಾಡಲು ಎಸ್‌ಎಫ್‌ಐ ಒತ್ತಾಯಿಸಿತು. ಇಲ್ಲದಿದ್ದರೆ ಟಿಕೇಟ್ ರಹಿತ ಪ್ರಯಾಣ ಚಳುವಳಿ ಮಾಡುವುದಾಗಿ ಎಚ್ಚರಿಕೆ ನೀಡಲಾಯಿತು.

ಅಧ್ಯಯನ ಶಿಬಿರ

ಹುಬ್ಬಳಿ: ಭಾರತದಲ್ಲಿ ಕಮ್ಯುನಿಸ್ಟ್ ಚಳುವಳಿಯ ಇತಿಹಾಸ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮ ಮತ್ತು ಪ್ರಸ್ತುತ ರಾಜಕೀಯ ಪರಿಸ್ಥಿತಿ, ಜುಲೈ 15 ರಿಂದ 31 ರ ವರೆಗೆ ನಡೆಯುತ್ತಿರುವ ರಾಜಕೀಯ ಪ್ರಚಾರಾಂದೋಲನದ ಮಹತ್ವ ಕುರಿತಂತೆ ಹುಬ್ಬಳ್ಳಿ-ಧಾರವಾಡ ಪ್ರದೇಶದ ಪಕ್ಷದ ಸದಸ್ಯರಿಗೆ ಜುಲೈ 6 ರಂದು, ದಿನದ ಅಧ್ಯಯನ ಶಿಬಿರ ಹಳೇ ಹುಬ್ಬಳ್ಳಿಯಲ್ಲಿ ನಡೆಯಿತು. ನಿತ್ಯಾನಂದ ಸ್ವಾಮಿ, ಸಿ.ಆರ್.ಭಟ್ ಭಾಗವಹಿಸಿದ್ದರು.

ಡೊಂಗಿ ಸ್ವಾಮೀಜಿಯ ಬಗ್ಗೆ ಎಸ್‌ಎಫ್ಐ ಪ್ರಚಾರಾಂದೋಲನ

ಮಂಡ್ಯ: ಮಳವಳ್ಳಿ ತಾ।। ಸಂಚಾಲಕ ಸಮಿತಿಯು ಇತ್ತೀಚಿಗೆ ಮಳವಳ್ಳಿ ತಾಲ್ಲೂಕಿನ ಬೆಳಕವಾಡಿ-ಹೊಸಹಳ್ಳಿಯಲ್ಲೂ ಹುಟ್ಟಿಕೊಂಡಿರುವ ಡೊಂಗಿ ಸ್ವಾಮೀಜಿಯ ಬಗ್ಗೆ ಜನಗಳಿಗೆ ಅರಿವು ಮೂಡಿಸಲು ಪ್ರಚಾರಾಂದೋಲನ ನಡೆಸಿದೆ.

ಸುವರ್ಣಮಹೋತ್ಸವವನ್ನು ಆಚರಿಸುತ್ತಿರುವ ಭಾರತ ಸಹಸ್ರಾರು ಮೂಢನಂಬಿಕೆಗಳಿಂದ ತುಂಬಿ ತುಳುಕಾಡುತ್ತಿದೆ. ನಿತ್ಯ ಜೀವನದಲ್ಲೂ ಮೂಢ ನಂಬಿಕೆಗಳ ಅರ್ಥವಿಲ್ಲದ ಸಂಪ್ರದಾಯಗಳು ಹಾಸುಹೊಕ್ಕಾಗಿವೆ.

ಇದಕ್ಕೆ ಪೂರಕವಾಗಿ ಬೆಳಕವಾಡಿ-ಹೊಸಳ್ಳಿ ಗ್ರಾಮದಲ್ಲಿ ಒಬ್ಬಡೊಂಗಿ ಸ್ವಾಮೀಜಿಯು ಹುಟ್ಟಿಕೊಂಡಿದ್ದಾನೆ. ಈತ ಒಬ್ಬ ಮಾನಸಿಕ ರೋಗಿ. ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಂದಿರುವಾತ. ವೈದ್ಯಕೀಯ ಕ್ಷೇತ್ರಕ್ಕೆ ಸವಾಲಾಗಿರುವ ಕೆಲವು ಖಾಯಿಲೆಗಳನ್ನು ಗುಣಪಡಿಸುತ್ತೇನೆಂದು ಪ್ರಚಾರ ಗಿಟ್ಟಿಸಿಕೊಂಡು ಅನೇಕ ಮುಗ್ಧ ಜನರ ಮನಸ್ಸನ್ನು ಮೌಢ್ಯಕ್ಕೆ ನೂಕುತ್ತಿದ್ದಾನೆ. ಮಾತಿನ ಮೋಡಿಯಿಂದ ಜನರ ಗುಂಪಿಗೆ ಅನೇಕ ವಿಚಾರಗಳನ್ನು ಹೇಳುತ್ತ ಸಾಮೂಹಿಕ ಸನ್ನಿಗೆ ಒಳಪಡಿಸುವ ಸ್ವಾಮೀಜಿಯ ಪ್ರಭಾವಕ್ಕೆ ಒಳಗಾಗದೆ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕೆಂದು ಸುಳ್ಳು ಮಾಹಿತಿಗಳಿಗೆ ಕಿವಿಗೊಡ ಬಾರದೆಂದು ವಿನಂತಿಸಿರುವ ಎಸ್‌ಎಫ್‌ಐ ತಾಲ್ಲೂಕು ಸಂಚಾಲಕ ಸಮಿತಿಯು ಕರಪತ್ರ ಗಳನ್ನು ಹಂಚುವುದು ಮತ್ತು ಸಾರ್ವಜನಿಕರ ಜೊತೆ ವಿಚಾರ ವಿನಿಮಯ ಮಾಡುವ ಮುಖಾಂತರ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ.

ಡಿವೈಎಫ್ಐನಿಂದ ಪ್ರತಿಭಟನಾ ಪ್ರದರ್ಶನ

ಕೆ.ಜಿ.ಎಫ್: ಬಂಗಾರಪೇಟೆ ತಾಲ್ಲೂಕಿನ ರಾಬರ್ಟ್‌ಸನ್ ಪೇಟೆಯಲ್ಲಿರುವ ಸಿವಿಲ್ ಆಸ್ಪತ್ರೆಯ ಮುಂದೆ ಜುಲೈ 8 ರಂದು ಡಿವೈಎಫ್ಐ ತಾಲ್ಲೂಕು ಸಮಿತಿಯು ಆಸ್ಪತ್ರೆಯ ಅವ್ಯವಸ್ಥೆಯ ವಿರುದ್ಧ ಪ್ರತಿಭಟನಾ ಕಾರ್ಯಕ್ರಮ ನಡೆಸಿತು. 50 ಕ್ಕೂ ಹೆಚ್ಚಿಗಿಲಾಗಿ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಈ ಆಸ್ಪತ್ರೆಯು ಇಡೀ ತಾಲ್ಲೂಕಿನ ಜನತೆ ಚಿಕಿತ್ಸೆ ಪಡೆಯಲು ಇರುವ ಏಕೈಕ ಸುಸಜ್ಜಿತ ಸರಕಾರಿ ಆಸ್ಪತ್ರೆಯಾಗಿತ್ತು. ಇಲ್ಲಿಗೆ ಹಳ್ಳಿಯ ಜನತೆ ಮಾತ್ರವಲ್ಲದೆ ಇತ್ತೀಚೆಗೆ ಗಣಿಯಿಂದಲೂ ವಿ.ಆರ್.ಎಸ್ ನಿವೃತ್ತ ಕಾರ್ಮಿಕರು ಹಾಗೂ ಅವರ ಕುಟುಂಬದವರೂ ಈ ಆಸ್ಪತ್ರೆಯನ್ನೆ ಅವಲಂಭಿಸಿದ್ದಾರೆ.ಆದರೆ ಬಡಜನತೆ ತಮ್ಮ ಖಾಯಿಲೆಗೆ ಚಿಕಿತ್ಸೆ ಪಡೆಯಲು ಬಂದರೆ ವೈದ್ಯರಿಂದ ವಾರ್ಡ್ ಬಾಯ್ ವರೆಗೆ ಎಲ್ಲರ ಕೈ ಬಿಸಿ ಮಾಡಬೇಕಾದ ಪರಿಸ್ಥಿತಿ ಇದೆ. ಜೊತೆಗೆ ಆಸ್ಪತ್ರೆಯಲ್ಲಿ ಯಾವ ಔಷಧಿಯು ದೊರೆಯದೆ ಹೊರಗಿನಿಂದಲೇ ಬಡ ರೋಗಿಗಳು ತರಬೇಕಾಗಿದೆ. ಆಸ್ಪತ್ರೆಯ ಪರಿಸರ ನೈರ್ಮಲ್ಯವಿಲ್ಲದೆ ಹೊಸ ರೋಗದ ತಾಣವಾಗ ತೊಡಗಿದೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಶಾಸಕರಿಗೆ ಹೀಗೆ ಎಲ್ಲರಿಗೂ ಮನವಿ ಕೊಟ್ಟರೂ ಅವ್ಯವಸ್ಥೆ ಸರಿಯಾಗುವ ಲಕ್ಷಣ ಕಾಣ ಬರದ ಕಾರಣ ಡಿವೈಎಫ್ಐ ತಾಲ್ಲೂಕು ಸಮಿತಿ ಪ್ರತಿಭಟನಾ ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಪ್ರತಿಭಟನಾ ಕಾರ್ಯಕ್ರಮದ ನಂತರ ತಾಲ್ಲೂಕು ಸಮಿತಿ ಅಧ್ಯಕ್ಷರಾದ ಎ.ಆರ್.ಬಾಬು, ಕಾರ್ಯದರ್ಶಿ ಎಲ್.ರಾಮಚಂದ್ರ, ರವೀಂದ್ರ ಮುಂತಾದವರು ಮಾತನಾಡಿದರು. ನಂತರ ವೈದ್ಯಾಧಿಕಾರಿಗಳಿಗೆ ಮನವಿ ಪತ್ರ ಅರ್ಪಿಸಲಾಯಿತು. ವೈದ್ಯಾಧಿಕಾರಿಗಳು ಸೂಕ್ತ ಕ್ರಮದ ಭರವಸೆಯನ್ನು ಡಿವೈಎಫ್ಐ ಮುಖಂಡರಿಗೆ ನೀಡಿದರು.

ಎಸ್.ಎಫ್.ಐ ಪ್ರಚಂಡ ಜಯಭೇರಿ

ಮಂಗಳೂರು: ಇಲ್ಲಿನ ಗಣಪತಿ ಪ.ಪೂ. ಕಾಲೇಜ್‌ನಲ್ಲಿ ನಡೆದ 1997-98 ರ ಸಾಲಿನ ಚುನಾವಣೆಯಲ್ಲಿ ಅಧ್ಯಕ್ಷ ಹಾಗೂ ಕಾರ್ಯದರ್ಶಿ ಸ್ಥಾನವನ್ನು ತನ್ನ ಬಗಲಿಗೆ ಹಾಕಿಕೊಂಡು ಎಸ್.ಎಫ್.ಐ. ಪ್ರಚಂಡ ಜಯಭೇರಿ ಬಾರಿಸಿದೆ. ಕಳೆದ ನಾಲ್ಕೈದು ವರ್ಷಗಳಿಂದ ಎಬಿವಿಪಿಯ ಭದ್ರಕೋಟೆಯೆನಿಸಿದ ಈ ಕಾಲೇಜಿನಲ್ಲಿ ಸತತವಾಗಿ ಚುನಾವಣೆಯಲ್ಲಿ ಜಯಿಸುತ್ತಿತ್ತು. ಆದರೆ ಈ ವರ್ಷದ ಚುನಾವಣೆಯಲ್ಲಿ ಎಬಿವಿಪಿ ಹೀನಾಯವಾಗಿ ಸೋಲುಂಡಿದೆ. ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಎಸ್‌ಎಫ್‌ಐ ಕಾಲೇಜ್ ಘಟಕಾಧ್ಯಕ್ಷರಾದ ಪ್ರಸಾದ್ ಶೆಟ್ಟಿಯವರು ಆಯ್ಕೆಗೊಂಡರೆ, ಕಾರ್ಯದರ್ಶಿಯಾಗಿ ಎಸ್‌ಎಫ್‌ಐ ಮಂಗಳೂರು ತಾಲ್ಲೂಕು ನಾಯಕರಾದ ಡಿ.ವಿನಯನೇತ್ರರವರು ಆಯ್ಕೆಯಾಗಿದ್ದಾರೆ.

ಚಂದಾದಾರರಿಗೆ ಸೂಚನೆ

ದುಡಿಯುವ ಜನರ ಪತ್ರಿಕೆ 'ಐಕ್ಯರಂಗ' ನಿರಂತರವಾದ ಬೆಲೆ ಏರಿಕೆಗಳಿಂದಾಗಿ ತೀವ್ರ ಹಣಕಾಸು ಮುಗ್ಗಟ್ಟು ಅನುಭವಿಸಬೇಕಾಗಿ ಬಂದಿದೆ. ಇದನ್ನು ಎದುರಿಸಲು ಚಂದಾದಾರರ ಸಹಕಾರವನ್ನು ಮತ್ತೆ-ಮತ್ತೆ ಕೋರುತ್ತಿದ್ದರೂ ಬಹಳ ಮಂದಿ ಪರಿಸ್ಥಿತಿಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳುತ್ತಿಲ್ಲ. ಆದ್ದರಿಂದ ನಿರ್ವಾಹವಿಲ್ಲದೆ ವ್ಯವಸ್ಥಾಪಕ ಮಂಡಳಿ ಕೆಲವು ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ನಿರ್ಧರಿಸಿದೆ. ಚಂದಾ ಬಿಲ್ ಬಾಕಿಯನ್ನು ಜುಲೈ 31, 1997 ರೊಳಗೆ ಪಾವತಿ ಮಾಡದ ಚಂದಾಗಳನ್ನು ರದ್ದು ಮಾಡಲಾಗುವುದು. ಇದನ್ನು ಸಂಬಂಧ ಪಟ್ಟ ಎಲ್ಲಾ ಚಂದಾದಾರರು ಗಮನಿಸಬೇಕಾಗಿ ಕೋರುತ್ತೇವೆ. ಚಂದಾದಾರರಿಗೆ ಕಳಿಸಿರುವ ಜೂನ್ ತಿಂಗಳ ಬಿಲ್‌ನಲ್ಲಿ ಹಿಂದಿನ ಬಾಕಿಯು ಪ್ರತ್ಯೇಕವಾಗಿ ನಮೂದಿಸಲಾಗಿದೆ.

– ವ್ಯವಸ್ಥಾಪಕರು

...ಜನತಾದಳದಲ್ಲಿ ಉಂಟಾಗಿರುವ ವಿಭಜನೆಯ ಹಿನ್ನಲೆಯಲ್ಲಿ ಸಂಯುಕ್ತ ರಂಗ ಎದುರಿಸಬೇಕಾಗಿರುವ ಸವಾಲು, ಇದುವರೆಗೆ ಅದರ ಕಾರ್ಯನಿರ್ವಹಣೆ ಹಾಗೂ ಕಾಂಗ್ರೆಸ್(ಐ)ನ ಆಟದ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್‌ರವರ ವಿಶ್ಲೇಷಣೆ.



ಬಿಹಾರ ಮತ್ತು ಲಾಲೂ ಇವರಷ್ಟೇ ಭಾರತವಲ್ಲ ಎಂದು ಪ್ರಧಾನಮಂತ್ರಿಗಳಿಗೆ ನೆನಪಿಸುವಂತಿರುವ ಈ ವ್ಯಂಗ್ಯ ಚಿತ್ರ ಆರ್.ಕೆ.ಲಕ್ಷ್ಮಣ್ ರವರದ್ದು. ಕೃಪೆ: ಟೈಮ್ಸ್ ಆಫ್ ಇಂಡಿಯಾ

ಜನತಾದಳದ ಬಿಕ್ಕಟ್ಟಿನಿಂದ ಸಂಯುಕ್ತ ರಂಗದ ವಿಶ್ವಾಸಾರ್ಹತೆಗೆ ಕುಂದು ಬರಬಾರದು

– ಸುರ್ಜಿತ್

ಎರಡು ಕಾರಣಗಳಿಂದ ಕೊನೆಗೂ ಲಾಲೂ ಪ್ರಸಾದ್ ಯಾದವ್‌ರವರು ಜನತಾದಳದಲ್ಲಿ ವಿಭಜನೆ ತಂದರು. ಮೊದಲನೆಯದಾಗಿ, ಬಿಹಾರ ಮುಖ್ಯ ಮಂತ್ರಿ ಮತ್ತು ಜನತಾದಳದ ಅಧ್ಯಕ್ಷ ಲಾಲೂ ಪ್ರಸಾದ್ ಯಾದವರ ಮೇಲೆ ಚಾರ್ಜ್‌ಶೀಟ್ ಮತ್ತು ಎರಡನೆಯದಾಗಿ, ದಳ ಅಧ್ಯಕ್ಷತೆಗೆ ಚುನಾವಣೆ. ಲಾಲೂ ಯಾದವ್ ತನ್ನ ಅಧ್ಯಕ್ಷ ಸ್ಥಾನವನ್ನು ಉಳಿಸಿಕೊಳ್ಳಬಯಸಿದರೆ ಕಾರ್ಯಾಧ್ಯಕ್ಷ ಶರದ್ ಯಾದವ್ ಅದಕ್ಕೆ ಸವಾಲು ಹಾಕಿದರು. ಈ ಎರಡನೇ ಕಾರಣವನ್ನು ಮೊದಲು ತಗೊಳ್ಳೋಣ.

ದಳದ ಅಧ್ಯಕ್ಷತೆಗೆ ಸ್ಪರ್ಧೆ ನಡೆಯುತ್ತದೆ ಎಂದು ಸ್ಪಷ್ಟವಾದಂದಿನಿಂದಲೇ ಆಪಾದನೆಗಳು, ಪ್ರತಿ ಆಪಾದನೆಗಳು ಹರಿದಾಡಲಾರಂಭಿಸಿದವು. ಮತದಾರ ಪಟ್ಟಿಗಳಲ್ಲಿ ವಂಚನೆಯಾಗಿದೆ ಎಂಬ ಆಪಾದನೆ ಬಂತು. ಇವನ್ನು ರಾಜ್ಯ ಮಟ್ಟದಲ್ಲಿ ತಯಾರಿಸುವಾಗ ಇಂತಹ ಆಪಾದನೆಗಳು ಬಂದಿರಲಿಲ್ಲ. ಚುನಾವಣೆಯ ಜಾಗ ಮತ್ತು ಸ್ಥಾನವೂ ವಿವಾದದ ವಿಷಯವಾಯಿತು. ವಿವಾದವನ್ನು ನ್ಯಾಯಾಲಯಕ್ಕೆ ಎಳೆದೊಯ್ಯಲಾಯಿತು. ಕೊನೆಗೆ ಚುನಾವಣೆ ನಡೆಸಲು ಎರಡು ಬಾರಿ ವೀಕ್ಷಕರನ್ನು ನೇಮಿಸಿ ವಿಫಲವಾದ ನ್ಯಾಯಾಲಯ ಜುಲೈ 3ರಂದು ಚುನಾವಣೆ ನಡೆಸಲು, ಅದರ ಉಸ್ತುವಾರಿ ನೋಡಿಕೊಳ್ಳಲು ಮಧು ದಂಡವತೆಯವರನ್ನು ನೇಮಿಸ ಬೇಕಾಗಿ ಬಂತು. ಈ ನಡುವೆ ಬಿಕ್ಕಟ್ಟನ್ನು ತಪ್ಪಿಸಲು, ಒಂದು ರಾಜಿಗೆ ಬರಲು ಪ್ರಯತ್ನಗಳೂ ನಡೆದವು.

ಈ ಪ್ರಯತ್ನಗಳು ವಿಫಲವಾದಾಗ ಲಾಲೂ ಪ್ರಸಾದ್ ಯಾದವ್ ಜುಲೈ 3ರ ಚುನಾವಣೆಗಳನ್ನು ಬಹಿಷ್ಕರಿಸುವ ತನ್ನ ಆಶಯವನ್ನು ಪ್ರಕಟಿಸಿದರು. ಇದು ವಿಭಜನೆಗೆ ನಾಂದಿಯಾಯಿತು. ಲಾಲೂ ಯಾದವ್‌ರ ಬಹಿಷ್ಕಾರದ ನಡುವೆ ಜುಲೈ 3ರಂದು ಚುನಾವಣೆ ನಡೆಯಿತು. ಲಾಲೂ ಯಾದವ್ ದಿಲ್ಲಿಯಲ್ಲಿ ಜುಲೈ 5ರಂದು ತನ್ನ ಬೆಂಬಲಿಗರ ಸಭೆ ಕರೆದು ರಾಷ್ಟ್ರೀಯ ಜನತಾದಳ ರಚಿಸಿರುವುದಾಗಿ ಘೋಷಿಸಿದರು. ಅತ್ತ ಮರು ಜನತಾದಳ ಚುನಾವಣೆಯ ಫಲಿತಾಂಶವೂ ಪ್ರಕಟವಾಯಿತು. 758 ಮತಗಳಲ್ಲಿ ಶರದ್ ಯಾದವ್ 691 ಮತಗಳನ್ನು ಪಡೆದರೆ, ಲಾಲೂ ಪ್ರಸಾದ್ 58 ಮತಗಳನ್ನು ಪಡೆದರು.

ಈಗ ಮೊದಲಿನ ಕಾರಣವನ್ನು - ಮುಖ್ಯಮಂತ್ರಿ ಲಾಲೂ ಪ್ರಸಾದ್ ಯಾದವ್‌ರ ಮೇಲೆ 950 ಕೋಟಿ ರೂ.ಗಳ ಮೇವು ಹಗರಣದಲ್ಲಿ ಆರೋಪ ಪಟ್ಟಿ ದಾಖಲಾದ ಕಾರಣವನ್ನು-ನೋಡೋಣ. ಈ ಹಗರಣ ದೇಶದಲ್ಲಿ ಬಯಲಿಗೆ ಬಂದ ಅತ್ಯಂತ ಕೆಟ್ಟ ಹಗರಣಗಳಲ್ಲಿ ಒಂದು-ಕೇವಲ ಅಗಾಧ ಮೊತ್ತದಿಂದಾಗಿ ಮಾತ್ರವೇ ಅಲ್ಲ, ಎಷ್ಟೊಂದು ಜನ ಎಷ್ಟೊಂದು ದೀರ್ಘಕಾಲ ಸರಕಾರದ ಖಜಾನೆಯಿಂದ ಹಣವನ್ನು ತೆಗೆಯುತ್ತಿದ್ದರು ಎಂಬ ಕಾರಣಕ್ಕಾಗಿಯೂ ಇದೊಂದು ಕೆಟ್ಟ ಹಗರಣ. ಈಗಿನ ಮುಖ್ಯಮಂತ್ರಿ ಲಾಲೂ ಯಾದವ್, ಒಬ್ಬ ಮಾಜಿ ಮುಖ್ಯಮಂತ್ರಿ ಕಾಂಗ್ರೆಸ್‌ನ ಜಗನ್ನಾಥ್ ಮಿಶ್ರಾ, ಬಿಹಾರದ ಈಗಿನ ಮತ್ತು ಹಿಂದಿನ ಮಂತ್ರಿಗಳು, ಒಬ್ಬ ಕೇಂದ್ರ ಮಂತ್ರಿ ಚಂದ್ರದೇವ್ ಪ್ರತಾಪ್ ವರ್ಮಾ(ನಂತರ ಇವರು ರಾಜೀನಾಮೆ ಕೊಡಬೇಕಾಯಿತು)ರಲ್ಲದೆ ಹಲವಾರು ಅಧಿಕಾರಶಾಹಿಗಳು, ನೌಕರರು ಮತ್ತು ಕಾಂಟ್ರಾಕ್ಟರುಗಳು ರಾಜ್ಯದ ಖಜಾನೆಯನ್ನು ಸುಲಿಯುವ ಈ ಹಗರಣದಲ್ಲಿ ಸಿಲುಕಿಕೊಂಡಿದ್ದಾರೆ.

ಸಂಯುಕ್ತ ರಂಗಕ್ಕೆ ಸವಾಲು

ಸಿಬಿಐ ಮುಖ್ಯಮಂತ್ರಿಗಳ ವಿಚಾರಣೆ ನಡೆಸಲು ರಾಜ್ಯಪಾಲರ ಅನುಮತಿ ಕೇಳಿತು. ತಡವಾಗಿ ಅದು ದೊರೆಯಿತು. ಈ ನಡುವೆ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಬೇಕೆಂಬ ಬೇಡಿಕೆ ಸಂಯುಕ್ತರಂಗದೊಳಗಿಂದ ಜನತಾದಳದಿಂದಲೂ ಹಾಗೂ ಹೊರಗಿಂದ ಬರುತ್ತಿದ್ದರೂ ಯಾವುದೇ ನಾಚಿಕೆಯಿಲ್ಲದೆ ಏನೇ ಬಂದರೂ ತಾನು ರಾಜೀನಾಮೆ ಕೊಡುವುದಿಲ್ಲ ಎಂದು ಸಾರಿದರು. ಜೈಲಿನಿಂದಲೇ ರಾಜ್ಯವನ್ನು ಆಳುತ್ತೇನೆ ಎಂಬ ಹಾಸ್ಯಾಸ್ಪದ ಹೇಳಿಕೆಯನ್ನು ನೀಡಿದರು. ಬಹುಶಃ ಕೊನೆಗೆ ತಾನು ಅಲ್ಲಿಗೇ ಹೋಗಬೇಕಾದೀತು ಎಂಬ ಭಯವಿರಬಹುದು.

ಜನತಾದಳವನ್ನು ಒಡೆದು, ಮುಖ್ಯಮಂತ್ರಿ ಸ್ಥಾನದಿಂದ ರಾಜೀನಾಮೆ ನೀಡಲು ನಿರಾಕರಿಸಿ ಲಾಲೂಪ್ರಸಾದ್ ಯಾದವ್ ಜನತಾದಳಕ್ಕೆ ಮತ್ತು ಸಂಯುಕ್ತ ರಂಗಕ್ಕೆ ಒಂದು ಸವಾಲು ಹಾಕಿದ್ದಾರೆ. ಅವರ ಕ್ರಮ ಈ ಎರಡನ್ನೂ ದುರ್ಬಲಗೊಳಿಸಿದೆ. ಬಿಹಾರದ ಅಸೆಂಬ್ಲಿಯಲ್ಲಿ ಬಹುಮತ ಕಳಕೊಂಡ ಅವರೀಗ ಅಧಿಕಾರದಲ್ಲಿ ಉಳಿಯಲು ಕಾಂಗ್ರೆಸ್ ಪಕ್ಷದ ಬೆಂಬಲ ಪಡೆಯುವ ಯೋಜನೆಯಲ್ಲಿದ್ದಾರೆ(*ಈ ಲೇಖನ ಮುದ್ರಣಗೊಳ್ಳುವ ವೇಳೆಗೆ ಅವರು ಜೆಎಂಎಂ ನೇರ ಹಾಗೂ ಕಾಂಗ್ರೆಸ್‌ನ ಪರೋಕ್ಷ ಬೆಂಬಲದಿಂದ "ವಿಶ್ವಾಸ ಮತ"ವನ್ನು ಪಡೆದಿದ್ದಾರೆ-ಸಂ.*).

ಸಂಯುಕ್ತ ರಂಗ ರಚನೆಯಾದದ್ದು ಕೋಮುವಾದಿ ಶಕ್ತಿಗಳು ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಒಂದು ನಿಜವಾದ ಬೆದರಿಕೆಯ ಸನ್ನಿವೇಶದಲ್ಲಿ ಕಾಂಗ್ರೆಸ್ ಆಳ್ವಿಕೆಗೆ ಒಂದು ಪರ್ಯಾಯವಾಗಿ. ಇದು ಕಾಂಗ್ರೆಸ್ ಮತ್ತು ಬಿಜೆಪಿಗೆ ಮೂರನೇ ಪರ್ಯಾಯವೆಂದು ಮುಂದಿಡಲಾಯಿತು. ಸಂಯುಕ್ತ ರಂಗ ಕಾಂಗ್ರೆಸ್‌ನ ಹೊರಗಿನ ಬೆಂಬಲದ ಮೇಲೆ ಅವಲಂಬಿತವಾಗಿದ್ದರೂ 'ಸಮಾನ ಕನಿಷ್ಠ ಕಾರ್ಯಕ್ರಮ' ಹಾಕಿಕೊಟ್ಟ ಧೋರಣಾ ಚೌಕಟ್ಟಿನಲ್ಲಿ ಅದು ಕೆಲಸ ಮಾಡಬೇಕಿತ್ತು.

ಮಾರ್ಚ್ 30ರಂದು ಕಾಂಗ್ರೆಸ್ ಅಧ್ಯಕ್ಷರು ಭಾರತದ ರಾಷ್ಟ್ರಪತಿಗಳಿಗೆ ಒಂದು ಪತ್ರ ಬರೆದು ಸಂಯುಕ್ತ ರಂಗ ಸರಕಾರಕ್ಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಂಡುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಹಿಂದಿನ ಕಾಂಗ್ರೆಸ್ ಅಧ್ಯಕ್ಷರು ಸಂಸತ್ತಿನಲ್ಲಿ ಬೇಷರತ್ ಬೆಂಬಲದ ಆಶ್ವಾಸನೆ ನೀಡಿದ್ದರೂ ಹೀಗೆ ಮಾಡಲಾಯಿತು. ಅಕಸ್ಮಾತ್ತಾಗಿ ನಡೆಸಿದ ಅವರ ಪ್ರಯತ್ನ ಎಲ್ಲರಿಗೂ ಆಶ್ಚರ್ಯವುಂಟು ಮಾಡಿತು, ಸಂಯುಕ್ತ ರಂಗದ ಸರಕಾರ ಅಸ್ತಿತ್ವಕ್ಕೆ ಬೆದರಿಕೆಯೊಡ್ಡಿತು. ಸಂಯುಕ್ತ ರಂಗಗಳ ಬಹಳಷ್ಟು ಪಕ್ಷಗಳು ಚುನಾವಣೆಗೆ ಹೋಗಬಯಸದ್ದರಿಂದಾಗಿ, ಕೊನೆಗೆ ಮುಖಂಡತ್ವದ ಬದಲಾವಣೆ ಮಾಡಬೇಕೆಂಬ ಕಾಂಗ್ರೆಸ್ ಒತ್ತಾಯಕ್ಕೆ ಮಣಿಯಬೇಕಾಯಿತು. ಆರಂಭ ಸಮಸ್ಯೆಗಳ ನಂತರ ಹೊಸ ಮುಖಂಡರ ಬಗ್ಗೆ ಒಂದು ಒಮ್ಮತಕ್ಕೆ ಬರಲಾಯಿತು, ಐ.ಕೆ.ಗುಜ್ರಾಲ್ ಚುನಾಯಿತರಾದರು.

ಪರ್ಯಾಯವೆಂಬ ವಿಶ್ವಾಸ ಮೂಡಿಸಿಲ್ಲ

ನಾವು ಮತ್ತೆ ಮತ್ತೆ ಹೇಳುತ್ತಿರುವಂತೆ ಸಂಯುಕ್ತ ರಂಗ ಮತ್ತು 'ಸಮಾನ ಕನಿಷ್ಠ ಕಾರ್ಯಕ್ರಮ' ಕುರಿತಂತೆ ಕೆಲವು ವಿಷಯಗಳ ಮೇಲೆ ನಮಗೆ ಸಮ್ಮತಿಯಿದ್ದರೂ ಸಂಯುಕ್ತ ರಂಗ ಸರಕಾರದ ಆರ್ಥಿಕ ಧೋರಣೆಯ ಬಗ್ಗೆ ಎಡಪಕ್ಷಗಳಿಗೆ ಗಂಭೀರ ವಿರೋಧವಿದೆ. ಆರ್ಥಿಕ ಉದಾರೀಕರಣ, ಬಹುರಾಷ್ಟ್ರೀಯ ಕಂಪನಿಗಳು ಮತ್ತು ಗುತ್ತೇದಾರಿ ಗುಂಪುಗಳಿಗೆ ಹೆಚ್ಚೆಚ್ಚು ರಿಯಾಯಿತಿಗಳನ್ನು ನೀಡುತ್ತಾ ಜನಸಾಮಾನ್ಯರಿಗಿರುವ ಅಲ್ಪ ಸಬ್ಸಿಡಿಗಳಲ್ಲಿ, ಸಾಮಾಜಿಕ ಕಲ್ಯಾಣದ ಖರ್ಚುಗಳಲ್ಲಿ ಕಡಿತ ಇವನ್ನೆಲ್ಲಾ ಎಡಪಕ್ಷಗಳು ತೀವ್ರವಾಗಿ ವಿರೋಧಿಸುತ್ತಿವೆ. ಹಿಂದಿನ ಸಂಯುಕ್ತ ರಂಗ ಸರಕಾರ ವಿವಿಧ ಪ್ರಶ್ನೆಗಳನ್ನು ಕುರಿತಂತೆ ಜನಗಳನ್ನು ಅಣಿನೆರೆಸಲು ಪ್ರಯತ್ನಿಸಿತು, ರ‍್ಯಾಲಿ ಇತ್ಯಾದಿಗಳ ಮೂಲಕ ಜನಗಳ ನಡುವೆ ಪ್ರಚಾರ-ಪ್ರಕ್ಷೋಭೆ ನಡೆಸಲು ಪ್ರಯತ್ನಿಸಿತ್ತು. ಆದರೆ ಈಗ ಹಾಗಿಲ್ಲ. ಕೃಷಿ ಕಾರ್ಮಿಕರಿಗೆ, ಮಹಿಳಾ ಮೀಸಲಾತಿಗೆ, ಕಾರ್ಮಿಕ ಸಂಘಗಳಿಗೆ ಮಾನ್ಯತೆ ಕೊಡುವುದಾಗಿ ವಚನ ನೀಡಿದ್ದ ಶಾಸನಗಳು ಇನ್ನೂ ಬಂದಿಲ್ಲ. ಸುಧಾರಿತ ರೇಷನ್ ವ್ಯವಸ್ಥೆಯೂ ಇನ್ನೂ ಜ್ಯಾರಿಗೆ ಬಂದಿಲ್ಲ. ಈ ಕ್ರಮಗಳನ್ನು ಆರಂಭಿಸದಿದ್ದರೆ ಸಂಯುಕ್ತ ರಂಗ ಒಂದು ಪರ್ಯಾಯ ಎಂಬ ವಿಶ್ವಾಸವನ್ನು ಜನಗಳಲ್ಲಿ ಮೂಡಿಸಲು ಸಾಧ್ಯವಾಗುವುದಿಲ್ಲ. ಆದರೆ ಉನ್ನತ ಸ್ಥಾನಗಳಲ್ಲಿನ ಭ್ರಷ್ಟಾಚಾರದ ಹಗರಣಗಳಾದ ಬೋಫೋರ್ಸ್, ಹವಾಲಾ, ಜೆಎಂಎಂ ಲಂಚ, ಬಿಹಾರದ ಮೇವು ಹಗರಣ ಇತ್ಯಾದಿಗಳ ವಿಚಾರಣೆ ಭರದಿಂದ ಮುಂದುವರಿಸಿದ್ದು ಸ್ವಲ್ಪ ಮಟ್ಟಿನ ಪ್ರಗತಿಯೂ ಕಂಡು ಬಂದಿತ್ತು.

ಈ ಹಿನ್ನೆಲೆಯಲ್ಲಿ ಮೇವು ಹಗರಣದಲ್ಲಿ ಲಾಲೂ ಪ್ರಸಾದ್ ಯಾದವ್‌ರು ಸಿಲುಕಿಕೊಂಡ ಆಪಾದನೆಯೊಂದಿಗೆ ಜನತಾದಳದಲ್ಲಿ ಬಿಕ್ಕಟ್ಟು ಉಂಟಾಯಿತು.

ದುರದೃಷ್ಟವಶಾತ್, ಸ್ವಚ್ಛ ಹೆಸರಿನವರೆಂದು ಹೇಳಲಾದ ಪ್ರಧಾನ ಮಂತ್ರಿ ಐ.ಕೆ.ಗುಜ್ರಾಲ್ ಈ ಸಮಸ್ಯೆಯ ಮಹತ್ವವನ್ನು ಕಡೆಗಣಿಸಿದ್ದಾರೆ. ಅವರು ಭ್ರಷ್ಟಾಚಾರದ ವಿರುದ್ಧ ಮಾತನಾಡಿದರೂ, ಸಾರ್ವಜನಿಕ ಜೀವನದಲ್ಲಿ ಸ್ವಚ್ಛತೆಯನ್ನು ಪ್ರತಿಪಾದಿಸಿದರೂ ಲಾಲೂ ಯಾದವ್‌ರ ಮೇಲೆ ಚಾರ್ಜ್‌ಶೀಟ್‌ನ ನಂತರ ಇದ್ದಕ್ಕಿದ್ದಂತೆ ಬದಲಾವಣೆ ಕಂಡು ಬಂದಂತೆ ಕಾಣುತ್ತದೆ. ವಿಚಾರಣೆಗಳನ್ನು ನಡೆಸುತ್ತಿದ್ದ ಸಿಬಿಐ ನಿರ್ದೇಶಕ ಜೋಗಿಂದರ್ ಸಿಂಗ್‌ರನ್ನು ಏಕಾಏಕಿ ಸಿಬಿಐನಿಂದ ಎತ್ತಂಗಡಿ ಮಾಡಲಾಯಿತು. ಅತ್ತ ಮಾಜಿ ಕಾಂಗ್ರೆಸ್ ಮಂತ್ರಿಗಳಾದ ಸತೀಶ್ ಶರ್ಮಾ, ಸುಖರಾಂ ಹಾಗೂ ಶೀಲಾ ಕೌಲ್‌ರ ವಿರುದ್ಧ ವಿಚಾರಣೆ ನಡೆಸಲು ಸರಕಾರ ಇನ್ನೂ ಅನುಮತಿ ನೀಡಿಲ್ಲ. ರಾಷ್ಟ್ರೀಯ

ದುರದೃಷ್ಟವಶಾತ್, ಸ್ವಚ್ಛ ಹೆಸರಿನವರೆಂದು ಹೇಳಲಾದ ಪ್ರಧಾನ ಮಂತ್ರಿ ಐ.ಕೆ.ಗುಜ್ರಾಲ್ ಈ ಸಮಸ್ಯೆಯ ಮಹತ್ವವನ್ನು ಕಡೆಗಣಿಸಿದ್ದಾರೆ. ಅವರು ಭ್ರಷ್ಟಾಚಾರದ ವಿರುದ್ಧ ಮಾತನಾಡಿದರೂ, ಸಾರ್ವಜನಿಕ ಜೀವನದಲ್ಲಿ ಸ್ವಚ್ಛತೆಯನ್ನು ಪ್ರತಿಪಾದಿಸಿದರೂ ಲಾಲೂ ಯಾದವ್‌ರ ಮೇಲೆ ಚಾರ್ಜ್‌ಶೀಟ್‌ನ ನಂತರ ಇದ್ದಕ್ಕಿದ್ದಂತೆ ಬದಲಾವಣೆ ಕಂಡು ಬಂದಂತೆ ಕಾಣುತ್ತದೆ.

ಜನತಾದಳಕ್ಕೆ ಇನ್ನು ಮುಂದೆ ತಮ್ಮ ವಿಧೇಯತೆಯೆಂದ ಮೂವರು ಮಂತ್ರಿಗಳನ್ನು ಸಂಪುಟದಲ್ಲಿ ಮುಂದುವರಿಸಲಾಗುತ್ತಿದೆ, ಹೊಸ ಪಕ್ಷವನ್ನು ಸಂಯುಕ್ತರಂಗದಲ್ಲಿ ಸೇರಿಸಿಕೊಳ್ಳಬಹುದು ಎಂದೂ ಆತಂಕದ ಹೇಳಿಕೆಯನ್ನು ಪ್ರಧಾನಮಂತ್ರಿಗಳು ನೀಡಿದ್ದಾರೆ.

ಈ ಮಂತ್ರಿಗಳನ್ನು ಜನತಾದಳದ ಪ್ರತಿನಿಧಿಗಳಾಗಿ ಸಂಪುಟದಲ್ಲಿ ತಗೊಳ್ಳಲಾಗಿದೆ. ತಮ್ಮ ಪಕ್ಷವನ್ನು ಬದಲಿಸಿದ ಮೇಲೆ ಅವರು ಅಲ್ಲಿರುವ ಹಕ್ಕು ಕಳಕೊಂಡಿದ್ದಾರೆ ಎಂಬುದನ್ನು ಮರೆಯುವುದು ಗುಜ್ರಾಲ್‌ಗೆ ಅನುಕೂಲಕರವೆನ್ನಿಸಿರಬಹುದು. ಮಕ್ಬೂಲ್ ಧರ್, ಸೀಸ್ ರಾಂ ಓಲಾ ಮತ್ತು ಸತ್ಪಾಲ್ ಮಹಾರಾಜ್‌ರೊಂದಿಗೆ ಇವರನ್ನು ಹೋಲಿಸುವುದು ಸಲ್ಲ. ಏಕೆಂದರೆ ಅವರು ತಮ್ಮ ಮೂಲ ಪಾರ್ಟಿಯಲ್ಲೇ ಉಳಿದರು. ಇನ್ನು ರಾಷ್ಟ್ರೀಯ ಜನತಾದಳವನ್ನು ಸಂಯುಕ್ತ ರಂಗಕ್ಕೆ ಸೇರಿಸುವ ಪ್ರಶ್ನೆಯನ್ನು ರಂಗದ ಸ್ಥಾಯೀ ಸಮಿತಿಯೇ ನಿರ್ಧರಿಸಬೇಕು. ಈ ಪಕ್ಷವನ್ನು ರಚಿಸಿದ್ದೇ ಸಂಯುಕ್ತ ರಂಗ ಮತ್ತು ಜನತಾದಳವನ್ನು ಛಿದ್ರಗೊಳಿಸಲೆಂಬುದನ್ನೂ ಗಮನದಲ್ಲಿಟ್ಟುಕೊಳ್ಳಬೇಕು.

ಪ್ರಧಾನ ಪ್ರಶ್ನೆ - ಭ್ರಷ್ಟಾಚಾರದ ವಿರುದ್ಧ ಹೋರಾಟ

ಇಲ್ಲಿಯ ಪ್ರಧಾನ ಪ್ರಶ್ನೆಯೆಂದರೆ ಒಂದು ಭ್ರಷ್ಟಾಚಾರದ ಮೊಕದ್ದಮೆಯಲ್ಲಿ ಲಾಲೂ ಯಾದವ್‌ರ ಮೇಲೆ ಆರೋಪ ಪಟ್ಟಿಯಿರುವುದು. ಸಂಯುಕ್ತ ರಂಗ ಭ್ರಷ್ಟಾಚಾರದ ವಿರುದ್ಧ ಹೋರಾಡಲು ವಚನ ಬದ್ಧವಾಗಿರುವಾಗ ಈ ವಿಷಯದಲ್ಲಿ ರಾಜಿ ಸಾಧ್ಯವಿಲ್ಲ. ರಾಜಿಯ ಒಂದು ಸಣ್ಣ ಸಂಕೇತ ಬಂದರೂ ರಂಗದ ವಿಶ್ವಾಸಾರ್ಹತೆ ಕುಸಿದು ಬೀಳುತ್ತದೆ. ಎರಡನೆಯದಾಗಿ, ಜನತಾದಳವನ್ನು ಒಡೆದ ನಂತರ ಲಾಲೂ ಯಾದವ್ ತನ್ನ ಹೊಸ ರಚನೆಯನ್ನು ಬಲಪಡಿಸುವತ್ತಲೇ ತನ್ನೆಲ್ಲಾ ಶಕ್ತಿ ಹಾಕುತ್ತಾರೆ. ಹಾಗೆ ಮಾಡುವಾಗ ಜನತಾದಳದ ಸಾಮೂಹಿಕ ನೆಲೆಯನ್ನು ತನ್ನತ್ತ ಸೆಳೆಯಲು, ಈ ಮೂಲಕ ಜನತಾದಳ ಮತ್ತು ಸಂಯುಕ್ತ ರಂಗದ ನೆಲೆಯನ್ನು ಕುಂಠಿತಗೊಳಿಸುತ್ತಾರೆ. ಏಕೆಂದರೆ ಅವರ ರಾಜಕೀಯ ಅಸ್ತಿತ್ವ ಇದನ್ನೇ ಅವಲಂಬಿಸಿದೆ. ಈಗಾಗಲೇ ದುರ್ಬಲ

ಪುಟ 5 ನೋಡಿ



1. ಲಾಭಕರ ಸಾರ್ವಜನಿಕ ವಲಯದ ಉದ್ದಿಮೆಗಳ ಹಾಗೂ ಮಹತ್ವದ ಮತ್ತು ಪ್ರಧಾನ ವಲಯಗಳಲ್ಲಿರುವ ಉದ್ದಿಮೆಗಳ ಶೇರುಗಳ ಮಾರಾಟದ ಮೂಲಕ ಸಾರ್ವಜನಿಕ ವಲಯವನ್ನು ಅಶಕ್ತಗೊಳಿಸುವುದನ್ನು ನಿಲ್ಲಿಸಬೇಕು.
2. ಸಾರ್ವಜನಿಕ ಮತ್ತು ಖಾಸಗೀ ವಲಯಗಳಲ್ಲಿ ರೋಗಗ್ರಸ್ತ ಘಟಕಗಳನ್ನು ಪುನರುಜ್ಜೀವನ ಗೊಳಿಸಲು ತಕ್ಷಣ ಕ್ರಮ ಕೈಗೊಳ್ಳಬೇಕು.
3. ಒಟ್ಟಾರೆಯಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸಬೇಕು. ಹಾಗೂ ಬಡವರ ರೇಷನ್ ಈಗಿರುವ ಬಡವರಿಗೆ ಸಹಾಯಧನದ ಬೆಲೆಗಳ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು.
4. ವಿಮಾ ವಲಯವನ್ನು ತೆರೆಯುವುದನ್ನು ನಿಲ್ಲಿಸಬೇಕು ಹಾಗೂ ವಿಮಾ ನಿಯಂತ್ರಣಾ ಪ್ರಾಧಿಕಾರ ಮಸೂದೆಯನ್ನು ಹಿಂದಕ್ಕೆ ಪಡೆದುಕೊಳ್ಳಬೇಕು.
5. ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಇರುವ ಸಾಲದ ಪ್ರಮಾಣವನ್ನು ಹೆಚ್ಚಿಸಬೇಕು. ಕೃಷಿ ಕಾರ್ಮಿಕರ ಪ್ರಯೋಜನಕ್ಕೆ ಕೃಷಿ ಕಾರ್ಮಿಕ ಮಸೂದೆಯನ್ನು ಅಂಗೀಕರಿಸಬೇಕು.
6. ಸಂಸತ್ತಿನ ಮುಂದಿರುವ ಮಹಿಳಾ ಮೀಸಲಾತಿ ಮಸೂದೆಯನ್ನು ಅಂಗೀಕರಿಸಬೇಕು.
7. ಗುಪ್ತ ಮತದಾನದ ಮೂಲಕ ಕಾರ್ಮಿಕ ಸಂಘಗಳಿಗೆ ಮಾನ್ಯತೆ ನೀಡುವ ಶಾಸನವನ್ನು ತರಬೇಕು.
8. ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ನಿಗ್ರಹಿಸಲು ಪರಿಷ್ಕೃತ ಲೋಕಪಾಲ್ ಮಸೂದೆಯನ್ನು ಅಂಗೀಕರಿಸಬೇಕು.

ರಾಷ್ಟ್ರೀಯ ಪ್ರಚಾರಾಂದೋಲನ ಜುಲೈ 15-31, 1997

ಬಡವರ ಹೆಸರಿನಲ್ಲೇ ರೇಶನ್ ವ್ಯವಸ್ಥೆಯಲ್ಲಿ ಕಡಿತ!

"ಬೆಲೆ ಸ್ಥಿರತೆಗಾಗಿ ಮತ್ತು ಅವಶ್ಯಕ ವಸ್ತುಗಳು ಬಡವರಿಗೆ ದೊರಕುವಂತೆ ಮಾಡುವ ಎರಡು ಗುರಿಗಳ ಸಾಧನೆಗಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಲಾಗುವುದು. .... ಬಡತನ ರೇಖೆಯ ಕೆಳಮಟ್ಟದಲ್ಲಿರುವ ಕುಟುಂಬಗಳಿಗೆ ವಿಶೇಷ ಪಡಿತರ ಚೀಟಿಗಳನ್ನು ಹಂಚಲಾಗುವುದು. ಇದರಲ್ಲಿ ಅತ್ಯಾವಶ್ಯಕ ಸಾಮಾಗ್ರಿಗಳನ್ನು ಸಾಮಾನ್ಯ ನೀಡಿಕೆ ಬೆಲೆಗಳ ಅರ್ಧದಷ್ಟು ದರದಲ್ಲಿ ಮಾರಲಾಗುವುದು" - ಇದು ಜೂನ್ ೧೯೯೬ ರಲ್ಲಿ ಸಂಯುಕ್ತ ರಂಗದ 'ಸಮಾನ ಕನಿಷ್ಠ ಕಾರ್ಯಕ್ರಮ' ನೀಡಿದ ಒಂದು ವಚನ. ಈ ವಚನ ಈಡೇರಿದೆಯೇ? ಸಂಯುಕ್ತ ರಂಗ ಸರಕಾರ ಇದನ್ನು ಈಡೇರಿಸಲು ಪ್ರಯತ್ನಿಸಿರುವ ವಿಧಾನ ಯಾವುದು? ಕೆಲವು ಸಂಗತಿಗಳನ್ನು ನೋಡಿ.

❖ ಎಡಪಕ್ಷಗಳ ಸತತ ಒತ್ತಡದ ನಂತರ ಜನವರಿ 26 ರಂದು ಪ್ರಜಾಪ್ರಭುತ್ವ ದಿನದ ಭಾಷಣದಲ್ಲಿ ಆಗಿನ ಪ್ರಧಾನಿ ದೇವೇಗೌಡರು ಕೆಂಪುಕೋಟೆಯಿಂದ ಸುಧಾರಿತ ರೇಶನ್ ವ್ಯವಸ್ಥೆಯನ್ನು ಪ್ರಕಟಿಸಿದರು. ನಂತರ ಇದು ಜಾರಿಗೆ ಬರಲು ಇನ್ನಷ್ಟು ಒತ್ತಡ, ಇನ್ನಷ್ಟು ಸಮಯ ಹಿಡಿದು ಜೂನ್ 1 ರಿಂದ ಹಲವು ರಾಜ್ಯಗಳಲ್ಲಿ ಕೊನೆಗೂ ಜಾರಿಗೆ ಬಂತು.

❖ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಪ್ರಕಾರ ಒಬ್ಬ ವ್ಯಕ್ತಿ ವರ್ಷಕ್ಕೆ 135 ಕೆ.ಜಿ. ಆಹಾರ ಧಾನ್ಯ ಸೇವಿಸಬೇಕು. ಆದರೆ ಜೂನ್ 1 ರಿಂದ ಜಾರಿಗೆ ಬಂದಿರುವ ಸುಧಾರಿತ ಅಥವಾ ಗುರಿಯಿಟ್ಟ ರೇಶನ್ ವ್ಯವಸ್ಥೆ(ಟಿಪಿಡಿಎಸ್) ಒಂದು ಕುಟುಂಬಕ್ಕೆ ನೀಡುವ ಆಹಾರಧಾನ್ಯ ತಿಂಗಳಿಗೆ 10 ಕೆ.ಜಿ. ಇದು ಅವಶ್ಯಕತೆಯ 18% ಮಾತ್ರ. ವಾಸ್ತವವಾಗಿ ಸಮಾನ ಕನಿಷ್ಟ ಕಾರ್ಯಕ್ರಮ 20 ಕೆ.ಜಿ. ಕೊಡುವುದಾಗಿ ಆಶ್ವಾಸನೆ ನೀಡಿತ್ತು. ಅದನ್ನೂ ಅರ್ಧಕ್ಕಿಳಿಸಲಾಗಿದೆ.

❖ ಆಹಾರ ದಾಸ್ತಾನಿನಲ್ಲಿ ಅಷ್ಟೊಂದು ಆಹಾರ ಧಾನ್ಯಗಳಿಲ್ಲ ಎಂಬುದು ಸರಕಾರದ ವಾದ. ಆದರೆ ಇದು ಕೇವಲ ಲೆಕ್ಕಾಚಾರದ ಕಸರತ್ತು. ದಾಸ್ತಾನಿನಲ್ಲಿರುವ ತಲಾ ಆಹಾರ ಧಾನ್ಯದ ಲೆಕ್ಕ ಹಾಕುವಾಗ ಬಡತನದ ರೇಖೆಯ ಕೆಳಗಿರುವ ಜನಗಳ ಸಂಖ್ಯೆಯನ್ನು ಗಮನಿಸಬೇಕೇ ಹೊರತು ಇಡೀ ಜನಸಂಖ್ಯೆಯನ್ನಲ್ಲ.

❖ ಬಡತನದ ರೇಖೆಯ ಕೆಳಗಿರುವ ಜನಗಳಿಗೆ ಅರ್ಧಬೆಲೆಯಲ್ಲಿ ಕೊಡಲಾಗುವುದು ಎಂದಾಗ ಇತರರಿಗೆ ಬೆಲೆಯೇರಿಸಬಾರದು ಎಂಬ ಅಂಶವೂ ಇತ್ತು. ಆದರೆ ಸರಕಾರ ಇದನ್ನು ಉಲ್ಲಂಘಿಸಿದೆ. ಹೀಗೆ ಒಂದೆಡೆ ಅರ್ಧಬೆಲೆಯ ಆಹಾರಧಾನ್ಯಗಳ ಕೋಟಾವನ್ನು 10 ಕೆ.ಜಿ.ಗಿಳಿಸಿ ಬೆಲೆಯನ್ನು ಹೆಚ್ಚಿಸಿ ಒಟ್ಟಾರೆಯಾಗಿ ಬಡತನದ ರೇಖೆಯ ಕೆಳಗಿರುವ ಜನಗಳೂ ಹೆಚ್ಚು ಬೆಲೆ ತೆರುವಂತೆ ಮಾಡಲಾಗಿದೆ. ಉದಾ: 4.02 ಪೈಸೆಯ ಗೋಧಿ ಬೆಲೆಯನ್ನು 5. ರೂ.ಗೆ ಏರಿಸಲಾಯಿತು. ಇದರಿಂದ ಬಡತನದ ರೇಖೆಯ ಕೆಳಗಿರುವ ಐದು ಜನರ ಒಂದು ಕುಟುಂಬ 10. ಕೆ.ಜಿ. ಅಕ್ಕಿಯನ್ನು 2.01 ರ ಬದಲು 2.50 ರೂ. ಗೆ ಪಡೆದರೆ, ತನ್ನ ಇತರ 20 ಕೆ.ಜಿ. ಅವಶ್ಯಕತೆಯನ್ನು 5. ರೂನಲ್ಲಿ ಖರೀದಿಸಬೇಕಾಗಿದೆ. ಇದಕ್ಕೆ ಒಟ್ಟು ಖರ್ಚು 125 ರೂ. ಆಗುತ್ತದೆ. ಹಿಂದಿನ ಪೂರ್ಣದರದಲ್ಲಿ ಅಂದರೆ ರೂ. 4.02 ರಂತೆ 30 ಕೆ.ಜಿ. ಕೊಟ್ಟಿದ್ದರೂ ಆಗುತ್ತಿದ್ದ ಖರ್ಚು ರೂ. 120.60. ಅಂದರೆ ಸುಧಾರಿತ ಯೋಜನೆಯಿಂದ ಕಮ್ಮಿಯಾಗುವ ಬದಲು ರೂ 4.40 ರಷ್ಟು ಹೆಚ್ಚಿತು!

❖ ಈ ಹೊಸ ಟಿಪಿಡಿಎಸ್ ರೇಶನ್ ವ್ಯವಸ್ಥೆ ಸಾರ್ವಜನಿಕ ವಿತರಣಾ ಪ್ರಮಾಣ ಆಯಾಯ ರಾಜ್ಯ ಕಳೆದ 10 ವರ್ಷಗಳಲ್ಲಿ ಪಡೆದ ಸರಾಸರಿ ಪ್ರಮಾಣದಲ್ಲಿರುವುದು ಎಂದು ವಿಧಿಸಿದೆ. ವಿವಿಧ ಕಾರಣಗಳಿಂದಾಗಿ ಇದು ಹೆಚ್ಚಿನ ರಾಜ್ಯಗಳಲ್ಲಿ ಇತ್ತೀಚಿನವರೆಗೆ ದೊರೆಯುತ್ತಿದ್ದ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಹೀಗೆ ಬಡತನರೇಖೆಯ ಮೇಲಿದ್ದವರ ಮಟ್ಟಿಗೆ ರೇಶನ್ ವ್ಯವಸ್ಥೆಯೇ ಇಲ್ಲದಂತಾದರೆ ಬಡತನ ರೇಖೆಯ ಕೆಳಗಿರುವವರು ತಮ್ಮ ಹೆಚ್ಚಿನ ಅವಶ್ಯಕತೆಯನ್ನು ಬಹಿರಂಗ ಮಾರುಕಟ್ಟೆಯಿಂದಲೇ ಪಡೆಯಬೇಕು ಎಂಬ ಪರಿಸ್ಥಿತಿ!

❖ ಈ ಹೊಸ ಟಿಪಿಡಿಎಸ್ ಆಹಾರ ಧಾನ್ಯಗಳ ಕೋಟಾವನ್ನು ಬಡತನದ ಕೆಳಗಿರುವ ಜನಗಳ ಪ್ರಮಾಣದ ಮೇಲೆ ವಿವಿಧ ರಾಜ್ಯಗಳಿಗೆ ನಿರ್ಧರಿಸಬೇಕಾಗಿತ್ತು. ಸಮಾನ ಕನಿಷ್ಟ ಕಾರ್ಯಕ್ರಮ ರೂಪಿಸುವಾಗ ಯೋಜನಾ ಆಯೋಗ ಈಗಾಗಲೇ ಒಪ್ಪಿರುವ ಲಕಡ್‌ವಾಲಾ ಸಮಿತಿಯ ಶಿಫಾರಸುಗಳ ಪ್ರಕಾರ ಬಡತನದ ರೇಖೆಯ ಕೆಳಗಿರುವ ಜನಗಳ ಪ್ರಮಾಣವನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಿತ್ತು. ಆದರೆ ಈ ಟಿಪಿಡಿಎಸ್ ಯೋಜನೆಯನ್ನು ಜಾರಿಗೆ ತಂದಾಗ ಇದನ್ನು ಲೆಕ್ಕಕ್ಕೆ ತಗೊಳ್ಳಲಿಲ್ಲ. ಅಲ್ಲದೆ ಹಲವು ರಾಜ್ಯಗಳು ತಮ್ಮದೇ ಲೆಕ್ಕಚಾರವನ್ನು ಬಳಸಿವೆ. ಉದಾಹರಣೆಗೆ ಉತ್ತರ ಪ್ರದೇಶ ಸರಕಾರದ ಪ್ರಕಾರ ವರ್ಷಕ್ಕೆ 8000 ರೂ. ಆದಾಯ ಅಂದರೆ ತಿಂಗಳಿಗೆ 667 ರೂ. ಆದಾಯ ಪಡೆಯುವವರು ಬಡವರಲ್ಲ! ಮಹಾರಾಷ್ಟ್ರದ ಶಿವಸೇನೆ ಸರಕಾರ ಇನ್ನೂ ಮುಂದೆ ಹೋಗಿ ತಿಂಗಳಿಗೆ 334 ರೂ. ಆದಾಯವಿದ್ದರೂ ಆತನ ಕುಟುಂಬ ಬಡತನದ ವ್ಯಾಖ್ಯೆಗೆ ಬರದಂತೆ ಮಾಡಿದೆ.

❖ ನರಸಿಂಹರಾವ್ ಸರಕಾರವೂ ಒಂದು ಸುಧಾರಿತ ರೇಶನ್ ವ್ಯವಸ್ಥೆ ಆರ್‌ಪಿಡಿಎಸ್ ತಂದಿತ್ತು. ಅದೊಂದು ದೊಡ್ಡ ಮೋಸವೇ. ಆದರೂ ಈ ಯೋಜನೆಯಲ್ಲಿ ಬುಡಕಟ್ಟು, ಬೆಟ್ಟಪ್ರದೇಶ ಹಾಗೂ ದಲಿತ ವಿಭಾಗಗಳ ಜನರಿಗೆ ನಿರ್ದಿಷ್ಟ ಪ್ರಮಾಣದ ಆಹಾರ ಧಾನ್ಯಗಳನ್ನು ಕೊಡಲಾಗುತ್ತಿತ್ತು. ಈಗ ಟಿಪಿಡಿಎಸ್ ಬಂದ ಮೇಲೆ ಸರಕಾರ ಈ ಆರ್‌ಪಿಡಿಎಸ್ ಅನ್ನು ನಿಲ್ಲಿಸಿಯೇ ಬಿಟ್ಟಿದೆ. ಅವರಿಗೆ ಇದುವರೆಗೆ ಸಿಗುತ್ತಿರುವಷ್ಟೂ ಸಿಗುವುದಿಲ್ಲ.

❖ ಈಗ ರೇಶನ್ ವ್ಯವಸ್ಥೆ ಕೇರಳದಲ್ಲಿ ಮಾತ್ರ 97% ಇದೆ. ಇತರ ದಕ್ಷಿಣ ರಾಜ್ಯಗಳಲ್ಲಿ ಮತ್ತು ಎಡರಂಗದ ಆಳ್ವಿಕೆಯಿರುವ ರಾಜ್ಯಗಳಿಗೆ ಇದು ಗಮನಾರ್ಹ ಪ್ರಮಾಣದಲ್ಲಿದೆ. ಅಂದರೆ ಇತರಡೆ ಇದರ ವ್ಯಾಪ್ತಿ ಬಹಳ ಸೀಮಿತ. ಈ ಹೊಸ ಟಿಪಿಡಿಎಸ್ ವ್ಯವಸ್ಥೆಯಿಂದಾಗಿ ರೇಶನ್ ವ್ಯವಸ್ಥೆ ಸಾಕಷ್ಟು ವ್ಯಾಪಕ ರೀತಿಯಲ್ಲಿ ಇರುವಲ್ಲಿ ಕುಸಿತ ಕಂಡರೆ, ಇತರೆಡೆಗಳಲ್ಲಿ ರೇಶನ್ ವ್ಯವಸ್ಥೆಯನ್ನೇ ಕೊನೆಗೊಳಿಸಿದಂತಹ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ.

ಆದ್ದರಿಂದಲೇ ಇದನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು 'ಬಡವರ ಹೆಸರಿನಲ್ಲೇ ಸರಕಾರಿ ರೇಶನ್ ವ್ಯವಸ್ಥೆಯ ಕಡಿತ' ಎಂದು ವರ್ಣಿಸಿರುವುದು. ಜನಸಾಮಾನ್ಯರನ್ನು ಹಣದುಬ್ಬರದಿಂದ ಉಳಿಸುವ ಬದಲು ಈ ವ್ಯವಸ್ಥೆ ಕೋಟಿಗಟ್ಟಲೆ ಜನಗಳನ್ನು ಬಹಿರಂಗ ಮಾರುಕಟ್ಟೆಯ ದವಡೆಗೆ ತಳ್ಳಿದೆ ಎನ್ನುತ್ತಾರೆ ಅವರು.

ಇದೇ ಕಾರಣದಿಂದಾಗಿ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಮುಖ್ಯಮಂತ್ರಿ ಜ್ಯೋತಿಬಸುರವರು ಕಳೆದ ತಿಂಗಳಲ್ಲೇ (ಜೂನ್ 16ರಂದು)ಪ್ರಧಾನ ಮಂತ್ರಿಗಳಿಗೆ ಈ ಕುರಿತು ಪತ್ರ ಬರೆದು 'ಬೆಲೆಗಳಿಂದ ಪರಿಹಾರ ನೀಡುವ ಉದ್ದೇಶದ ಒಂದು ಯೋಜನೆ ವಾಸ್ತವವಾಗಿ ಬೆಲೆಗಳನ್ನು ಇನ್ನಷ್ಟು ಹೆಚ್ಚಿಸಿದೆ. ಆಹಾರ ಧಾನ್ಯಗಳ ಪ್ರಮಾಣವನ್ನು ಇನ್ನಷ್ಟು ಇಳಿಸಿದೆ" ಎಂದು ಹೇಳಿದ್ದರು. ಆ ಪತ್ರದಲ್ಲಿ ಇದನ್ನು ಸರಿಪಡಿಸಲು ರಾಜ್ಯಗಳಿಗೆ ಪಡಿತರ ವ್ಯವಸ್ಥೆಯಲ್ಲಿ ನೀಡುವ ಆಹಾರಧಾನ್ಯಗಳ ಪ್ರಮಾಣವನ್ನು ಕಡಿತ ಮಾಡದೆ ಹಿಂದಿನ ಪ್ರಮಾಣದಲ್ಲೇ ನೀಡಬೇಕು ಮತ್ತು ಬಡತನದ ರೇಖೆಯ ಕೆಳಗಿರುವ ಕುಟುಂಬಗಳಿಗೆ 30 ಕೆ.ಜಿ. ಆಹಾರ ಧಾನ್ಯಗಳನ್ನು ಅರ್ಧ ಬೆಲೆಯಲ್ಲಿ ಕೊಡಬೇಕು. ಇಲ್ಲವೇ 20 ಕೆ.ಜಿ.ಯನ್ನು ಅರ್ಧ ಬೆಲೆಯಲ್ಲಿ ಹಾಗೂ ಉಳಿದ 20 ಕೆ.ಜಿಯನ್ನು ಹಿಂದಿನ ಬೆಲೆಗಳಲ್ಲಿ ಕೊಡಬೇಕು ಎಂದು ಆಗ್ರಹ ಪಡಿಸಿದ್ದರು. ಕರ್ನಾಟಕ ಸರಕಾರ ಹೀಗೆ ಒತ್ತಾಯಿಸುವ ಬದಲು ರೇಶನ್ ವ್ಯವಸ್ಥೆಯನ್ನೇ ಕಳಚಲು ಮುಂದಾಯಿತಷ್ಟೆ.

ಸಿಪಿಐ(ಎಂ) ರಾಷ್ಟ್ರೀಯ ಪ್ರಚಾರಾಂದೋಲನದ ಅವಧಿಯಲ್ಲಿ ಈ ಪ್ರಶ್ನೆಯನ್ನು ಜನಗಳ ಬಳಿಗೊಯ್ದು ಪಡಿತರ ವ್ಯವಸ್ಥೆ ಕುರಿತಂತೆ ಈ ಕೆಳಗಿನ ಬೇಡಿಕೆಗಳತ್ತ ಸಂಯುಕ್ತ ರಂಗ ಸರಕಾರ ಗಮನ ಸೆಳೆಯಲು ಪ್ರಯತ್ನಿಸುತ್ತದೆ.


1. ಲಕಡ್‌ವಾಲಾ ಸಮಿತಿ ಶಿಫಾರಸು ಮಾಡಿದ ಹಾಗೂ ಯೋಜನಾ ಆಯೋಗ ಒಪ್ಪಿದ ಬಡತನ ರೇಖೆಯ ಕೆಳಗಿನ ಜನಗಳ ಪ್ರಮಾಣದ ಆಧಾರದ ಮೇಲೆ ಅರ್ಧ ಬೆಲೆಯಲ್ಲಿ ಆಹಾರಧಾನ್ಯಗಳ ಕೋಟಾವನ್ನು ನಿಗದಿ ಪಡಿಸಬೇಕು.

2. ರಾಜ್ಯಗಳಿಗೆ ಕೇಂದ್ರದಿಂದ ಕೊಡುವ ಆಹಾರಧಾನ್ಯಗಳಲ್ಲಿ ಕಡಿತ ಮಾಡಬಾರದು. ಇದರ ಬದಲು ಎಲ್ಲೆಲ್ಲಿ ಅಗತ್ಯವೋ ಅಲ್ಲಿ ಈ ಪ್ರಮಾಣವನ್ನು ಹೆಚ್ಚಿಸಬೇಕು.

3. ಅಕ್ಕಿ ಮತ್ತು ಗೋಧಿಯ ರೇಶನ್ ಬೆಲೆ ಹೆಚ್ಚಿಸಬಾರದು.

4. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಉತ್ತಮ ಪಡಿಸಲು ಹಾಗೂ ಪರಿಣಾಮಕಾರಿಗೊಳಿಸಲು ರೇಶನ್ ಅಂಗಡಿಗಳ ಮೂಲಕ 14 ಜೀವನಾವಶ್ಯಕ ಸರಕುಗಳನ್ನು ವಿತರಿಸಬೇಕು.

ರಾಷ್ಟ್ರೀಯ
ಪ್ರಚಾರಾಂದೋಲನ
ಜುಲೈ 15-31, 1997



ಸಂಯುಕ್ತ ರಂಗದ ವಿಶ್ವಾಸಾರ್ಹತೆಗೆ ಕುಂದು ಬರಬಾರದು

ಪುಟ 4 ರಿಂದ

ವಾಗಿರುವ ಜನತಾದಳ ಈ ಬೆದರಿಕೆಯನ್ನು ಎದುರಿಸಬೇಕಾಗಿದೆ.

ಸಂಯುಕ್ತ ರಂಗ ರಚನೆಯಾದಾಗ ಭ್ರಷ್ಟಾಚಾರದ ಮೊಕದ್ದಮೆಗಳಲ್ಲಿ ಆರೋಪ ಪಟ್ಟಿಗೊಳಗಾದವರು ಯಾರನ್ನೂ ಸಂಪುಟದಲ್ಲಿ ತಗೊಳ್ಳಬಾರದು ಎಂಬ ಎಡ ಪಕ್ಷಗಳ ನಿಲುವಿನಿಂದಾಗಿಯೇ ಶರದ್ ಯಾದವ್, ಮಾಧವರಾವ್ ಸಿಂಧ್ಯಾ, ಅರ್ಜುನ್ ಸಿಂಗ್ ಮುತ್ತಿತರರು ಮಂತ್ರಿಗಳಾಗಲಿಲ್ಲ. ಜೈನ್ ಡೈರಿಗಳಲ್ಲಿ ಹೆಸರಿದೆ ಎಂಬ ಕಾರಣಕ್ಕಾಗಿಯೇ, ಆರೋಪದ ಪತ್ರ ದಾಖಲಾಗದಿದ್ದರೂ ಎಸ್.ಆರ್.ಬೊಮ್ಮಾಯಿಯವರು ಜನತಾದಳದ ಅಧ್ಯಕ್ಷ ಸ್ಥಾನದಿಂದ ಇಳಿಯಬೇಕಾಯಿತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಬೊಮ್ಮಾಯಿಯವರ ರಾಜೀನಾಮೆಯಿಂದಾಗಿಯೇ ಲಾಲೂ ಯಾದವ್ ದಳದ ಅಧ್ಯಕ್ಷ ಸ್ಥಾನಕ್ಕೇರಿದರು. ಆ ವೇಳೆ ಸ್ವತಃ ಲಾಲೂರವರು ಕೂಡಾ ಬೊಮ್ಮಾಯಿಯವರ ರಾಜೀನಾಮೆ ಕೇಳಿದ್ದರು.

ಸಂಯುಕ್ತ ರಂಗ ತಾನೊಂದು ಜಾತ್ಯಾತೀತ ಪರ್ಯಾಯ 'ಎಂದು ತೋರಿಸಿಕೊಳ್ಳಬೇಕಾದರೆ ಲಾಲೂ ಪ್ರಸಾದ್ ಯಾದವ್ ಬಿಹಾರದ ಮುಖ್ಯಮಂತ್ರಿ ಸ್ಥಾನದಿಂದ ರಾಜೀನಾಮೆ ಕೊಡುವಂತೆ ಮಾಡಬೇಕು ಹಾಗೂ ಜನತಾದಳ ಸದಸ್ಯರಾಗಿ ಕೇಂದ್ರ ಸಂಪುಟದಲ್ಲಿ ತಗೊಂಡು ಈಗ ಪಕ್ಷ ಬದಲಿಸಿದ ಮಂತ್ರಿಗಳನ್ನು ಕೈಬಿಡಬೇಕು. ಲಾಲೂರ ಹೊಸ ರಚನೆಯನ್ನು ಸಂಯುಕ್ತ ರಂಗ ಅಂಗ ಪಕ್ಷವಾಗಿ ಮಾಡಲು ಸಾಧ್ಯವಿಲ್ಲ. ಅದನ್ನು ಸೇರಿಸಿಕೊಳ್ಳುವುದೆಂದರೆ ಸಂಯುಕ್ತ ರಂಗ ಜನಗಳ ನಡುವೆ ತನ್ನ ವಿಶ್ವಾಸಾರ್ಹತೆಯನ್ನು ಇಳಿಸಿಕೊಂಡಂತಲ್ಲದೆ ಸಂಯುಕ್ತ ರಂಗ ಕಾರ್ಯನಿರ್ವಹಣೆಯನ್ನೇ ಅಸ್ತವ್ಯಸ್ತಗೊಳಿಸುತ್ತದೆ.

ಕಾಂಗ್ರೆಸ್ ಆಟ


ವಿವಿಧ ಭ್ರಷ್ಟಾಚಾರ ಮೊಕದ್ದಮೆಗಳ ತನಿಖೆಗಳನ್ನು ತಡೆಯಲು ಕಾಂಗ್ರೆಸ್ ಪಕ್ಷ ಒತ್ತಡ ಹಾಕಲು ಪ್ರಯತ್ನಿಸುತ್ತಲೇ ಇದೆ. ಬಿಹಾರದಲ್ಲಿ ಪಶು ಸಂಗೋಪನಾ ಹಗರಣದಲ್ಲಿ ಒಬ್ಬ ಮಾಜಿ ಮುಖ್ಯಮಂತ್ರಿಯೂ ಸಿಲುಕಿಕೊಂಡಿದ್ದಾರೆ. ಆದ್ದರಿಂದ ಎಲ್ಲೆಡೆಯಿಂದ ಟೀಕೆಗೊಳಗಾಗಿರುವ ಲಲ್ಲೂ ಪ್ರಸಾದ್‌ಯಾದವ್‌ರಿಗೆ ಸಹಾಯ ಹಸ್ತವನ್ನು ಕಾಂಗ್ರೆಸ್ ಚಾಚಿದರೆ ಅದರಲ್ಲಿ ಆಶ್ಚರ್ಯವಿಲ್ಲ. ಯಾದವ್ ಆಗಲೇ ಅದರ ನೆರವು ಕೇಳಿದ್ದಾರೆ. ಕಾಂಗ್ರೆಸ್ ಸಂಯುಕ್ತ ರಂಗವನ್ನು ಒಡೆದು ಎಡಪಕ್ಷಗಳನ್ನು ದೂರ ಸರಿಸುವ ಪ್ರಯತ್ನವನ್ನು ಈಗಾಗಲೇ ಆರಂಭಿಸಿದೆ. ಕಾಂಗ್ರೆಸ್ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಈಗಾಗಲೇ ಎಡಪಕ್ಷಗಳ ಮೇಲೆ, ಮುಖ್ಯವಾಗಿ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಮೇಲೆ ಹಲ್ಲೆಗಳನ್ನು ಆರಂಭಿಸಿದ್ದಾರೆ. ಇದರಲ್ಲಿ ಆಶ್ಚರ್ಯವಿಲ್ಲ, ಏಕೆಂದರೆ ಭ್ರಷ್ಟಾಚಾರ, ಆರ್ಥಿಕ ಉದಾರೀಕರಣ ನೀತಿ, ಕೋಮುವಾದದ ವಿರುದ್ಧ ಹಾಗೂ ರಾಷ್ಟ್ರೀಯ ಐಕ್ಯತೆಗಾಗಿ ನಿರಂತರ ಹೋರಾಟ ನಡೆಸುತ್ತಿರುವುದು ಎಡಪಕ್ಷಗಳು ಮಾತ್ರ. ಕಾಂಗ್ರೆಸ್ ಮತ್ತೆ ಕೈವಾಡದ ರಾಜಕೀಯವನ್ನು ಆರಂಭಿಸಲು ಪ್ರಯತ್ನಿಸುತ್ತಿದೆ. ಆದರೆ ಈ ಆಟ ಸಾಗುವುದಿಲ್ಲ. ತನ್ನ ಆರ್ಥಿಕ ಕಾರ್ಯಕ್ರಮವನ್ನು ಬದಲಿಸದೆ, ಭ್ರಷ್ಟಾಚಾರದ ವಿರುದ್ಧ ಒಂದು ದೃಢ ನಿಲುವು ತಳೆಯದೇ ಇದ್ದರೆ ಕಾಂಗ್ರೆಸ್‌ನ ಭವಿಷ್ಯ ಮಂಕಾಗಿಯೇ ಇರುತ್ತದೆ.

ಲಾಲೂ ಯಾದವ್ ಮತ್ತು ಅವರ ಹೊಸ ಪಕ್ಷ ಕುರಿತಂತೆ ಯಾವುದೇ ರಾಜಿ-ಸಂಧಾನದ ನಿಲುವು ಜನತಾದಳಕ್ಕೆ ಕಳಂಕ ತರುತ್ತದಷ್ಟೇ ಅಲ್ಲ, ಜನರ ಕಣ್ಣಲ್ಲಿ ಸಂಯುಕ್ತ ರಂಗಕ್ಕೂ ಕಳಂಕ ತರುತ್ತದೆ. ಇದು ಬಿಜೆಪಿ ನೇತೃತ್ವದ ಕೋಮುವಾದಿ ಶಕ್ತಿಗಳಿಗೊಂದು ಉತ್ತಮ ಅವಕಾಶ ಕಲ್ಪಿಸಿಕೊಡುತ್ತದೆ. ಅವರು ಈ ಅವಕಾಶವನ್ನು ತಮ್ಮನ್ನು ಬಲಪಡಿಸಿಕೊಳ್ಳಲು ಬಳಸಿದರೆ ಸಂಯುಕ್ತ ರಂಗ ರಚನೆಯ ಉದ್ದೇಶವೇ ವಿಫಲವಾಗುತ್ತದೆ. ಇದಕ್ಕೆ ಯಾವುದೇ ರೀತಿಯಲ್ಲಿ ಅವಕಾಶ ನೀಡಬಾರದು.

ಎಡಪಕ್ಷಗಳ ಪಾತ್ರ

ಇಂತಹ ಸನ್ನಿವೇಶದಲ್ಲಿ ಎಡಪಕ್ಷಗಳ ಪಾತ್ರ ಮಹತ್ವಪೂರ್ಣ. ಸಂಯುಕ್ತ ರಂಗದ ಬಲ ಮತ್ತು ವಿಶ್ವಾಸಾರ್ಹತೆಯನ್ನು ಬುಡಮೇಲು ಮಾಡುವ ಇಂತಹ ಶಕ್ತಿಗಳನ್ನು ದೂರವಿಡಲು ಸತತವಾಗಿ ಒತ್ತಡವನ್ನು ಹಾಕುತ್ತಿರುವ ಜತೆಯಲ್ಲಿಯೇ ಎಡಪಕ್ಷಗಳು ಆರ್ಥಿಕ ನೀತಿಗಳು, ಭ್ರಷ್ಟಾಚಾರ, ಕೋಮುವಾದದ ವಿರುದ್ಧ, ರಾಷ್ಟ್ರೀಯ ಐಕ್ಯತೆಗಾಗಿ ತನ್ನ ಸ್ವತಂತ್ರ ಚಟುವಟಿಕೆಗಳನ್ನು, ಹೋರಾಟಗಳನ್ನು ತೀವ್ರಗೊಳಿಸಬೇಕಾಗಿದೆ.

ಈ ಸಂದರ್ಭದಲ್ಲಿಯೇ ಸಿಪಿಐ(ಎಂ) ಜುಲೈ 15ರಿಂದ 31ರವರೆಗೆ ಜನಗಳ ಜ್ವಲಂತ ಪ್ರಶ್ನೆಗಳ ಮೇಲೆ ಒಂದು ಜನಾಂದೋಲನ ನಡೆಸಲು ನಿರ್ಧರಿಸಿದೆ. ಈ ಪ್ರಶ್ನೆಗಳನ್ನು ಜನಗಳ ಬಳಿಗೊಯ್ದು, ಅವರನ್ನು ದೊಡ್ಡ ಪ್ರಮಾಣದಲ್ಲಿ ಅಣಿನೆರೆಸುವ ಮೂಲಕ ಮಾತ್ರವೇ ಅವರ ವಿಶ್ವಾಸವನ್ನು ಗಳಿಸಲು ಸಾಧ್ಯ. ಇದರಿಂದ ಸಂಯುಕ್ತ ರಂಗದ ವಿವಿಧ ಅಂಗ ಪಕ್ಷಗಳಲ್ಲಿ ಧೋರಣೆಗಳ ವಿಷಯದಲ್ಲಿ ಸೂಕ್ತ ನಿಲುವುಗಳನ್ನು ತಳೆಯುವಂತಹ ವಿಶ್ವಾಸವನ್ನು ಮೂಡಿಸಬಹುದು. ○



ಸಿಪಿಐ(ಎಂ) ಜುಲೈ ೧೫ರಿಂದ ೩೧ರವರೆಗೆ ಜನಗಳ ಜ್ವಲಂತ ಪ್ರಶ್ನೆಗಳ ಮೇಲೆ ಒಂದು ಜನಾಂದೋಲನ ನಡೆಸಲು ನಿರ್ಧರಿಸಿದೆ. ಈ ಪ್ರಶ್ನೆಗಳನ್ನು ಜನಗಳ ಬಳಿಗೊಯ್ದು, ಅವರನ್ನು ದೊಡ್ಡ ಪ್ರಮಾಣದಲ್ಲಿ ಅಣಿನೆರೆಸುವ ಮೂಲಕ ಮಾತ್ರವೇ ಅವರ ವಿಶ್ವಾಸವನ್ನು ಗಳಿಸಲು ಸಾಧ್ಯ. ಇದರಿಂದ ಸಂಯುಕ್ತ ರಂಗದ ವಿವಿಧ ಅಂಗ ಪಕ್ಷಗಳಲ್ಲಿ ಧೋರಣೆಗಳ ವಿಷಯದಲ್ಲಿ ಸೂಕ್ತ ನಿಲುವುಗಳನ್ನು ತಳೆಯುವಂತಹ ವಿಶ್ವಾಸವನ್ನು ಮೂಡಿಸಬಹುದು.

ದಲಿತರ ಮೇಲೆ ಮುಗಿ ಬಿದ್ದ ಶಿವಸೇನೆ-ಬಿಜೆಪಿ ಸರಕಾರ

ದೇಶದೊಳಗೆ



ಹುತಾತ್ಮರಾದ ಕಾಂ.ದೇವವರ್ಮಾ

ತ್ರಿಪುರದ ಒಬ್ಬ ಧೀಮಂತ ಬುಡಕಟ್ಟು ನಾಯಕ ಬಿರೋದ್ ದೇವವರ್ಮಾ ಜುಲೈ ಒಂಭತ್ತರಂದು ಮೃತಪಟ್ಟರು. ಬುಡಕಟ್ಟು ಗೆರಿಲ್ಲಾಗಳು ದೇವವರ್ಮಾ ಅವರ ಮೇಲೆ ಜುಲೈ 3ರಂದು ಗುಂಡಿನ ಧಾಳಿ ನಡೆಸಿದ್ದರು. ಗುಂಡೇಟಿನಿಂದ ಗಂಭೀರವಾಗಿ ಗಾಯಗೊಂಡಿದ್ದ ಸಿಪಿಐ(ಎಂ)ನ ಪ್ರಮುಖ ನಾಯಕರೂ ಆಗಿರುವ ಕಾಂ.ದೇವವರ್ಮಾ ಅಗರ್ತಲಾದ ಜಿ.ಬಿ. ಆಸ್ಪತ್ರೆಯಲ್ಲಿ 9ರಂದು ಕೊನೆಯುಸಿರೆಳೆದರು.

ಪಶ್ಚಿಮ ತ್ರಿಪುರಾದ ಖೊವೈ ಪಟ್ಟಣದಲ್ಲಿರುವ ವಿಶ್ರಾಂತಿ ಗೃಹವೊಂದರ ಮೇಲೆ ಎರಗಿದ ನಾಲ್ವರು ಶಸ್ತ್ರಸಜ್ಜಿತ ದುಷ್ಕರ್ಮಿಗಳು ದೇವವರ್ಮಾ ಅವರ ಮೇಲೆ ಗುಂಡಿನ ಮಳೆಗರೆದಿದ್ದರು.

ರಾಷ್ಟ್ರೀಯ ಸಮಗ್ರತೆ ಮತ್ತು ಕೋಮು ಸೌಹಾರ್ದಕ್ಕಾಗಿ ಸಲ್ಲಿಸಿದ ಅಮೋಘ ಕೊಡುಗೆಯನ್ನು ಪರಿಗಣಿಸಿ ಕಾಂ.ದೇವವರ್ಮಾ ಅವರಿಗೆ ಕಬೀರ ಪುರಸ್ಕಾರ ಪ್ರಶಸ್ತಿ ಲಭಿಸಿತ್ತು. ರಾಷ್ಟ್ರಪತಿಗಳು ಈಚೆಗಷ್ಟೇ ಈ ಪ್ರಶಸ್ತಿಯನ್ನು ಈ ಹಿರಿಯ ಮುಖಂಡನಿಗೆ ಪ್ರಧಾನ ಮಾಡಿದ್ದರು.

ಭಾರಿ ಪ್ರತಿಭಟನೆ

ಕಾ.ದೇವವರ್ಮಾರ ಮೇಲೆ ನಡೆದ ಮಾರಕ ಹಲ್ಲೆಯನ್ನು ಪ್ರತಿಭಟಿಸಿ ಜುಲೈ 5ರಂದು ಇಡೀ ಖೊವೈ ಉಪ ವಿಭಾಗದಲ್ಲಿ ಪ್ರದರ್ಶನಗಳು ನಡೆದವು.

ಕಾಂಗ್ರೆಸ್ ಬೆಂಬಲಿತ, ಅಮರ್ ಬಂಗಾಲಿ ಹಾಗೂ ಆನಂದ ಮಾರ್ಗಿ ನೇತೃತ್ವದ ಬಂಗಾಳಿ ಛಿದ್ರಕಾರಿ ಶಕ್ತಿಗಳು ಕಳೆದ ಫೆಬ್ರವರಿ ತಿಂಗಳಲ್ಲಿ ಖೋವೈಯಲ್ಲಿ ಜನಾಂಗೀಯ ಗಲಭೆಯನ್ನು ಹುಟ್ಟು ಹಾಕಿದ್ದರು. ತಮ್ಮ ವ್ಯಕ್ತಿತ್ವ ಛಿ ಹಾಗೂ ಆಯಾಸ ಅರಿಯದ ನಿರಂತರ ಚಟುವಟಿಕೆಗಳಿಂದ ಈ ಪರಿಸ್ಥಿತಿಯನ್ನು ಕಾಮ್ರೇಡ್ ದೇವವರ್ಮಾ ಹೇಗೆ ತಹಬಂದಿಗೆ ತಂದಿದ್ದರು ಎನ್ನುವುದನ್ನು ಸಿಪಿಐ(ಎಂ) ತ್ರಿಪುರಾ ರಾಜ್ಯ ಕಾರ್ಯದರ್ಶಿ ಮಂಡಳಿ ನೆನಪಿಸಿ ಕೊಂಡಿದೆ.

ಮುಂಬಯಿಯಲ್ಲಿ ಗೋಳೀಬಾರಿಗೆ ಹತ್ತಾರು ಜನರ ಬಲಿ

ಈಶಾನ್ಯ ಮುಂಬಯಿಯ ಘಾಟ್ ಕೋಪರ್‌ನ ರಮಾಬಾಯಿ ಕಾಲನಿಯಲ್ಲಿ ಜುಲೈ 11ರಂದು ಡಾ.ಅಂಬೇಡ್ಕರ್ ಪ್ರತಿಮೆಗೆ ಅಪಮಾನ ಮಾಡಿದ್ದರ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ಉದ್ರಿಕ್ತ ಗುಂಪನ್ನು ಚದುರಿಸಲು ಪೋಲೀಸರು ಗೋಳೀಬಾರು ನಡೆಸಿದಾಗ 11 ಜನರು ಮೃತಪಟ್ಟರು.

ಅಂಬೇಡ್ಕರ್ ಪ್ರತಿಮೆಗೆ ಚಪ್ಪಲಿ ಹಾರ ಹಾಕಿದ್ದನ್ನು ಬೆಳಿಗ್ಗೆ ಕಂಡ ಉದ್ರಿಕ್ತರಾದ ಜನರು ಪಂತ್‌ನಗರ್ ಪೋಲೀಸ್ ಠಾಣೆಗೆ ಮುತ್ತಿಗೆ ಹಾಕಿ ಅಂಬೇಡ್ಕರ್ ಪ್ರತಿಮೆಗೆ ಅಪಮಾನ ಮಾಡಿದ ಕಿಡಿಗೇಡಿಗಳ ವಿರುದ್ಧ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದರು. ಉದ್ರಿಕ್ತ ಗುಂಪು ಹಿಂಸಾಚಾರದಲ್ಲಿ ತೊಡಗಿದಾಗ ಪರಿಸ್ಥಿತಿಯನ್ನು ಹತೋಟಿಗೆ ತರಲು ವಿಫಲರಾದ ಪೋಲೀಸರು ಗುಂಡು ಹಾರಿಸಿದರು ಎನ್ನಲಾಗಿದೆ.

ಭಾರೀ ಅನಾಹುತ ಆಗುವುದನ್ನು ತಪ್ಪಿಸಲು ಗೋಲೀಬಾರ್ ನಡೆಸಬೇಕಾಯಿತು ಎಂದು ಪೋಲೀಸ್ ದೌರ್ಜನ್ಯವನ್ನು ಪೋಲೀಸ್ ಇಲಾಖೆ ಹಾಗೂ ರಾಜ್ಯ ಸರಕಾರ ಸಮರ್ಥಿಸಿಕೊಂಡಿದೆ. ಆದರೆ ಅಂತಹ ಯಾವುದೇ ಅನಾಹುತವನ್ನು ತಪ್ಪಿಸುವುದಕ್ಕೆ ಅಂಬೇಡ್ಕರ್‌ಗಾದ ಅವಮಾನವನ್ನು ಪ್ರತಿಭಟಿಸುತ್ತಿದ್ದ ಜನರನ್ನು ಕೊಲ್ಲುವುದೇ ಶಿವಸೇನೆ-ಬಿಜೆಪಿ ಸರಕಾರದ ಪೋಲೀಸರ ಗುರಿಯಾಗಿತ್ತೆನ್ನುವುದು ಸ್ಪಷ್ಟವಾಗಿದೆ. ಗೋಲೀಬಾರಿನಲ್ಲಿ ಬಹುತೇಕ ಜನರು ಮೊಣಕಾಲಿಗಿಂತ ಮೇಲೆ ಗುಂಡೇಟು ತಗುಲಿಯೇ ಸತ್ತಿರುವುದು ಪೋಲೀಸ್ ದೌರ್ಜನ್ಯಕ್ಕೆ ಸಾಕ್ಷಿಯಾಗಿದೆ. ಮೊಣಕಾಲಿಗಿಂತ ಕೆಳಗೆ ಗುಂಡು ಹಾರಿಸಬೇಕೆಂಬುದು ಗೋಲೀಬಾರ್‌ನ ನಿಯಮವಾಗಿದೆ.

ಗೋಲೀಬಾರಿನಲ್ಲಿ ಚಿಕ್ಕ ಮಕ್ಕಳು ಮತ್ತು ಮಹಿಳೆಯರು ಕೂಡಾ ಸತ್ತಿದ್ದು ಇದು ಪೋಲೀಸರು ಬೇಕಾ ಬಿಟ್ಟಿಯಾಗಿ ಗುಂಡು ಹಾರಿಸಿರುವುದಕ್ಕೆ ಇನ್ನೊಂದು ಪುರಾವೆಯಾಗಿದೆ.

ಗೋಳಿಬಾರ್ ಪ್ರಕರಣ ರಾಜ್ಯ ವಿಧಾನ ಮಂಡಲದಲ್ಲಿ ಪ್ರಸ್ತಾಪವಾಗಿ ಉಪ ಮುಖ್ಯಮಂತ್ರಿ ಗೋಪಿನಾಥ್ ಮುಂಡೆ ರಾಜೀನಾಮೆ ನೀಡಬೇಕೆಂದು ಪ್ರತಿಪಕ್ಷಗಳು ಆಗ್ರಹಿಸಿದವು.

ನ್ಯಾಯಾಂಗ ತನಿಖೆ

ಈ ಘಟನೆಯ ಬಗ್ಗೆ ನ್ಯಾಯಾಂಗ ತನಿಖೆ ನಡೆಸುವುದಾಗಿ ಮುಖ್ಯಮಂತ್ರಿ ಮನೋಹರ ಜೋಷಿ ಮಹಾರಾಷ್ಟ್ರ ವಿಧಾನಸಭೆಯಲ್ಲಿ ತಿಳಿಸಿದ್ದಾರೆ. ಗೋಳೀಬಾರ್‌ನಲ್ಲಿ ಮೃತಪಟ್ಟ ಪ್ರತಿಯೊಬ್ಬರ ಸಮೀಪದ ಸಂಬಂಧಿಗಳಿಗೆ 1 ಲಕ್ಷ ರೂ. ಪರಿಹಾರ ಧನ ನೀಡುವುದಾಗಿ ಅವರು ಪ್ರಕಟಿಸಿದರು.

ಮಹಾರಾಷ್ಟ್ರ ಬಂದ್, ಹಿಂಸೆ:
ಮತ್ತೆ ಗೋಲೀಬಾರ್‌ನಲ್ಲಿ 2 ಸಾವು

ಈ ಪ್ರಕರಣವನ್ನು ಪ್ರತಿಭಟಿಸಿ ಜುಲೈ 12ರಂದು ಮುಂಬಯಿಯಲ್ಲಿ ಬಂದ್ ಆಚರಿಸಲಾಯಿತು. 14ರಂದು ಮಹಾರಾಷ್ಟ್ರ ಬಂದ್ ನಡೆಯಿತು. ಈ ಸಂದರ್ಭದಲ್ಲಿ ನಡೆದ ಗೋಲೀಬಾರ್‌ನಲ್ಲಿ ಇನ್ನಿಬ್ಬರು ಮೃತಪಟ್ಟರು. ಇದರಿಂದಾಗಿ ಪೋಲೀಸ್ ದೌರ್ಜನ್ಯದಲ್ಲಿ ಸತ್ತವರ ಸಂಖ್ಯೆ 14ಕ್ಕೇರಿದೆ.

ಪಾಸ್ವಾನ್ ಆಕ್ರೋಶ

ಅಖಿಲ ಭಾರತ ದಲಿತ ಸೇನಾ ಅಧ್ಯಕ್ಷರೂ ಆಗಿರುವ ಕೇಂದ್ರ ರೈಲ್ವೇ ಸಚಿವ ರಾಂವಿಲಾಸ್ ಪಾಸ್ವಾನ್ ಮುಂಬಯಿಗೆ ತೆರಳಿ ಪೋಲೀಸ್ ಗೋಲೀಬಾರ್‌ನಲ್ಲಿ ಸತ್ತವರ ಕುಟುಂಬಕ್ಕೆ ಪ್ರಧಾನಿಯ ಪರಿಹಾರ ನಿಧಿಯಿಂದ ತಲಾ ಒಂದು ಲಕ್ಷ ರೂ. ಹಾಗೂ ಗಾಯಗೊಂಡವರಿಗೆ 25 ಸಾವಿರ ರೂ. ಪರಿಹಾರ ನೀಡುವುದಾಗಿ ಸ್ಥಳದಲ್ಲೇ ಪ್ರಕಟಿಸಿದರು.

ಈ ದುರ್ಘಟನೆ ಬಗ್ಗೆ ಮಹಾರಾಷ್ಟ್ರ ಸರಕಾರ ಹೈಕೋರ್ಟು ನ್ಯಾಯಾಧೀಶರೊಬ್ಬರಿಂದ ನಿಗದಿತ ಅವಧಿಯಲ್ಲಿ ತನಿಖೆ ನಡೆಸಬೇಕು ಎಂದು ಪಾಸ್ವಾನ್ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

ಅಂಬೇಡ್ಕರ್ ಪ್ರತಿಮೆಗೆ ಅವಮಾನ ಮಾಡಿದ ಆರೋಪಿಗಳನ್ನು ಪತ್ತೆ ಮಾಡುವುದು ರಾಜ್ಯ ಸರಕಾರದ ಹೊಣೆ. ದುರದೃಷ್ಟವಶಾತ್ ಅದು ಆರೋಪಿಗಳನ್ನು ಹಿಡಿಯುವ ಬದಲು ಅಂಬೇಡ್ಕರ್ ಅನುಯಾಯಿಗಳ ಮೇಲೆ ಗುಂಡು ಹಾರಿಸಿದೆ ಎಂದವರು ಟೀಕಿಸಿದರು.

ರಾಜೀನಾಮೆಗೆ ಒತ್ತಾಯ

ರಾಜ್ಯ ಗೃಹ ಖಾತೆ ಹೊಂದಿರುವ ಉಪ ಮುಖ್ಯಮಂತ್ರಿ ಗೋಪಿನಾಥ್ ಮುಂಡೆ ರಾಜೀನಾಮೆ ನೀಡಬೇಕೆಂಬ ಪ್ರಬಲ ಒತ್ತಾಯ ಕೇಳಿ ಬಂದಿದೆ.

ಪೋಲೀಸರು ಸಂಯಮದಿಂದ ಪರಿಸ್ಥಿತಿಯನ್ನು ನಿಯಂತ್ರಿಸಿದ್ದರೆ ಇಂತಹ ಘಟನೆ ತಡೆಗಟ್ಟಬಹುದಿತ್ತು. ಇದಕ್ಕೆ ಗೃಹ ಸಚಿವರು ಹೊಣೆಗಾರರು ಎಂಬುದು ಸ್ಪಷ್ಟವಾಗಿದೆ.

ದಲಿತರ ಮೇಲಿನ ಈ ಪೋಲೀಸ್ ದೌರ್ಜನ್ಯ ದೇಶಾದ್ಯಂತ ಆಕ್ರೋಶದ ಅಲೆಯನ್ನು ಎಬ್ಬಿಸಿದೆ. ಮನುವಾದಿ ಧೋರಣೆಯನ್ನು ಪ್ರತಿಪಾದಿಸುವ ಮಹಾರಾಷ್ಟ್ರದ ಸರಕಾರದ ಕೈಯಲ್ಲಿ ಕೆಳವರ್ಗದ ಜನ ವಿಭಾಗಗಳ ಭವಿಷ್ಯ ಸುರಕ್ಷಿತವಾಗಿಲ್ಲ ಎನ್ನುವುದು ಇಡೀ ದೇಶಕ್ಕೆ ಗೊತ್ತಾಗಿದೆ.

ಶಿವ ಸೈನಿಕರ ಗೂಂಡಾಗಿರಿ

ಪೋಲೀಸ್ ಗೋಲೀಬಾರ್ ಪ್ರಕರಣದ ನಂತರ ಶಿವಸೇನೆ-ಬಿಜೆಪಿ ಸರಕಾರದ ರಾಜೀನಾಮೆಗೆ ಮತ್ತು ಸರಕಾರವನ್ನು ವಜಾ ಮಾಡಬೇಕು ಎಂಬ ಒತ್ತಾಯ ಪ್ರಬಲವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಜನತೆಯಿಂದ ಪ್ರತ್ಯೇಕಗೊಳ್ಳುತ್ತಿರುವ ರಾಜ್ಯ ಸರಕಾರ ಹತಾಶಗೊಂಡಿದೆ. ಮೈತ್ರಿಕೂಟದ ಮುಖ್ಯ ಅಂಗ ಪಕ್ಷವಾಗಿರುವ ಶಿವಸೇನೆಯ ಕೃತ್ಯಗಳಿಂದ ಇದು ಸ್ಪಷ್ಟಗೊಳ್ಳುತ್ತದೆ.

ಕೋಮುವಾದಿ ಕೂಟದ ಸರಕಾರದ ವಿರುದ್ಧ ಚಳುವಳಿ ನಡೆಸುತ್ತಿರುವ ಪ್ರತಿಪಕ್ಷಗಳ ನೇತೃತ್ವವನ್ನು ಕಾಂಗ್ರೆಸ್ ವಹಿಸಿದೆ. ರಾಜ್ಯ ವಿಧಾನಮಂಡಲದ ಉಭಯ ಸದನಗಳ ಪ್ರತಿಪಕ್ಷ ಮುಖಂಡರಾದ ಮಧುಕರ ರಾವ್ ಪಿಚಾಡ್ ಮತ್ತು ಛಗನ್ ಭುಜಬಲ ಅವರ ಅಧಿಕೃತ ನಿವಾಸಗಳ ಮೇಲೆ ಜುಲೈ 13ರಂದು ಶಿವಸೇನೆಯ ಸಾವಿರಾರು ಕಾರ್ಯಕರ್ತರು ಆಕ್ರಮಣ ಮಾಡಿ ದಾಂಧಲೆ ನಡೆಸಿದರು. ಈ ಸಂದರ್ಭದಲ್ಲಿ ಪೋಲೀಸರು ಮೂಕ ಪ್ರೇಕ್ಷಕರಾಗಿದ್ದುದು ಅನುಮಾನಕ್ಕೆ ಎಡೆಕೊಡುತ್ತದೆ. ಚಳುವಳಿ ಮಾಡುತ್ತಿದ್ದ ದಲಿತರ ಮೇಲೆ ಬೇಕಾಬಿಟ್ಟಿ ಗುಂಡು ಹಾರಿಸಿ ಹತ್ತಾರು ಜನರ ಪ್ರಾಣ ಹೀರಿದ ಪೋಲೀಸರು ಪ್ರತಿ ಪಕ್ಷ ಮುಖಂಡರ ಮೇಲೆ ಹಲ್ಲೆ ನಡೆಯುತ್ತಿದ್ದಾಗ ಕರ್ತವ್ಯ ಪ್ರಜ್ಞೆ ಮರೆತಿದ್ದರು. ದಾಂಧಲೆಕೋರರನ್ನು ಚದುರಿಸಲು ಕನಿಷ್ಠ ಪ್ರಯತ್ನವನ್ನೂ ಅವರು ಮಾಡಲಿಲ್ಲ!

ಕಳೆದ ಎರಡು ವರ್ಷಗಳಲ್ಲಿ ಮಹಾರಾಷ್ಟ್ರದ ಶ್ರೀರಾಂಪುರ, ಉದಗೀರ್ ಮತ್ತು ಜಲ್ನಾಗಳಲ್ಲಿ ಅಂಬೇಡ್ಕರ್ ಪ್ರತಿಮೆಗಳನ್ನು ವಿರೂಪಗೊಳಿಸಿದ ಪ್ರಕರಣಗಳು ನಡೆದಿವೆ.

ಶಿವಸೇನೆ-ಬಿಜೆಪಿ ಬಾಂಧವ್ಯ ಬಿರುಕು ಮೂಗು ತೂರಿಸುವ ಮುಖ್ಯಮಂತ್ರಿ

ಮಹಾರಾಷ್ಟ್ರ ಮುಖ್ಯಮಂತ್ರಿ ಮನೋಹರ ಜೋಷಿ ವಿರುದ್ಧ ವ್ಯಕ್ತವಾಗಿರುವ ಆಕ್ರೋಶವಿದು. ಪ್ರತಿಪಕ್ಷದವರು ಮಾಡಿರುವ ಆರೋಪವೇನೂ ಅಲ್ಲವಿದು. ಶಿವಸೇನೆಗೆ ಸೇರಿದ ಜೋಷಿ ಮೇಲೆ ಮಿತ್ರ ಪಕ್ಷವಾದ ಬಿಜೆಪಿಯ ಮಂತ್ರಿಗಳು ಮಾಡಿರುವ ಆರೋಪವಿದು.

'ಮುಖ್ಯಮಂತ್ರಿ ಜೋಷಿ ನಮ್ಮ ಇಲಾಖೆಗಳಲ್ಲಿ ಅನಗತ್ಯವಾಗಿ ಹಸ್ತಕ್ಷೇಪ ಮಾಡುತ್ತಾರೆ' ಎಂದು ಸಮ್ಮಿಶ್ರ ಸರಕಾರದ ಬಿಜೆಪಿ ಸಚಿವರು ಆಪಾದಿಸಿದ್ದಾರೆ.

ಸ್ವತಃ ಉಪಮುಖ್ಯಮಂತ್ರಿ ಗೋಪಿನಾಥ ಮುಂಡೆ(ಬಿಜೆಪಿ) ಅವರ ನಿವಾಸದಲ್ಲಿ ನಡೆದ ಸಭೆಯೊಂದರಲ್ಲಿ ಬಿಜೆಪಿ ಸಚಿವರು ತಮ್ಮ ಅತೃಪ್ತಿಯನ್ನು ಬಹಿರಂಗಪಡಿಸಿದರು.

ತಮಗೆ ತಿಳಿಸದೆಯೇ ತಮ್ಮ ಇಲಾಖೆಗಳ ಉನ್ನತ ಅಧಿಕಾರಿಗಳ ಸಭೆಯನ್ನು ಮುಖ್ಯಮಂತ್ರಿ ಏರ್ಪಡಿಸುತ್ತಾರೆ ಎನ್ನುವುದು ಬಿಜೆಪಿ ಸಚಿವರ ಅಳಲು.

ಬಿಜೆಪಿ ಸಂಸತ್ ಸದಸ್ಯರೊಬ್ಬರು ಅಧ್ಯಕ್ಷ... ರಾಗಿರುವ ಮಹಾರಾಷ್ಟ್ರ ರಾಜ್ಯ ಹತ್ತಿ ಬೆಳೆಗಾರರ ಒಕ್ಕೂಟಕ್ಕೆ ಏಳು ಅಧಿಕಾರೇತರ ನಿರ್ದೇಶಕರನ್ನು ನೇಮಕ ಮಾಡಿರುವ ವಿಚಾರದಲ್ಲೂ ಮೈತ್ರಿಕೂಟದಲ್ಲಿ ಬಿರುಕು ಕಾಣಿಸಿಕೊಂಡಿದೆ.

ಬಿಜೆಪಿಯನ್ನು ಸಂಪರ್ಕಿಸದೆಯೇ ಮುಖ್ಯಮಂತ್ರಿ ಜೋಷಿ ಈ ನೇಮಕ ಮಾಡಿದ್ದಾರೆ ಎನ್ನು...ವುದು ಸಿಟ್ಟಿಗೆ ಒಂದು ಕಾರಣ. ಇನ್ನೊಂದೆಡೆ ನೇಮಿತ ಎಲ್ಲಾ ಅಧಿಕಾರೇತರ ನಿರ್ದೇಶಕರು ಶಿವಸೇನೆಯವರೇ ಆಗಿರುವುದು ಆಕ್ರೋಶಕ್ಕೆ ಇನ್ನೊಂದು ಕಾರಣವಾಗಿದೆ. ಹೊಸ ಶಾಲೆಗಳನ್ನು ತೆರೆಯುವ ವಿಚಾರದಲ್ಲಿ ಶಾಲಾ ಶಿಕ್ಷಣ ಮಂತ್ರಿ ಸುಧೀರ್ ಜೋಷಿ ಮೈತ್ರಿಕೂಟದ ಒಪ್ಪಂದವನ್ನು ಮುರಿಯುತ್ತಿದ್ದಾರೆ ಎಂದೂ ಬಿಜೆಪಿ ಆರೋಪಿಸಿದೆ. ಕಾರ್ಯದರ್ಶಿ ಮಟ್ಟದ ಅಧಿಕಾರಿಗಳನ್ನು ನೇಮಕ ಮಾಡುವಲ್ಲಿಯೂ ಮುಖ್ಯಮಂತ್ರಿಯವರು ತಮ್ಮೊಂದಿಗೆ ಸಮಾಲೋಚಿಸುವುದಿಲ್ಲ ಎಂದು ಬಿಜೆಪಿ ಮಂತ್ರಿಗಳು ದೂರಿದ್ದಾರೆ.

ಅಸ್ಸಾಂ: ಶಾಂತಿ ಅಭಿವೃದ್ಧಿಗೆ ಮೊಳಗಿದ ಘೋಷಣೆ

ಶಾಂತಿ ಮತ್ತು ಹಿಂಸೆರಹಿತ ವಾತಾವರಣದ ನಿರ್ಮಾಣ ಘೋಷಣೆಯನ್ನು ಮುಂದಿಟ್ಟುಕೊಂಡು ಅಸ್ಸಾಮಿನಲ್ಲಿ ಆರು ರಾಜಕೀಯ ಪಕ್ಷಗಳು ಜೂನ್ 30ರಂದು ರಾಜಧಾನಿ ಗುವಾಹಟಿಯಲ್ಲಿ ಬೃಹತ್ ರ‍್ಯಾಲಿಯನ್ನು ನಡೆಸಿದವು.

ಆಳುವ ಅಸ್ಸಾಂ ಗಣ ಪರಿಷತ್(ಎಜಿಪಿ), ಸಿಪಿಐ(ಎಂ), ಸಿಪಿಐ, ಜನತಾ ಪ್ರಜಾಸತ್ತಾತ್ಮಕ ರಂಗ(ಪಿಡಿಎಫ್), ಅಸ್ಸಾಂ ಸಂಯುಕ್ತ ಜನತಾ ಪಕ್ಷ(ಯುಪಿಪಿಎ) ಮತ್ತು ಸಮಾಜವಾದಿ ಪಕ್ಷಗಳು ಏರ್ಪಡಿಸಿದ್ದ ರ‍್ಯಾಲಿಯಲ್ಲಿ ಸುಮಾರು ಅರ್ಧ ಲಕ್ಷ ಜನರು ಪಾಲ್ಗೊಂಡಿದ್ದರು.

ಜಜ್ಜಸ್ ಫೀಲ್ಡ್‌ನಲ್ಲಿ ನೆರೆದಿದ್ದ ಸುಮಾರು 50000 ಜನರು 'ಶಾಂತಿ ಮತ್ತು ಅಭಿವೃದ್ಧಿ'ಯ ಘೋಷಣೆಯನ್ನು ಏಕಕಂಠದಿಂದ ಮೊಳಗಿಸಿದರು.

ಭಾರೀ ಮಳೆಯನ್ನು ಲೆಕ್ಕಿಸದೆ ಮತ್ತು ರ‍್ಯಾಲಿಯಲ್ಲಿ ಪಾಲ್ಗೊಳ್ಳಬಾರದೆಂದು ಉಲ್ಫಾ(ಅಸ್ಸಾಂ ಸಂಯುಕ್ತ ವಿಮೋಚನಾ ರಂಗ)ದ ಬೆದರಿಕೆಗೆ ಜಗ್ಗದೆ ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಜನರು ಹಿಂಸಾಚಾರ ಮತ್ತು ಉಗ್ರಗಾಮಿ ಚಳುವಳಿಗೆ ವಿರೋಧವನ್ನು ದಾಖಲಿಸಿದರು.

ಹಿಂಸೆ, ಕೊಲೆ, ಅಪಹರಣ, ಹಣ ಸುಲಿಗೆಯಂಥ ಪ್ರಕರಣಗಳು ಮುಂದುವರೆಯುತ್ತಿದ್ದು ಅವುಗಳ ವಿರುದ್ಧ ಜನಾಭಿಪ್ರಾಯವನ್ನು ಮೂಡಿಸಲು ಆರು ಪಕ್ಷಗಳು ಈ ಚಳುವಳಿಯನ್ನು ಆಯೋಜಿಸಿದ್ದವು.

ಭಯೋತ್ಪಾದನೆ ವಿರುದ್ಧದ ಈ ರ‍್ಯಾಲಿ ನಡೆಸಲು ನಿರ್ಧಾರ ತೆಗೆದುಕೊಂಡ ಸಭೆಯಲ್ಲಿ ಭಾರತೀಯ ಜನತಾ ಪಕ್ಷ(ಬಿಜೆಪಿ) ಮೊದಲಾದ ಇತರ ಹಲವು ಪಕ್ಷಗಳು ಕೂಡಾ ಭಾಗವಹಿಸಿದ್ದವು. ಆದರೆ ಒಂದಲ್ಲ ಒಂದು ನೆಪ ಹೇಳಿ ಅವು ತಮ್ಮ ಮಾತಿನಿಂದ ಹಿಂದೆ ಸರಿದವು. ಕಾಂಗ್ರೆಸ್(ಐ) ಮತ್ತು ಜನತಾದಳ ಈ ಸಭೆಯಲ್ಲಿ ಪಾಲ್ಗೊಂಡಿರಲಿಲ್ಲ.

ರ‍್ಯಾಲಿಯನ್ನು ಬಹಿಷ್ಕರಿಸಲು ಜನತೆಗೆ ಕರೆ ಕೊಡುವ ಮೂಲಕ ಅದನ್ನು ವಿಫಲಗೊಳಿಸಲು ಉಲ್ಫಾ ಪ್ರಯತ್ನಿಸಿತು. ಗುವಾಹಟಿ ಮೂಲದ ಬಹುತೇಕ ಸ್ಥಳೀಯ ಪತ್ರಿಕೆಗಳು ಕೂಡಾ ಈ ರ‍್ಯಾಲಿಯ ಮಹತ್ವವನ್ನು ಕಡೆಗಣಿಸಲು ಪ್ರಯತ್ನಿಸಿದವು. ಆದರೂ ಭಾರೀ ಯಶಸ್ವಿಯಾಗಿ ರ‍್ಯಾಲಿ ನಡೆಯಿತು.

ಜನಾಂಗೀಯ ಹಾಗೂ ಧಾರ್ಮಿಕ ಎಲ್ಲೆಗಳನ್ನು ಮೀರಿ ರಾಜ್ಯದೆಲ್ಲೆಡೆಯ ಜನರು ಅತ್ಯುತ್ಸಾಹದಿಂದ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಅಸ್ಸಾಂ ಮುಖ್ಯಮಂತ್ರಿ ಪ್ರಫುಲ್ಲ ಕುಮಾರ್ ಮಹಂತ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು.

ಹಿಂಸೆ ತ್ಯಜಿಸಲು ಕರೆ

ಹಿಂಸೆಯನ್ನು ತ್ಯಜಿಸಿ, ಶಸ್ತ್ರತ್ಯಾಗ ಮಾಡಿ, ಯಾವುದೇ ಪೂರ್ವ ಶರತ್ತಿಲ್ಲದೆ ಮಾತುಕತೆಗಳಿಗೆ ಮುಂದೆ ಬರುವಂತೆ ಉಗ್ರಗಾಮಿ ಸಂಘಟನೆಗಳಿಗೆ ಕರೆ ಕೊಟ್ಟವರು ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಹೇಮೇನ್ ದಾಸ್, ಅಸ್ಸಾಂ ಶೀಘ್ರಗತಿಯಲ್ಲಿ ಅಭಿವೃದ್ಧಿ ಹೊಂದಬೇಕಾದರೆ ಶಾಂತಿ ಅತ್ಯಗತ್ಯ ಎಂದವರು ಹೇಳಿದರು.

ಹಿಂಸಾ ಸಂಸ್ಕೃತಿಯಿಂದ ದೂರವಿರುವಂತೆ ಯುವಜನಾಂಗಕ್ಕೆ ಕರೆ ಕೊಟ್ಟ ಕಾಮ್ರೇಡ್ ದಾಸ್ ಗನ್ ಗಿಂತ ಲೇಖನಿ ಬಲಿಷ್ಠವಾದುದು ಎಂದು ನುಡಿದರು.

ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಯ್ದುಕೊಳ್ಳುವುದು ಅಗತ್ಯ ಎಂದು ಅವರಲ್ಲಿ ನಿಜವಾದ ಒಕ್ಕೂಟ ಭಾರತದ ವ್ಯಾಪ್ತಿಯಲ್ಲಿ ಅಸ್ಸಾಂನ ಅಭಿವೃದ್ಧಿಯನ್ನು ಸಾಧಿಸಬಹುದು ಎಂದು ಪ್ರತಿಪಾದಿಸಿದರು.

ಭಯೋತ್ಪಾದನೆ ವಿರುದ್ಧ ಒಂದು ಸಂಯುಕ್ತ ನಿಲುವನ್ನು ತಳೆಯುವಂತೆ ರಾಜ್ಯದ ಇತರ ಎಲ್ಲಾ ರಾಜಕೀಯ ಪಕ್ಷಗಳಿಗೆ ಸಿಪಿಐ(ಎಂ) ಮುಖಂಡ ನಂದೇಶ್ವರ ತಾಲೂಕ್‌ದಾರ್ ತಮ್ಮ ಭಾಷಣದಲ್ಲಿ ಮನವಿ ಮಾಡಿದರು.

ಅಸ್ಸಾಂನಲ್ಲಿ ಶಾಂತಿಯನ್ನು ಮರಳಿ ಸ್ಥಾಪಿಸುವುದು ಹಾಗೂ ರಾಜ್ಯದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಕೇಂದ್ರದ ಸಂಯುಕ್ತ ರಂಗ ಸರಕಾರ ತೆಗೆದುಕೊಂಡಿರುವ ಕ್ರಮಗಳನ್ನು ಕೇಂದ್ರ ಉಕ್ಕು ಮತ್ತು ಗಣಿ ಖಾತೆ ಮಂತ್ರಿ ಬೀರೇಂದ್ರ ಪ್ರಸಾದ್ ವೈಶ್ಯ ವಿವರಿಸಿದರು. ಇನ್ನೂ ಹಲವು ಮುಖಂಡರು ಭಾಷಣ ಮಾಡಿದರು.

ಪೂರ್ಣ ಬಂದ್

ಭಯೋತ್ಪಾದನೆ ವಿರುದ್ಧ ಜೂನ್ 13ರಂದು ಅಸ್ಸಾಂನಲ್ಲಿ ಪೂರ್ಣ ಬಂದ್ ನಡೆಯಿತು. ಸರ್ವಪಕ್ಷ ಸಭೆಯ ಕರೆಯ ಮೇರೆಗೆ ಬಂದ್ ನಡೆಯಿತು.

ಉಲ್ಫಾದ ವಿರೋಧದ ನಡುವೆಯೂ ರಾಜ್ಯದೆಲ್ಲೆಡೆ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ದೊರೆತಿದ್ದನ್ನು ಸ್ಮರಿಸಬಹುದು.

ಪಶ್ಚಿಮ ಬಂಗಾಳದಲ್ಲಿ ಬಲವಂತದ ಬಂದ್

ಪಶ್ಚಿಮ ಬಂಗಾಳ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿಕೃತ ಬಣ ಜುಲೈ 4ರಂದು ಕರೆ ನೀಡಿದ್ದ ರಾಜ್ಯ ಬಂದ್ ಸಂಘಟಕರ 'ಬಲವಂತದಿಂದ ಯಶಸ್ವಿ'ಯಾಗಿ ನಡೆಯಿತು!

ಕೆಲಸಕ್ಕೆ ಹೋಗಲು ಇಚ್ಛಿಸಿದವರ ಮೇಲೆ ಶಸ್ತ್ರಾಸ್ತ್ರಗಳಿಂದ ಹಲ್ಲೆ ನಡೆಸ ಲಾಯಿತು. ಬಸ್‌ಗಳು, ಟ್ರಾಮ್‌ಗಳು, ಟ್ರಕ್‌ಗಳು ಮತ್ತಿತರ ವಾಹನಗಳ ಮೇಲೆ ಕಲ್ಲು ಮತ್ತು ಇಟ್ಟಿಗೆಗಳನ್ನು ತೂರಲಾಯಿತು. ಪ್ರಯಾಣಿಕರನ್ನು ವಾಹನಗಳಿಂದ ಕೆಳಗಿಳಿಸಿ ಹೊಡೆಯಲಾಯಿತು.

ವಹಿವಾಟು ನಡೆಸಲು ತೆರೆಯಲಾಗಿದ್ದ ಅಂಗಡಿ ಮುಂಗಟ್ಟುಗಳ ಮೇಲೆ ಬಾಂಬ್‌ಗಳನ್ನು ಎಸೆದಿದ್ದರಿಂದ ಲಕ್ಷಾಂತರ ರೂಪಾಯಿ ನಷ್ಟವಾಯಿತು. 'ಪತ್ರಿಕೆ' ಸ್ಟಿಕ್ಕರ್ ಅಂಟಿಸಿಕೊಂಡ ವಾಹನಗಳ ಮೇಲೆಯೂ ಕಾಂಗ್ರೆಸ್ ಕಾರ್ಯಕರ್ತರು ಕಲ್ಲುಗಳನ್ನು ತೂರಿದರು.

ಅನೇಕ ಸರಕಾರಿ ಬಸ್‌ಗಳು ಬೆಂಕಿಗೆ ಆಹುತಿಯಾದವು.

ಶಾಸಕರಿಗೆ ತಾಕೀತು

ಅಧಿಕಾರಿಗಳ ಮೇಲೆ ಹಲ್ಲೆ ನಡೆಸುವ ತಂಡಗಳಿರುವ ವಾಹನಗಳಲ್ಲಿ ತನಗೆ ನಿಷ್ಠರಾಗಿರುವ ಶಾಸಕರು ಹಾಜರಿರಬೇಕು ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸೋಮೇನ್ ಮಿತ್ರ ತಾಕೀತು ಮಾಡಿದ್ದರು ಎಂಬುದು ಐಎನ್‌ಎಸ್‌ಗೆ ತಿಳಿದುಬಂದಿದೆ.

ಜಿಲ್ಲಾಧಿಕಾರಿ ಕಚೇರಿ, ಉಪ ವಿಭಾಗ ಕಚೇರಿ, ಬ್ಲಾಕ್ ಅಭಿವೃದ್ಧಿ ಕಚೇರಿ ಮೊದಲಾದ ಕಚೇರಿಗಳ ಮೇಲೆ ಬಾಂಬ್ ಗಳನ್ನು ಎಸೆಯಲಾಯಿತು. ಕಲ್ಲುಗಳನ್ನು ತೂರಲಾಯಿತು. ನಾಡ ಬಂದೂಕುಗಳಿಂದಲೂ ಧಾಳಿನಡೆಸಲಾಯಿತು.

ಕಾಂಗ್ರೆಸ್ ಬೆಂಬಲಿಗರು ವ್ಯಾಪಕ ಹಿಂಸೆ ನಡೆಸುತ್ತಿದ್ದರೂ ಪೋಲೀಸರು ಗರಿಷ್ಠ ತಾಳ್ಮೆಯನ್ನು ವಹಿಸಿದ್ದರು. ಕಾಂಗ್ರೆಸ್ ಗೂಂಡಾಗಳು ಮಾರಕ ಅಥವಾ ಮಾರಕ ಎನ್ನುವಂಥ ದಾಳಿಮಾಡುವ ಈ ಸಂದರ್ಭದಲ್ಲಷ್ಟೆ ಪೋಲಿಸರು ಲಾಠಿ ಪ್ರಹಾರ ಮಾಡಿದರು.

ರಾಜಾಸ್ಥಾನ: ಖಾಸಗೀಕರಣ ವಿರುದ್ಧ ಬೃಹತ್ ರ‍್ಯಾಲಿ

ರಾಜಾಸ್ಥಾನ ರಾಜಧಾನಿ ಜೈಪುರದಲ್ಲಿ ಜೂನ್ 30ರಂದು ರಾಜ್ಯ ಮಟ್ಟದ ರ‍್ಯಾಲಿಯೊಂದು ನಡೆಯಿತು. ಸಿಪಿಐ(ಎಂ) ಜನತಾ ದಳ, ಸಿಪಿಐ ಮತ್ತು ಸಮಾಜವಾದಿ ಪಕ್ಷಗಳು ವಿದ್ಯುಚ್ಛಕ್ತಿ ಉತ್ಪಾದನೆ ಹಾಗೂ ವಿತರಣೆಯ ಖಾಸಗೀಕರಣ ಪ್ರಸ್ತಾಪವನ್ನು ವಿರೋಧಿಸಲು ಇದನ್ನು ಆಯೋಜಿಸಿದ್ದರು.

ಬಡತನ ರೇಖೆಗಿಂತ ಕೆಳಗೆ ವಾಸಿಸುತ್ತಿರುವ ವರ್ಗಕ್ಕೆ ಶೇಕಡಾ 50ರ ದರದಲ್ಲಿ ಅಗತ್ಯ ಸಾಮಗ್ರಿಗಳನ್ನು ಪೂರೈಕೆ ಮಾಡಬೇಕೆಂಬ ಬೇಡಿಕೆಯನ್ನು ರ‍್ಯಾಲಿ ಮುಂದಿಟ್ಟಿತು. ಭ್ರಷ್ಟಾಚಾರ, ಹದಗೆಡುತ್ತಿರುವ ಕಾನೂನು ಮತ್ತು ವ್ಯವಸ್ಥೆ ಪರಿಸ್ಥಿತಿ ಹಾಗೂ ರಾಜ್ಯದ ಬಿಜೆಪಿ ಸರಕಾರದ ಜನವಿರೋಧಿ ನೀತಿಗಳಿಗೆ ಪ್ರತಿಭಟನೆಯನ್ನು ದಾಖಲಿಸುವುದೂ ಉದ್ದೇಶವಾಗಿತ್ತು.

ರಾಜಧಾನಿಯ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯ ನಂತರ ನಗರದ ಹೃದಯ ಭಾಗದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಮತ್ತು ಸಿಪಿಐ ಮುಖಂಡ ಎಂ.ಫಾರೂಕಿ ಮುಖ್ಯ ಭಾಷಣಕಾರರಾಗಿದ್ದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹರಿರಾಮ್ ಚೌಹಾನ್, ಜನತಾದಳ ರಾಜ್ಯ ಅಧ್ಯಕ್ಷ ಅರುಣ್ ಮೆಹ್ತಾ, ಸಿಪಿಐ ರಾಜ್ಯ ಕಾರ್ಯದರ್ಶಿ ತಾರಾ ಸಿಂಗ್ ಸಿದ್ದು ಮೊದಲಾದವರೂ ಜನರನ್ನುದ್ದೇಶಿಸಿ ಮಾತನಾಡಿದರು.

ಭೈರಾನ್ ಸಿಂಗ್ ಶೆಖಾವತ್ ಸರಕಾರ ಅನುಸರಿಸುತ್ತಿರುವ ಕಾರ್ಮಿಕ ಹಾಗೂ ರೈತ ವಿರೋಧಿ ನೀತಿಗಳನ್ನು ಭಾಷಣಕಾರರು ಬಲವಾಗಿ ಖಂಡಿಸಿದರು. ರಾಜ್ಯ ಸರಕಾರ ದೊಡ್ಡ ಬಂಡವಾಳಶಾಹಿಗಳು ಮತ್ತು ಅರೆ ಪಾಳೆಗಾರಿ ಭೂ ಮಾಲಿಕರ ಪರವಾಗಿ ವರ್ತಿಸುತ್ತಿದೆ ಎಂದು ಅವರು ಹೇಳಿದರು.

ಬಿಜೆಪಿ ಆಡಳಿತ ಅವಧಿಯಲ್ಲಿ ದಲಿತರು ಮತ್ತು ಪರಿಶಿಷ್ಟರ ಮೇಲಿನ ಹಲ್ಲೆ, ದೌರ್ಜನ್ಯ ಹೆಚ್ಚುತ್ತಿರುವುದನ್ನು ಮುಖಂಡರು ಖಂಡಿಸಿದರು.

ರಾಜ್ಯ ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ಖಾಸಗೀಕರಿಸುವ ರಾಜ್ಯ ಸರಕಾರದ ಪ್ರಸ್ತಾವವನ್ನು ದೃಢವಾಗಿ ವಿರೋಧಿಸುವುದಾಗಿ ಅವರು ಘೋಷಿಸಿದರು. ತನ್ನ ನೀತಿಗಳನ್ನು ಬದಲಾಯಿಸಿಕೊಳ್ಳುವಂತೆ ಬಿಜೆಪಿ ಸರಕಾರಕ್ಕೆ ಎಚ್ಚರಿಕೆ ನೀಡಲು ರ‍್ಯಾಲಿಯನ್ನು ಆಯೋಜಿಸಲಾಗಿದೆ ಎಂದು ನಾಯಕರು ನೆನಪಿಸಿದರು. ಇಲ್ಲದಿದ್ದರೆ ಮುಂದೆ ನಾಲ್ಕು ಪಕ್ಷಗಳ ಮೈತ್ರಿಕೂಟ ತೀಕ್ಷ್ಣ ಚಳುವಳಿಯನ್ನು ಹಮ್ಮಿಕೊಳ್ಳಲಿದೆ ಎಂದು ಹೇಳಿದರು.

ಕಾಂಬೋಡಿಯಾದ ರಾಷ್ಟ್ರೀಯ ಸರಕಾರದಲ್ಲಿ ಬಿಕ್ಕಟ್ಟು

ಲೋಕಸಂಚಾರ



ಶರತ್‌ಚಂದ್ರ

ಕಾಂಬೋಡಿಯಾದ ಸರ್ವಪಕ್ಷ ರಾಷ್ಟ್ರೀಯ ಸರಕಾರದಲ್ಲಿ ಬಿಕ್ಕಟ್ಟು ಉದ್ಭವಿಸಿದ್ದು, ಇಬ್ಬರು ಪ್ರಧಾನಮಂತ್ರಿಗಳಿಗೆ ನಿಷ್ಠವಾದ ಸೈನ್ಯದ ತುಕಡಿಗಳ ಮಧ್ಯೆ ಘರ್ಷಣೆಯಾಗಿ, ಮೊದಲ ಪ್ರಧಾನಮಂತ್ರಿ ರಾಜಕುಮಾರ ರಣರಿಧ್ ಫ್ರಾನ್ಸ್‌ಗೆ ಪಲಾಯನ ಮಾಡುವುದರಲ್ಲಿ ಕೊನೆಗೊಂಡಿದೆ.

ನಾಲ್ಕು ವರ್ಷಗಳ ಹಿಂದೆ ಅಂತರ್ರಾಷ್ಟ್ರೀಯ ಮೇಲ್ವಿಚಾರಣೆಯಲ್ಲಿ ನಡೆದ ಚುನಾವಣೆಗಳ ನಂತರ, ಸರ್ವಪಕ್ಷೀಯ ಸರಕಾರ ಅಧಿಕಾರ ವಹಿಸಿಕೊಂಡಿತ್ತು. ರಾಜ ನರೋದಂ ಸಿಹನೌಕರ ಫನ್‌ಸಿನ್‌ಪೆಕ್ (FUNCINPEC) ಪಕ್ಷ ಹಾಗೂ ಮಾಜಿ ಕಮ್ಯುನಿಸ್ಟರ ಪಕ್ಷ ಕಾಂಬೋಡಿಯಾ ಪೀಪಲ್ಸ್ ಪಾರ್ಟಿ (CPP)ಗಳು ಸರಕಾರದಲ್ಲಿ ಭಾಗವಹಿಸಿ ಆಡಳಿತ ಆರಂಭಿಸಿದ್ದವು. ಈ ಎರಡೂ ಪಕ್ಷಗಳ ನಡುವೆ ಆಗಾಗ ವಿರಸ ಇದ್ದರೂ, ಕೆಲವು ತಿಂಗಳ ಹಿಂದಿನವರೆಗೆ ಶಾಂತಿಯುತವಾಗಿಯೇ ಸರಕಾರ ನಡೆಯುತ್ತಿತ್ತು. ಫನ್‌ಸಿನ್‌ಪೆಕ್ ಪಕ್ಷದ ಪ್ರತಿನಿಧಿಯಾಗಿ ರಾಜ ನರೋದಂ ಸಿಹನೌಕ್, ಆತ ಅಧ್ಯಕ್ಷನಾದ ನಂತರ ಆತನ ಮಗ ರಾಜಕುಮಾರ ರಣರಿಧ್ ಒಬ್ಬ ಪ್ರಧಾನಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಕಾಂಬೋಡಿಯಾ ಪೀಪಲ್ಸ್ ಪಾರ್ಟಿ ಪರವಾಗಿ ಹನ್‌ಸೆನ್ ಪ್ರಧಾನಮಂತ್ರಿಯಾಗಿದ್ದರು. ಈ ಚುನಾವಣೆಗಳ ಮೊದಲೂ ಅವರು ಪ್ರಧಾನಮಂತ್ರಿಯಾಗಿದ್ದರು. ಅದಕ್ಕಿಂತ ಹಿಂದೆ ಪೋಲ್-ಪೊಟ್ ನಾಯಕತ್ವದಲ್ಲಿ ನಡೆದ ಪ್ರಮಾದಗಳ ನಂತರ, ವಿಯೆಟ್ನಾಂ ಬೆಂಬಲದಿಂದ ಹನ್‌ಸೆನ್ ಅಧಿಕಾರ ವಹಿಸಿಕೊಂಡಿದ್ದರು.

ಕೆಲವು ತಿಂಗಳುಗಳ ಹಿಂದೆ ಎರಡೂ ಪ್ರಧಾನಮಂತ್ರಿಗಳ ಹಾಗೂ ಆಳುವ ಪಕ್ಷಗಳ ನಡುವೆ ವಿರಸ ತೀವ್ರವಾಗಿ, ಅವುಗಳಿಗೆ ನಿಷ್ಠವಾದ ಸೈನ್ಯದ ತುಕಡಿಗಳ ನಡುವೆ ರಾಜಧಾನಿಯ ಬೀದಿಗಳಲ್ಲಿ ಘರ್ಷಣೆ ಆರಂಭವಾಗಿತ್ತು. ಕಾಂಬೋಡಿಯಾದಲ್ಲಿ ಸಿಪಿಪಿ ಪ್ರಜಾಪ್ರಭುತ್ವ, ಸಮಾನತೆಗೆ ಹೋರಾಡುವ ಪಕ್ಷವಾದರೆ, ಫನ್‌ಸಿನ್‌ಪೆಕ್ ಯಥಾಸ್ಥಿತಿವಾದಿಗಳನ್ನು ಪ್ರತಿನಿಧಿಸುತ್ತದೆ. ಹಿಂದೆ ಅಧಿಕಾರದಲ್ಲಿದ್ದು, ಈಗ ಕಾಂಬೋಡಿಯಾದ ಉತ್ತರ ಭಾಗದ ಕಾಡುಗಳಲ್ಲಿ ಕೆಲವು ಗೆರಿಲ್ಲಾ ಪಡೆಗಳೊಂದಿಗೆ, ಸರಕಾರದ ವಿರುದ್ಧ ಇನ್ನೂ ಹೋರಾಡುತ್ತಿರುವ ಪೋಲ್‌ಪೊಟ್‌ನ ಪಕ್ಷದ ಜತೆ ಸೇರಿ, ಹನ್‌ಸೇನ್‌ರನ್ನು ಅಧಿಕಾರದಿಂದ ಇಳಿಸಲು, ಮುಂದಿನ ವರ್ಷದ ಚುನಾವಣೆಗಳ ಮೊದಲು ತನ್ನ ಬಲ ಹೆಚ್ಚಿಸಿಕೊಳ್ಳಲು ಪ್ರಧಾನಮಂತ್ರಿ ರಾಜಕುಮಾರ ರಣರಿಧ್ ಪಿತೂರಿ ಮಾಡಿದ್ದರು ಎಂದು ಹೇಳಲಾಗಿದೆ. ಈ ಪಿತೂರಿಯ ಭಾಗವಾಗಿ ಪೊಲ್‌ಪೊಟ್‌ನ ಗೆರಿಲ್ಲಾ ಪಡೆಗಳ ನಾಯಕನನ್ನು ತಮ್ಮ ಏಜೆಂಟನಾಗಿ ಬಳಸಿದ್ದರು. ಪೊಲ್‌ಪೊಟ್‌ನ ಪಡೆಗಳ ಗೆರಿಲ್ಲಾ ನಾಯಕ ತನ್ನ ನಾಯಕನ ವಿರುದ್ಧ ದಂಗೆ ಎದ್ದು ಆತನನ್ನು ಬಂಧಿಸಿ ಸರಕಾರಿ ಪಡೆಗಳಿಗೆ ಶರಣಾಗಿದ್ದ. ಕಾಂಬೋಡಿಯಾದಲ್ಲಿ ಕುಖ್ಯಾತನಾಗಿದ್ದ ಪೊಲ್‌ಪೊಟ್‌ನ ಗೆರಿಲ್ಲಾ ಪಡೆಗಳ ಜತೆ ಸರಕಾರ ಯಾವ ರೀತಿ ವ್ಯವಹಾರ ನಡೆಸಬೇಕು ಎಂಬುದರ ಬಗ್ಗೆ ಎರಡೂ ಆಳುವ ಪಕ್ಷಗಳ ನಡುವೆ ತೀವ್ರ ಭಿನ್ನಾಭಿಪ್ರಾಯ ಮೂಡಿ ಬಂತು.

ಪೊಲ್‌ಪೊಟ್ ಮತ್ತು ಆತನ ಕೆಲವು ಸಹವರ್ತಿಗಳನ್ನು ಬಿಟ್ಟು ಆತನ ಗೆರಿಲ್ಲಾಪಡೆಗಳ ಮುಖ್ಯಸ್ಥ ಮತ್ತು ಅವನ ಬೆಂಬಲಿಗ ಪಡೆಗಳಿಗೆ ಕ್ಷಮೆ ಕೊಡಬೇಕೆಂದು ಪ್ರಧಾನಿ ರಾಜಕುಮಾರ ರಣರಿಧ್ ನೀತಿಯಾಗಿತ್ತು. ಪೊಲ್‌ಪೊಟ್ ಸರಕಾರದಲ್ಲಿದ್ದಾಗ ಆತ ನಡೆಸಿದ ನರಮೇಧ ಹಾಗೂ ದೇಶ-ವಿರೋಧಿ ಪ್ರಮಾದಗಳಿಗಾಗಿ ಆತನಿಗೆ ಮಾತ್ರವಲ್ಲ, ಆತನ ಪಡೆಗಳಿಗೂ ಶಿಕ್ಷೆಯಾಗಬೇಕು ಎಂದು ಹನ್‌ಸೆನ್ ನೀತಿಯಾಗಿತ್ತು. ರಣರಿಧ್ ಪೊಲ್‌ಪೊಟ್‌ನ ಈ ಗೆರಿಲ್ಲಾ ಪಡೆಗಳನ್ನು ಬಳಸಿ, ದೇಶದಲ್ಲಿ ತನ್ನ ರಾಜಕೀಯ ಬಲ ವರ್ಧಿಸಿಕೊಳ್ಳುವ ಯೋಜನೆಯನ್ನು ಹನ್‌ಸೆನ್ ಬಲವಾಗಿ ಸಾರ್ವಜನಿಕವಾಗಿ ಖಂಡಿಸಿದರು. ಈ ಭಿನ್ನಾಭಿಪ್ರಾಯದ ಫಲವಾಗಿ ನಡೆದ ಎರಡು ಪಕ್ಷಗಳ ನಡುವಿನ ಘರ್ಷಣೆ ಮಿಲಿಟರಿ ರೂಪ ತಾಳಿತು. ಹನ್‌ಸೆನ್‌ಗೆ ಸೈನ್ಯದಲ್ಲಿ ಭಾರಿ ಬೆಂಬಲವಿದ್ದು, ರಣರಿಧ್‌ನ ಆಟ ನಡೆಯಲಿಲ್ಲ. ಇದಕ್ಕೆ ಹೆದರಿ ರಣರಿಧ್ ದೇಶ ಬಿಟ್ಟು ತನ್ನ ಕುಟುಂಬದ ಜತೆ ಫ್ರಾನ್ಸ್‌ಗೆ ಓಡಿಹೋಗಿದ್ದಾರೆ. ಅಲ್ಲಿ ಹೋಗಿ ತನ್ನನ್ನು ಕ್ಷಿಪ್ರ ಕ್ರಾಂತಿಯಲ್ಲಿ ಉರುಳಿಸಲಾಗಿದೆ ಎಂದು ಪ್ರಚಾರ ಮಾಡುತ್ತಿದ್ದಾನೆ. ಕಾಂಬೋಡಿಯಾದಲ್ಲಿ ಮಧ್ಯಪ್ರವೇಶ ಮಾಡಿ ತನ್ನ ಪ್ರಧಾನಮಂತ್ರಿ ಪಟ್ಟ ಉರುಳಿಸಬೇಕೆಂದು ಅಮೇರಿಕಾ, ಫ್ರಾನ್ಸ್, ಜಪಾನ್‌ಗಳನ್ನೂ, ವಿಶ್ವ ಸಂಸ್ಥೆಗೂ ಮನವಿ ಮಾಡಿದ್ದಾನೆ. ಇದನ್ನು ಪ್ರಧಾನಮಂತ್ರಿ ಹನ್‌ಸೆನ್ ವಿರೋಧಿಸಿ ದೇಶದ ಆಂತರಿಕ ವ್ಯವಹಾರಗಳಲ್ಲಿ ವಿದೇಶೀ ಹಸ್ತಕ್ಷೇಪ ಕೇಳುವುದನ್ನು ವಿರೋಧಿಸಿದ್ದಾರೆ. ಈ ಕ್ಷಿಪ್ರಕ್ರಾಂತಿ ನಡೆಸಲು ಪ್ರಯತ್ನ ನಡೆಸಿದ್ದು ರಾಜಕುಮಾರ ರಣರಿಧ್‌ರೇ. ಅದು ಸಫಲವಾಗದಾಗ ಫ್ರಾನ್ಸಿಗೆ ಓಡಿಹೋಗಿದ್ದಾರೆ ಎಂದು ಆಪಾದಿಸಿದ್ದಾರೆ. ಎರಡು ಪಕ್ಷಗಳ ರಾಷ್ಟ್ರೀಯ ಸರಕಾರ ಇನ್ನೂ ಮುಂದುವರೆದಿದೆ. ಅದರಿಂದ ತಾವು ಹಿಂಜರಿದಿಲ್ಲ, ಫನ್‌ಸಿನ್‌ಪೆಕ್ ಪಕ್ಷದ ನಾಯಕ ದೇಶ ಬಿಟ್ಟು ಓಡಿಹೋಗಿದ್ದಾರೆ, ಆ ಪಕ್ಷ ಇನ್ನೊಬ್ಬ ನಾಯಕನನ್ನು ನೇಮಿಸಬೇಕು ಅಷ್ಟೇ ಎಂದಿದ್ದಾರೆ.

ರಾಜಧಾನಿ ನಾಂಪೆನ್‌ನಲ್ಲಿ ಹನ್‌ಸೆನ್‌ಗೆ ನಿಷ್ಠವಾದ ಪಡೆಗಳು ಪೂರ್ಣ ನಿಯಂತ್ರಣ ಹೊಂದಿದ್ದು, ಶಾಂತಿಯುತವಾಗಿದೆ. ಆದರೆ ದೇಶದ ಉತ್ತರ ಭಾಗದ ಪಟ್ಟಣಗಳ ಸುತ್ತಮುತ್ತ ಅಲ್ಲಲ್ಲಿ ಘರ್ಷಣೆಗಳು ನಡೆಯುತ್ತಿವೆ ಎಂದು ವರದಿಯಾಗಿದೆ.

ಫ್ರಾನ್ಸ್‌ಗೆ ಓಡಿ ಹೋಗಿರುವ ಪ್ರಧಾನಿ ರಾಜಕುಮಾರ ರಣರಿಧ್ ಕಾಂಬೋಡಿಯಾದಲ್ಲಿ ನಡೆದಿದ್ದು ಕ್ಷಿಪ್ರಕ್ರಾಂತಿ. ಅಂತರ್ರಾಷ್ಟ್ರೀಯ ಬೆಂಬಲದಿಂದ ತನ್ನ ಪಟ್ಟ ವಾಪಸು ಸಿಗದಿದ್ದರೆ, ದೇಶದಲ್ಲಿ ಆಂತರಿಕ ಯುದ್ಧ ಆರಂಭವಾಗುವುದು ಎಂದು ಪ್ರಚಾರ ಮಾಡುತ್ತಿದ್ದಾರೆ. ಹನ್‌ಸೆನ್ ಸರಕಾರ ಇದು ಸೈನ್ಯ ಬಳಸಿ ಆಂತರಿಕ ಭದ್ರತೆ ಜಾರಿ ಮಾಡಿದ್ದಷ್ಟೇ ಎಂದಿದೆ.

ರಣರಿಧ್ ಅವರ ಪ್ರಚಾರಕ್ಕೆ ಕುಮ್ಮಕ್ಕು ಕೊಡುವ ರೀತಿಯಲ್ಲಿ ಅಮೇರಿಕ ಹಾಗೂ ಜಪಾನ್‌ಗಳು ಕಾಂಬೋಡಿಯಾಕ್ಕೆ ಕೊಡುತ್ತಿರುವ ನೆರವನ್ನು ನಿಲ್ಲಿಸಿವೆ. ಕಾಂಬೋಡಿಯಾ ಸರಕಾರ ಈ ನಿಲುವನ್ನು 'ಕಾಂಬೋಡಿಯದ ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ' ಎಂದು ಖಂಡಿಸಿದೆ. ದಕ್ಷಿಣ ಪೂರ್ವ ಏಷ್ಯಾದ ದೇಶಗಳ ಕೂಟ ಆಸಿಯನ್ ಕಾಂಬೋಡಿಯಾದ ಸದಸ್ಯತ್ವದ ನಿರ್ಧಾರವನ್ನು ಮುಂದಕ್ಕೆ ಹಾಕಿದೆ. ನಾಂಪೆನ್‌ನಲ್ಲಿ ಘರ್ಷಣೆ ತೀವ್ರವಾಗಿದ್ದಾಗ ಕೆಲವು ದೇಶಗಳ ನಾಗರಿಕರು ದೇಶ ಬಿಟ್ಟು ತಮ್ಮ ದೇಶಗಳಿಗೆ ಮರಳಿದ್ದಾರೆ. ಸಿಂಗಾಪೂರ್, ಮಲೇಶಿಯಾ, ಫಿಲಿಪ್ಪೀನ್ಸ್, ಫ್ರಾನ್ಸ್, ಅಮೇರಿಕ ನಾಗರಿಕರು ದೇಶ ಬಿಟ್ಟು ಹೋಗಲು, ಆ ದೇಶಗಳ ರಾಯಭಾರ ಕಚೇರಿಗಳು ನೆರವು ನೀಡಿದ್ದವು. ವಿದೇಶೀಯರು ದೇಶ ಬಿಟ್ಟು ಹೋಗುತ್ತಿರುವುದು, ರಾಜಧಾನಿಯ ಪರಿಸ್ಥಿತಿಯ ಪ್ರತಿಫಲನಕ್ಕಿಂತ ಹೆಚ್ಚಾಗಿ ಈ ದೇಶಗಳ ರಾಜಕೀಯ ಕ್ರಮ ಎಂದು ಒಬ್ಬ ಪಾಶ್ಚಿಮಾತ್ಯ ರಾಜತಾಂತ್ರಿಕರೇ ಹೇಳಿದ್ದಾರೆ.

ನಾಟೋ ಮಿಲಿಟರಿ ಕೂಟದ ವಿಸ್ತಾರ

ಸ್ಪೆನ್‌ನ ರಾಜಧಾನಿ ಮೆಡ್ರಿಡ್‌ನಲ್ಲಿ ನಡೆದ 16 ದೇಶಗಳ ಸಾಮ್ರಾಜ್ಯಶಾಹಿ ಮಿಲಿಟರಿ ಕೂಟದ ಶೃಂಗ ಸಭೆಯಲ್ಲಿ ಪೂರ್ವ ಯುರೋಪಿನ ಮೂರು ಮಾಜಿ ಸಮಾಜವಾದಿ ದೇಶಗಳನ್ನು ಸೇರಿಸಿ ನಾಟೋವನ್ನು ವಿಸ್ತರಿಸಿದೆ. ಈ ದೇಶಗಳೆಂದರೆ ಪೋಲೆಂಡ್, ಹಂಗೇರಿ ಹಾಗೂ ಚೆಕ್. ಅದೇ ಸಮಯದಲ್ಲಿ ಈ ಶೃಂಗ ಸಭೆ ಅಮೇರಿಕ ಹಾಗೂ ಯುರೋಪಿಯನ್ ದೇಶಗಳ ನಡುವೆ ತೀವ್ರ ಭಿನ್ನಾಭಿಪ್ರಾಯಗಳನ್ನು ಬೆಳಕಿಗೆ ತಂದಿತು. ನಾಟೋದ ವಿಸ್ತಾರದಂತಹ ಮುಖ್ಯ ನೀತಿಗಳಲ್ಲಿ ತನ್ನ ಧೋರಣೆಯನ್ನು ಎಲ್ಲರ ಮೇಲೆ ಹೊರಿಸುವ 'ದೊಡ್ಡಣ್ಣ' ಧೋರಣೆಯನ್ನು ಶೃಂಗಸಭೆಯಲ್ಲಿ ವಿರೋಧಿಸಲಾಯಿತು.

ಮುಖ್ಯವಾಗಿ ಭಿನ್ನಾಭಿಪ್ರಾಯ ನಾಟೋ ವಿಸ್ತರಿಸಬೇಕೇ ಬೇಡವೇ ಎನ್ನುವುದರ ಬದಲು, ಎಷ್ಟು ದೇಶಗಳನ್ನು ಸೇರಿಸಿಕೊಳ್ಳ ಬೇಕು ಎಂಬುದರ ಬಗ್ಗೆ ಆಗಿತ್ತು. ಫ್ರಾನ್ಸ್‌ನ ನಾಯಕತ್ವದಲ್ಲಿ ಇಟಲಿ ಸೇರಿದಂತೆ ಎಂಟು ದೇಶಗಳು ರೊಮೆಸಿಯಾ ಹಾಗೂ ಸ್ಲೋವೇನಿಯಾಗಳನ್ನು ಸೇರಿಸಿಕೊಳ್ಳಬೇಕು ಎಂದು ಒತ್ತಾಯಿಸುತ್ತಿದ್ದವು. ಆದರೆ ಅಮೇರಿಕ ತನ್ನ ನಿರ್ಧಾರವನ್ನು ಕೊನೆಗೂ ನಾಟೋದ ಮೇಲೆ ಹೊರಿಸಿತು. ರೋಮೇನಿಯಾ; ಸ್ಲೋವೇನಿಯಾಗಳ ಬಗ್ಗೆ ತನ್ನ 1999ರ ಸುವರ್ಣ ಜಯಂತಿ ಶೃಂಗಸಭೆಯಲ್ಲಿ ಪರಿಶೀಲಿಸುವ ಭರವಸೆ ನೀಡಲಾಯಿತು.

ಯುರೋಪಿನ ನಾಟೋ ಮಿಲಿಟರಿ ವ್ಯವಸ್ಥೆಯ ನಿಯಂತ್ರಣ ಯುರೋಪಿಯನ್ನರಿಗೆ ಕೊಡುವ ಬಗ್ಗೆ ಫ್ರಾನ್ಸ್‌ನ ಸೂಚನೆಯನ್ನು ಪುನಃ ಅಮೇರಿಕ ತಳ್ಳಿ ಹಾಕಿದೆ. ಫ್ರಾನ್ಸ್ ಅಮೇರಿಕನ್ನನೊಬ್ಬ ಯುರೋಪಿನಲ್ಲಿ ನಾಟೋದ ದಕ್ಷಿಣ ಕಮಾಂಡ್ ವ್ಯವಸ್ಥೆಯನ್ನು ನಿಯಂತ್ರಿಸುವುದರ ವಿರುದ್ಧ ಪ್ರತಿಭಟಿಸಿ ಕಳೆದ 31 ವರ್ಷದಿಂದ ನಾಟೋದ ಮಿಲಿಟರಿ ವ್ಯವಸ್ಥೆಯಲ್ಲಿ ಭಾಗವಹಿಸುತ್ತಿಲ್ಲ.

ನಾಟೋದ ನಿಯಮಗಳ ಪ್ರಕಾರ ಯಾವುದೇ ಸದಸ್ಯ ದೇಶದ ಮೇಲೆ ಆಕ್ರಮಣ ನಡೆದರೆ ಇಡೀ ಕೂಟದ ಮಿಲಿಟರಿ ವ್ಯವಸ್ಥೆ ಆ ದೇಶದ ನೆರವಿಗೆ ಬರುವುದು. ಇದರಿಂದಾಗಿಯೇ ಮಧ್ಯ ಹಾಗೂ ಪೂರ್ವ ಯುರೋಪಿನ ಅಭದ್ರ ದೇಶಗಳಿಗೆ ಸದಸ್ಯತ್ವ ವಿಸ್ತರಿಸುವುದಕ್ಕೆ ಹಲವು ವಿಭಾಗಗಳಿಂದ ತೀವ್ರ ವಿರೋಧ ಕಂಡು ಬಂದಿದೆ. ಅಮೇರಿಕದಲ್ಲೇ ಇಂತಹ ವಿರೋಧ ತೀವ್ರವಾಗಿ ಕಂಡು ಬಂದಿದೆ. ಈ ವಿಸ್ತರಣೆಯ ವೆಚ್ಚದ ಬಗ್ಗೆ ನಾಟೋ ಶೃಂಗಸಭೆ ಮುಗಿದ ಮೇಲೂ ವಿವಾದ ಮುಂದುವರೆಯಿತು. ಫ್ರಾನ್ಸ್‌ನ ಅಧ್ಯಕ್ಷ ಚಿರಾಕ್ ಪತ್ರಿಕಾ ಸಮ್ಮೇಳನವೊಂದರಲ್ಲಿ ವಿಸ್ತರಣೆಗೆ ಫ್ರಾನ್ಸ್ 'ಒಂದು ಫ್ರಾಂಕ್ ಕೂಡಾ ಹೆಚ್ಚಿಗೆ' ಕೊಡದು ಎಂದರೆ, ಅಮೇರಿಕದ ಅಧ್ಯಕ್ಷರು ಸ್ವಲ್ಪ ಮಟ್ಟಿಗೆ ಹೆಚ್ಚಿಗೆ ಎಲ್ಲಾ ಸದಸ್ಯರೂ ತೆರಬೇಕಾಗುತ್ತದೆ ಎಂದಿದ್ದಾರೆ.

ವಾರ್ಸಾ ಮಿಲಿಟರಿ ಕೂಟ (ಸೋವಿಯತ್ ಒಕ್ಕೂಟದ ನಾಯಕತ್ವದಲ್ಲಿದ್ದ ಸಮಾಜವಾದಿ ದೇಶಗಳ ಕೂಟ) ವಿಸರ್ಜನೆಯ ನಂತರ ನಾಟೋ ಕೂಟದ ಅಗತ್ಯವಾದರೂ ಏನು ಎಂದು ಈ ದೇಶಗಳ ಜನ ಪ್ರಶ್ನಿಸುತ್ತಿದ್ದಾರೆ. ಮಿಲಿಟರಿ ವೆಚ್ಚ ತಗ್ಗಿಸಬೇಕು, ಪಡೆಗಳ ಸಂಖ್ಯೆ ಕಡಿಮೆ ಮಾಡಬೇಕು ಎಂದು ಈ ದೇಶದ ಜನ ಬಯಸುತ್ತಾರೆ. ಈ ದೇಶ ಆಳುವವರು ಮಾತ್ರ ಅನಗತ್ಯ 'ಪೂರ್ವದತ್ತ ವಿಸ್ತಾರ' ಮಾಡುತ್ತಾ ವೆಚ್ಚ ಹೆಚ್ಚಿಸುವುದರಲ್ಲಿ ತೊಡಗಿದ್ದಾರೆ. ಈ ವಿಸ್ತಾರ ಯುರೋಪಿನ ಭದ್ರತೆಗೆ ಮಾತ್ರವಲ್ಲ, ಇಡೀ ಜಗತ್ತಿನ ಭದ್ರತೆಗೆ ಅಪಾಯಕಾರಿ. ಇದು ಯಾವ ಸಮಸ್ಯೆಯನ್ನು ಬಗೆಹರಿಸುವುದಿಲ್ಲ. ಹೊಸ ಭದ್ರತೆಯ ಸಮಸ್ಯೆಗಳನ್ನು ಸೃಷ್ಟಿಸುತ್ತದೆ ಅಷ್ಟೇ.

ನಾಟೋ ಮಿಲಿಟರಿ ಕೂಟದ ಮುಖ್ಯ ಉದ್ದೇಶ ಮೊದಲಿಂದಲೂ ಯುರೋಪಿನ, ಅಥವಾ ಆ ದೇಶಗಳ ಜನರ ಭದ್ರತೆಯಾಗಿರಲಿಲ್ಲ, ಯಾವಾಗಲೂ ಆ ದೇಶಗಳ ಒಳಗೆ ಹಾಗೂ ಹೊರಗೆ ಸಾಮ್ರಾಜ್ಯಶಾಹಿ ಸರ್ವಾಧಿಕಾರಕ್ಕೆ ವಿರೋಧವಾದ ಪ್ರಜಾ ಪ್ರಭುತ್ವವಾದಿ ಸಮಾಜವಾದಿ ಶಕ್ತಿಗಳನ್ನು ನಿಯಂತ್ರಣದಲ್ಲಿಡುವುದು, ಸದೆಬಡಿಯುವುದೇ ನಾಟೋದ ಉದ್ದೇಶವಾಗಿತ್ತು. ಈ ವಿಸ್ತರಣೆಯ ಉದ್ದೇಶವೂ, ಪೂರ್ವ ಯುರೋಪಿನ ದೇಶಗಳಲ್ಲಿ ಬಂಡವಾಳಶಾಹಿ ಪುನಃಸ್ಥಾಪನೆಯಲ್ಲಿ ಎದುರಿಸುತ್ತಿರುವ ಕಷ್ಟಗಳ ಪರಿಸ್ಥಿತಿಯಲ್ಲಿ ಸಾಮ್ರಾಜ್ಯ ಶಾಹಿ -ವಿರೋಧಿ ಪ್ರಜಾಪ್ರಭುತ್ವ ಶಕ್ತಿಗಳು ಬಲ ಗೊಳ್ಳದಂತೆ ನಿಯಂತ್ರಿಸುವುದು ಅಷ್ಟೇ. ಇದು ಜನತೆಯ ಭದ್ರತೆಗೆ ಮಾರಕ ಎಂಬ ಬಗ್ಗೆ ಅನುಮಾನವಿಲ್ಲ. ಇದಲ್ಲದೆ, ಈ ಶೃಂಗಸಭೆ ಇನ್ನೊಂದು ಅಪಾಯಕಾರಿ ಕೆಲಸ ಮಾಡಿದೆ. ಅದೆಂದರೆ ಯುರೋಪಿನ ಅಟ್ಲಾಂಟಿಕ್ ಸಹಕಾರ ಕೌನ್ಸಿಲ್ ಎಂಬ ಹೆಸರಲ್ಲಿ ನಾಟೋ ದೇಶಗಳು ಹಾಗೂ ಹೊರಗಿರುವ ದೇಶಗಳು ಭದ್ರತಾ ಕಾಳಜಿಗಳ ಬಗ್ಗೆ ಮಾತುಕತೆ ನಡೆಸಲು 28 ದೇಶಗಳ ಕೌನ್ಸಿಲ್ ಸ್ಥಾಪಿಸಿತು. ಇದರ ಮೊದಲ ಸಮ್ಮೇಳನ ಅಲ್ಲೇ ನಡೆಯಿತು. ಈ ಕೌನ್ಸಿಲ್‌ನಲ್ಲಿ ನಾಟೋ ಸೇರಬಯಸುವ ಆದರೂ ಇನ್ನೂ ಸದಸ್ಯರಾಗದ ದೇಶಗಳು- ರೊಮೇನಿಯಾ, ಸ್ಲೋವೇನಿಯಾ ಇತ್ಯಾದಿ, ಸ್ವಿಟ್ಜರ್‌ಲ್ಯಾಂಡ್, ಆಸ್ಟ್ರಿಯಾ ಮುಂತಾದ ತಟಸ್ಥ ದೇಶಗಳು, ಲಿಥುವಾನಿಯಾ, ಉಕ್ರೇನ್, ತಾಜಿಕಿಸ್ತಾನ್ ಮುಂತಾದ ಮಾಜಿ ಸೋವಿಯತ್ ದೇಶಗಳು ಸೇರಿವೆ. ಇದು ಇನ್ನೂ ಅಪಾಯಕಾರಿ ಬೆಳವಣಿಗೆ.

ಅಲ್ಬೇನಿಯಾದಲ್ಲಿ ಸೋಶಲಿಸ್ಟರು ಅಧಿಕಾರಕ್ಕೆ

ಅಲ್ಬೇನಿಯಾದಲ್ಲಿ ಕಮ್ಯುನಿಸ್ಟರು ಅಧಿಕಾರ ಕಳೆದುಕೊಂಡ ನಾಲ್ಕೇ ವರ್ಷದಲ್ಲಿ ಅವರನ್ನು ಉರುಳಿಸಿ ಅಧಿಕಾರಕ್ಕೆ ಬಂದಿದ್ದ, ಬಂಡವಾಳಶಾಹಿ ಸ್ಥಾಪಿಸಲು ಹೊರಟ ಡೆಮಾಕ್ರಾಟ್ ಪಕ್ಷ ಅಧಿಕಾರ ಕಳೆದುಕೊಂಡಿದೆ. 155 ಸದಸ್ಯರ ಪಾರ್ಲಿಮೆಂಟಿನಲ್ಲಿ ಸೋಶಲಿಸ್ಟರಿಗೆ 80 ಸೀಟುಗಳು ದೊರಕಿವೆ. ಡೆಮಾಕ್ರಾಟರಿಗೆ ಕೇವಲ 20 ಸೀಟುಗಳು ದೊರಕಿವೆ.

ಡೆಮಾಕ್ರಾಟ್ ಸರಕಾರ ತನ್ನ ಶಾಸನ ಕಾಲದಲ್ಲಿ ಪೂರ್ಣ ಜನ ಬೆಂಬಲ ಕಳೆದುಕೊಂಡಿದೆ. ಆ ಸರಕಾರದ ವಿರುದ್ಧ ಸಶಸ್ತ್ರ ದಂಗೆ ಎದ್ದಿತ್ತು. ಅದರಲ್ಲಿ 15000 ಜನ ಸತ್ತಿದ್ದರು. ಬಂಡವಾಳಶಾಹಿ ವ್ಯವಸ್ಥೆಯನ್ನು ಮಾಜಿ ಸಮಾಜವಾದಿ ದೇಶಗಳಲ್ಲಿ ಸ್ಥಾಪಿಸುವುದು ಸುಲಭ ಸಾಧ್ಯವಲ್ಲ ಎಂದು ಅಲ್ಬೇನಿಯಾ ಇನ್ನೊಮ್ಮೆ ವ್ಯಕ್ತಪಡಿಸಿದೆ.

ಆಂಧ್ರಪ್ರದೇಶದಲ್ಲಿ ಬುಡಕಟ್ಟು ಜನಗಳ ಮೇಲೆ ಪೋಲೀಸ್ ಅತ್ಯಾಚಾರ ನಿಲ್ಲಿಸಲು ಕಿಸಾನ್ ಸಭಾದ ಒತ್ತಾಯ

ಆಂಧ್ರಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ಬುಡಕಟ್ಟು ಜನಗಳ ಮೇಲೆ ಪೋಲೀಸರು ನಡೆಸುತ್ತಿರುವ ಅತ್ಯಾಚಾರವನ್ನು ಅಖಿಲ ಭಾರತ ಕಿಸಾನ್ ಸಭಾ ಬಲವಾಗಿ ಖಂಡಿಸಿದೆ. ಇದನ್ನು ತಕ್ಷಣ ನಿಲ್ಲಿಸಿ ಬುಡಕಟ್ಟು ಜನಗಳಿಗೆ ರಕ್ಷಣೆ ನೀಡಬೇಕು, ಅವರಿಗೆ ಅವರ ಭೂಮಿಯನ್ನು ಹಿಂದಿರುಗಿಸಬೇಕು ಎಂದು ಅದು ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಜುಲೈ 9ರಂದು ಒಂದು ಹೇಳಿಕೆ ನೀಡಿ "ಸಾಲ ಇತ್ಯಾದಿಗಳ ಹೆಸರಲ್ಲಿ ಮೋಸ, ವಂಚನೆಗಳ ಮೂಲಕ ಬುಡಕಟ್ಟೇತರ ಭೂಮಾಲಕರು ಮತ್ತು ಸ್ಥಳೀಯ ಮಾಫಿಯಾಗಳು ಕಿತ್ತುಕೊಂಡ ತಮ್ಮ ಜಮೀನನ್ನು ಹಿಂದಿರುಗಿಸಬೇಕು ಎಂಬ ಬುಡಕಟ್ಟು ಜನಗಳ ನ್ಯಾಯ ಬೇಡಿಕೆಗಳನ್ನು ದಮನ ಮಾಡಲು ಈ ಅಮಾನುಷ ಧಾಳಿ ನಡೆಸಲಾಗುತ್ತಿದೆ. ಇತ್ತೀಚಿನ ದಶಕಗಳಲ್ಲಿ ಇಂತಹ ಮೋಸ, ವಂಚನೆಗಳಿಂದ ನಿರಕ್ಷರಿ ಬುಡಕಟ್ಟು ಜನಗಳಿಂದ ಸಾವಿರಾರು ಎಕರೆ ಜಮೀನನ್ನು ಕಿತ್ತುಕೊಳ್ಳಲಾಗಿದೆ. ಇದರಲ್ಲಿ ರೆವಿನ್ಯೂ ಮತ್ತು ಪೋಲೀಸ್ ಅಧಿಕಾರಿಗಳೂ ಶಾಮೀಲಾಗಿ ರುತ್ತಾರೆ. ತೆಲುಗು ದೇಶಂ ಪಕ್ಷವೂ ಸೇರಿದಂತೆ ವಿಭಿನ್ನ ಆಳುವ ಪಕ್ಷಗಳ ಮುಖಂಡರು, ಮಂತ್ರಿ ಗಳು, ಎಂ.ಎಲ್.ಎ.ಗಳು ಈ ಭೂಮಾಲಕ ಮಾಫಿಯಾಗಳಿಗೆ ನೆರವು ನೀಡುತ್ತಿದ್ದಾರೆ" ಎಂದು ಆಪಾದಿಸಿದೆ.

ಇತ್ತೀಚಿನ ತಿಂಗಳುಗಳಲ್ಲಿ ತಮ್ಮ ಹಕ್ಕುಗಳು ಮತ್ತು ಜಮೀನುಗಳನ್ನು ತಿಳಿದ ಕೆಲವು ಬುಡಕಟ್ಟು ಜನರು ತಮ್ಮ ಭೂಮಿಯನ್ನು ಮತ್ತೆ ತಮಗೆ ಹಿಂದಿರುಗಿಸಲು ಒತ್ತಾಯ ಪಡಿಸುತ್ತಿದ್ದಾರೆ. ಈ ಬುಡಕಟ್ಟು ಆಂದೋಲನ ತೀವ್ರವಾಗುತ್ತಿದೆ. ಎಐಕೆಎಸ್, ಎಐಎಡಬ್ಲ್ಯುಯು ಮತ್ತು ಸಿಪಿಐ(ಎಂ) ಕಾರ್ಯಕರ್ತರು ಬಡ ಬುಡಕಟ್ಟು ಜನರ ನೆರವಿಗೆ ಬಂದರು. ಇನ್ನೊಂದು ಕಡೆ ತೆಲುಗು ದೇಶಂ ಸರಕಾರ ಹಾಗೂ ಅದರ ಅಧಿಕಾರಿಗಳು ಸುಳ್ಳು ಆಶ್ವಾಸನೆ ನೀಡಿ ವಾಸ್ತವವಾಗಿ ಬುಡಕಟ್ಟು ಗ್ರಾಮಗಳ ಮೇಲೆ ಧಾಳಿ ನಡೆಸಲು ಕುಖ್ಯಾತ ಭೂಮಾಲಕರಿಗೆ ನೆರವಾಗಲಾರಂಭಿಸಿದರು. ಕಳೆದ ವಾರ ನಡೆದ ದಮನ ಚಕ್ರದಲ್ಲಿ ಅವರು ಬುಡಕಟ್ಟು ಜನಗಳ ಮೇಲೆ ಲಾಠಿ ಹಾಗೂ ಅಶ್ರುವಾಯುಗಳಿಂದ ಧಾಳಿ ಮಾಡಿದರು. ಮಹಿಳೆಯರು, ಮಕ್ಕಳು, ಮುದುಕರನ್ನೂ ಬಿಡಲಿಲ್ಲ. ಆದರೆ ಜನ ಈ ಧಾಳಿಗಳನ್ನು ಐಕ್ಯತೆಯಿಂದ ಎದುರಿಸಿದರು. ಹರಿಜನ, ಗಿರಿಜನ ಮತ್ತು ಇತರ ಹಿಂದುಳಿದ ಜಾತಿಗಳ ನಡುವೆ ಭಿನ್ನಾಭಿಪ್ರಾಯ ಸೃಷ್ಟಿಸುವ ಅವರ ಪ್ರಯತ್ನ ವಿಫಲವಾಯಿತು ಎಂದು ಎಐಕೆಎಸ್ ಹೇಳಿಕೆ ತಿಳಿಸಿದೆ. ಈ ಭಯೋತ್ಪಾದಕ ಕೃತ್ಯಗಳನ್ನು, ದಮನ ಚಕ್ರವನ್ನು ತಕ್ಷಣ ನಿಲ್ಲಿಸಬೇಕು, ಈ ಪ್ರದೇಶದ ಬುಡಕಟ್ಟು ಜನಗಳಿಗೆ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿರುವ ಎಐಕೆಎಸ್ ಪೋಲೀಸ್ ಕಾರ್ಯಾಚರಣೆಯಿಂದ ಉಂಟಾಗಿರುವ ಭಯೋತ್ಪಾದನೆಯ ಬಗ್ಗೆ ಒಂದು ನ್ಯಾಯಾಂಗ ತನಿಖೆ ನಡೆಸ ಬೇಕು ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕಠಿಣಕ್ರಮ ಕೈಗೊಳ್ಳಬೇಕು ಎಂದು ಆಗ್ರಹಪಡಿಸಿದೆ. ಈ ಅಕ್ರಮಕ್ಕೆ ಬಲಿಯಾದ ಬುಡಕಟ್ಟು ಜನಗಳಿಗೆ ಸರಿಯಾದ ಪರಿಹಾರ ನೀಡಬೇಕು ಎಂದು, ಎಐಕೆಎಸ್ ಒತ್ತಾಯಿಸಿ ಮುಖ್ಯಮಂತ್ರಿ ಗಳಿಗೆ ಫ್ಯಾಕ್ಸ್ ಸಂದೇಶ ಕಳಿಸಿದೆ.

(ಪಿಎನ್‌ಎಸ್)

ಕಾಂಟ್ರಾಕ್ಟ್ ಕಾರ್ಮಿಕರ ಹುಮ್ಮಸ್ಸನ್ನು ಅಡಗಿಸಲು ಮಹಿಳಾ ಕಾರ್ಮಿಕಳ ಮೇಲೆ ಅತ್ಯಾಚಾರ, ಕೊಲೆ

ಮಧ್ಯಪ್ರದೇಶದ ಭಿಲ್ಲಾ ಉಕ್ಕು ಸ್ಥಾವರದ ಒಬ್ಬ ಕಾಂಟ್ರಾಕ್ಟ್ ಕಾರ್ಮಿಕಳಾದ ಬಿಜ್ವಾರಿನ್ ಬಾಯಿಯನ್ನು ಉಕ್ಕು ಸ್ಥಾವರದ ಆವರಣದಲ್ಲೇ ಅತ್ಯಾಚಾರಕ್ಕೊಳಪಡಿಸಿ ಕೊಲೆಗೈದ ಆಘಾತಕರ ಘಟನೆ ವರದಿಯಾಗಿದೆ. ಕಾಂಟ್ರಾಕ್ಟ್ ಕಾರ್ಮಿಕರು ತಮ್ಮ ಸೇವೆಗಳನ್ನು ಖಾಯಂಗೊಳಿಸಲು ಹಾಗೂ ಭವಿಷ್ಯನಿಧಿಗಾಗಿ ಒಂದು ಆಂದೋಲನವನ್ನು ಕಟ್ಟಿ ಬೆಳೆಸುತ್ತಿದ್ದು ಅವರನ್ನು ಭಯಗ್ರಸ್ತಗೊಳಿಸಲು ಈ ಕೃತ್ಯ ಎಸಗಲಾಗಿದೆ. ಬಿಜ್ವಾರಿನ್ ಬಾಯಿ ಒಬ್ಬ ಸಕ್ರಿಯ ಸಿಐಟಿಯು ಕಾರ್ಯಕರ್ತೆಯಾಗಿದ್ದರು. ಬಹಳಷ್ಟು ಮಹಿಳಾ ಕಾರ್ಮಿಕರು ಸೇರಿದಂತೆ ಸಾವಿರಾರು ಕಾರ್ಮಿಕರು ಈ ಚಳುವಳಿಯಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ. ಕಾರ್ಮಿಕರ ಹುಮ್ಮಸ್ಸನ್ನು ಹಾಗೂ ಹೋರಾಟ ಮನೋಭಾವವನ್ನು ಹಾಳುಗೆಡವಲು ಈ ಅಮಾನುಷ ಅತ್ಯಾಚಾರ ಮತ್ತು ಕೊಲೆ ನಡೆದಿದೆ ಎಂದು ಸಿಐಟಿಯು ಹೇಳಿದೆ.

ಸಿಪಿಐ(ಎಂ)ನ ದುರ್ಗಾ ಜಿಲ್ಲಾ ಘಟಕ ಸಿಐಟಿಯು, ಎಸ್.ಎಫ್.ಐ., ಡಿವೈಎಫ್‌ಐ ಹಾಗೂ ಜನವಾದಿ ಮಹಿಳಾ ಸಂಘಟನೆಗಳು ಈ ಘಟನೆಯನ್ನು ಬಲವಾಗಿ ಖಂಡಿಸಿವೆ. ಈ ಅಪರಾಧಕ್ಕೆ ಕಾರಣಕರ್ತರಾದ ಕಾಂಟ್ರಾಕ್ಟರುಗಳು ಹಾಗೂ ಅಧಿಕಾರಿಗಳನ್ನು ತಕ್ಷಣ ಬಂಧಿಸಿ ಅವರಿಗೆ ಅತ್ಯಂತ ಕಠಿಣ ಶಿಕ್ಷೆ ವಿಧಿಸಬೇಕೆಂದು, ಇಲ್ಲವಾದರೆ ಸಿಪಿಐ(ಎಂ) ಮತ್ತು ಸಾಮೂಹಿಕ ಸಂಘಟನೆಗಳು ಒಂದು ದೊಡ್ಡ ಕಾರ್ಯಾಚರಣೆಗೆ ಇಳಿಯ ಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಕೊಲೆಯಾದ ಕಾರ್ಮಿಕಳ ಕುಟುಂಬಕ್ಕೆ ತಕ್ಷಣ 5 ಲಕ್ಷ ಪರಿಹಾರ ನೀಡಬೇಕು ಹಾಗೂ ಆಕೆಯ ಕುಟುಂಬದ ಒಬ್ಬ ಸದಸ್ಯನಿಗೆ ಖಾಯಂ ಉದ್ಯೋಗ ನೀಡಬೇಕು ಎಂದು ಭಿಲ್ಲಾ ಉಕ್ಕು ಸ್ಥಾವರದ ಆಡಳಿತ ಮಂಡಳಿಯನ್ನು ಒತ್ತಾಯಿಸಲಾಗಿದೆ. ಸ್ಥಾವರದ ಒಳಗೆ ಹಾಗೂ ಹೊರಗೆ ಎಲ್ಲಾ ಕಾರ್ಮಿಕ ಶಾಸನಗಳನ್ನು ಪಾಲಿಸುವಂತೆ ಮಾಡುವುದು ಸ್ಥಾವರದ ಮ್ಯಾನೇಜ್‌ಮೆಂಟಿನ ಹೊಣೆ ಎಂದಿರುವ ಈ ಸಂಘಟನೆಗಳು ಈ ಘಟನೆಯ ಸಿಬಿಐ ತನಿಖೆ ನಡೆಸಬೇಕು ಹಾಗೂ ಕಾಂಟ್ರಾಕ್ಟ್ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿದೆ.

ಬಹಿರಂಗವಾಗಿಯೇ ಭ್ರಷ್ಟಾಚಾರ, ಕಳವು, ಅತ್ಯಾಚಾರ, ಹಿಂಸಾಚಾರ, ಕೊಲೆಗಳನ್ನು ನಡೆಸುವ ಕಾಂಟ್ರಾಕ್ಟರ್ ಮಾಫಿಯಾದ ಕೃತ್ಯಗಳ ಬಗ್ಗೆ ಭಿಲ್ಲಾ ಉಕ್ಕು ಸ್ಥಾವರದ ಆಡಳಿತ ಬೇಕೆಂದೇ ಕುರುಡಾಗಿ ವರ್ತಿಸುತ್ತಿದೆ ಎಂದು ಆಪಾದಿಸಿರುವ ಈ ಸಂಘಟನೆಗಳ ಜಂಟಿ ಹೇಳಿಕೆ 'ಇನ್ನು ಹೋಲುವ ಸಂಗತಿಯೆಂದರೆ ದಿಗ್ವಿಜಯ್ ಸಿಂಗ್ ಸರಕಾರ ಹಾಗೂ ಜಿಲ್ಲಾ ಮಟ್ಟದ ಆಡಳಿತ ಮತ್ತು ಪೋಲೀಸ್ ಮಾಫಿಯಾದ ಕಾನೂನು ಬಾಹಿರ ಚಟುವಟಿಕೆಗಳ ವಿರುದ್ಧ ಏನೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಖೇದ ವ್ಯಕ್ತಪಡಿಸಿವೆ. ಇಂತಹ ಸನ್ನಿವೇಶದಲ್ಲಿ ಸ್ಥಾವರದ ಕಾಂಟ್ರಾಕ್ಟ್ ಕಾರ್ಮಿಕರ, ಅದರಲ್ಲೂ ಮಹಿಳಾ ಕಾರ್ಮಿಕರ ಜೀವ ಮತ್ತು ಗೌರವಕ್ಕೆ ರಕ್ಷಣೆಯಿಲ್ಲದಾಗಿದೆ. ಇದಕ್ಕೆ ಆಡಳಿತ ವರ್ಗವೇ ಹೊಣೆ. ಪರಿಸ್ಥಿತಿ ಬದಲಾಗದಿದ್ದರೆ ಖಾಯಂಕಾರ್ಮಿಕರ ಭದ್ರತೆಗೂ ಧಕ್ಕೆ ಬರಲಿದೆ. ಆದ್ದರಿಂದ ಕಾರ್ಮಿಕರ ಒಂದು ಐಕ್ಯ ಹೋರಾಟ ಅಗತ್ಯ. ಆಡಳಿತ ಮತ್ತು ಕಾಂಟ್ರಾಕ್ಟರುಗಳ ಇಂತಹ ಹೊಲಸು ತಂತ್ರಗಳು ಹಾಗೂ ಪಿತೂರಿಗಳಿಂದ ಕಾರ್ಮಿಕರ ಧೀರ ಹೋರಾಟವನ್ನು ಬಗ್ಗು ಬಡಿಯಲು ಅವರ ಹುಮ್ಮಸ್ಸನ್ನು ಇಳಿಸಲು ಸಾಧ್ಯವಿಲ್ಲ ಎಂದು ಸಂಘಟನೆಗಳು ಎಚ್ಚರಿಸಿವೆ.



ಪ್ರಧಾನಿಗಳಿಗೆ ಸುರ್ಜಿತ್ ಪತ್ರ

"ನ್ಯಾಯಾಂಗದ ಸ್ವಾತಂತ್ರ್ಯವನ್ನು ಮೊಟಕು ಮಾಡುವ ಸಂದೇಹಗಳಿಗೆ ಅವಕಾಶ ಕೊಡಬೇಡಿ"

1993ರ ಮೊದಲಿದ್ದಂತೆ ನ್ಯಾಯಾಧೀಶರ ನೇಮಕವನ್ನು ಮಾಡಬೇಕು ಎನ್ನುವ ಕೇಂದ್ರ ಸರಕಾರದ ಪ್ರಯತ್ನಗಳನ್ನು ವಿರೋಧಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್‌ರವರು ಪ್ರಧಾನ ಮಂತ್ರಿಗಳಿಗೆ ಜುಲೈ 8 ರಂದು ಒಂದು ಪತ್ರ ಬರೆದರು. ಆ ಪತ್ರದ ಒಕ್ಕಣೆಯನ್ನು ಈ ಕೆಳಗೆ ಕೊಡಲಾಗಿದೆ.

ಪ್ರಿಯ ಶ್ರೀ ಗುಜ್ರಾಲ್,

ನಾನು ಇದೀಗ ವಿದೇಶಿ ಪ್ರವಾಸವೊಂದರಿಂದ ಹಿಂದಿರುಗುತ್ತಲೇ ಸರಕಾರ ನ್ಯಾಯಾಧೀಶರ ನೇಮಕ ಕುರಿತಂತೆ 1993 ರ ಮೊದಲಿದ್ದ ಕ್ರಮವನ್ನೇ ಪುನಃ ಅನುಸರಿಸಲು ಒಂದು ಸಂವಿಧಾನ ತಿದ್ದುಪಡಿ ಮಸೂದೆಯನ್ನು ತರಲು ಬಯಸುತ್ತದೆ ಎಂದು ತಿಳಿಯಿತು. ನವದೆಹಲಿಯಲ್ಲಿ ಜುಲೈ 1 ರಂದು ಕಾನೂನು ಮಂತ್ರಿಗಳ ಸಮ್ಮೇಳನದ ನಂತರ ಕಾನೂನು ಮಂತ್ರಿಗಳು ಇಂತಹ ಒಂದು ಪ್ರಕಟಣೆ ನೀಡಿದ್ದಾರೆ. ಕೆಲವು ತಿಂಗಳ ಹಿಂದೆ ಈ ಪ್ರಶ್ನೆಯನ್ನು ಪರಿಶೀಲಿಸಿ ಇಂತಹ ಕ್ರಮವನ್ನು ಅನುಸರಿಸಬಾರದು ಎಂದು ನಿರ್ಧರಿಸಿರುವಾಗ ಕಾನೂನು ಮಂತ್ರಿಗಳ ಇಂತಹ ಒಂದು ನಿಲುವಿನಿಂದ ನನಗೆ ನಿಜಕ್ಕೂ ಆಶ್ಚರ್ಯವಾಗಿದೆ.

ದೇವೇಗೌಡರ ಸರಕಾರದ ಅವಧಿಯಲ್ಲಿ ಶ್ರೀಯುತ ಕಲಪ್‌ರವರು ಇಂತಹ ಒಂದು ಸಂವಿಧಾನ ತಿದ್ದುಪಡಿಯ ಪ್ರಸ್ತಾಪವನ್ನಿಟ್ಟಾಗ ನಮ್ಮ ಪಕ್ಷ ಮತ್ತು ಇತರ ಕೆಲವು ಪಕ್ಷಗಳು ಹೀಗೆ ಮತ್ತೆ 1993 ರ ಹಿಂದೆ ಇದ್ದ ವಿಧಾನ ಅನುಸರಿಸುವುದು ಸರಿಯಲ್ಲ ಎಂದು ಹೇಳಿದ್ದವು. ಅದರ ಬದಲು ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರ ನೇಮಕಕ್ಕೆ ಒಂದು ಸ್ವತಂತ್ರ ರಾಷ್ಟ್ರೀಯ ನ್ಯಾಯಿಕ ಆಯೋಗವನ್ನು ರಚಿಸಬಹುದು ಎಂದು ನಾವು ಪ್ರತಿಪಾದಿಸಿದ್ದೆವು. ಬಹಳಷ್ಟು ಪ್ರತಿಷ್ಠಿತ ನ್ಯಾಯಾಧೀಶರ, ವಕೀಲರ ಅಭಿಪ್ರಾಯವೂ ಇದೇ ಆಗಿದೆ. ಬಹಳಷ್ಟು ವಿಷಯಗಳಲ್ಲಿ ಮುಖ್ಯವಾಗಿ ಭ್ರಷ್ಟಾಚಾರದ ಕೇಸುಗಳನ್ನು ಪರಿಶೀಲಿಸುವಲ್ಲಿ ಕಾರ್ಯಾಂಗ ವಿಫಲವಾಗಿರುವ ಬಗ್ಗೆ ಸಾರ್ವಜನಿಕರು ಬೇಸರಪಟ್ಟುಕೊಳ್ಳುತ್ತಿರುವಾಗ ಸರಕಾರ ಮುಂದಿಟ್ಟಿರುವ ಇಂತಹ ಒಂದು ಕ್ರಮ ಮಂದ ದೃಷ್ಟಿಯ ಕ್ರಮವಾಗುತ್ತದೆ ಹಾಗೂ ನ್ಯಾಯಾಂಗದ ಸ್ವಾತಂತ್ರ್ಯವನ್ನು ಮೊಟಕು ಮಾಡುವ ಗಂಭೀರ ಸಂದೇಹಗಳಿಗೆ ಕಾರಣವಾಗುತ್ತದೆ.

ನೀವು ಮಧ್ಯ ಪ್ರವೇಶಿಸಿ ತಕ್ಷಣ ಈ ಪ್ರಸ್ತಾಪವನ್ನು ಕೈ ಬಿಟ್ಟು ಒಂದು ರಾಷ್ಟ್ರೀಯ ನ್ಯಾಯಿಕ ಆಯೋಗದ ರಚನೆಗೆ ಕ್ರಮ ಕೈಗೊಳ್ಳುವಂತೆ ಮಾಡುತ್ತೀರಿ ಎಂದು ಆಶಿಸುತ್ತೇನೆ.

ವಂದನೆಗಳೊಂದಿಗೆ

ನಿಮ್ಮ ವಿಶ್ವಾಸಿ

ಹರ್ಕಿಶನ್‌ಸಿಂಗ್ ಸುರ್ಜಿತ್


ಕಲ್ಲಿದ್ದಲು ಕಾರ್ಮಿಕರ ಮುಷ್ಕರ ಜುಲೈ 28-29-30

ಜುಲೈ 6ರಂದು ಧನ್‌ಬಾದ್‌ನಲ್ಲಿ ನಡೆದ ಕಲ್ಲಿದ್ದಲು ಕಾರ್ಮಿಕರ ರಾಷ್ಟ್ರೀಯ ಸಮಾವೇಶದ ನಿರ್ಣಯದ ಪ್ರಕಾರ ಜುಲೈ 28, 29 ಹಾಗೂ 30ರಂದು ಮೂರು ದಿನಗಳ ಅಖಿಲ ಭಾರತ ಮುಷ್ಕರ ನಡೆಸುವ ನೋಟೀಸನ್ನು ಸರಕಾರಕ್ಕೆ ನೀಡಲಾಗಿದೆ. ಕಲ್ಲಿದ್ದಲು ಗಣಿಗಳಲ್ಲಿ ಖಾಸಗೀಕರಣ ಮತ್ತು ಕಲ್ಲಿದ್ದಲು ಆಮದು ನೀತಿಗಳ ವಿರುದ್ಧ ಪ್ರತಿಭಟಿಸಲು ಏಳೂವರೆ ಲಕ್ಷ ಕಲ್ಲಿದ್ದಲು ಗಣಿ ಕಾರ್ಮಿಕರು ಈ ಮುಷ್ಕರ ನಡೆಸಲಿದ್ದಾರೆ. ಇಂಟಕ್, ಎಐಟಿಯುಸಿ, ಸಿಐಟಿಯು, ಹೆಚ್‌ಎಂಎಸ್, ಬಿಎಂಎಸ್‌ಗೆ ಸೇರಿದ ಐದು ಸಂಘಗಳು ಈ ಮುಷ್ಕರಕ್ಕೆ ಕರೆ ನೀಡಿವೆ. ಕಲ್ಲಿದ್ದಲು ಗಣಿಗಾರಿಕೆಯ ಖಾಸಗೀಕರಣ ನಿಲ್ಲಿಸಬೇಕು, ಕಲ್ಲಿದ್ದಲು ಗಣಿ ರಾಷ್ಟ್ರೀಕರಣ ಶಾಸನದ ತಿದ್ದುಪಡಿಯನ್ನು ಕೈಬಿಡಬೇಕು, ಆಮದು ಕಲ್ಲಿದ್ದಲು ಮೇಲಿನ ಸುಂಕದ ಕಡಿತವನ್ನು ಕೈಬಿಟ್ಟು ಅದನ್ನು 1989-90ರ ಮಟ್ಟಕ್ಕೆ ತರಬೇಕು, ಭಾರತದ ಕಲ್ಲಿದ್ದಲು ಉದ್ದಿಮೆಯನ್ನು ರಕ್ಷಿಸಲು ಕಲ್ಲಿದ್ದಲಿನ ಆವಾದನ್ನು ನಿಲ್ಲಿಸಬೇಕು, ಕಲ್ಲಿದ್ದಲು ಉದ್ದಿಮೆಯನ್ನು ಒಂದು ಏಕೀಕೃತ ಕಂಪನಿಯಾಗಿ ಮರು ಸಂಘಟಿಸಿ ಪೂರ್ಣ ಸ್ವಾಯತ್ತತೆ ನೀಡಬೇಕು ಹಾಗೂ ಕಲ್ಲಿದ್ದಲು ಉದ್ದಿಮೆಗೆ ಬಜೆಟ್ ನೆರವನ್ನು ಮತ್ತೆ ನೀಡಬೇಕು ಎಂಬುದು ಕಲ್ಲಿದ್ದಲು ಕಾರ್ಮಿಕರ ಪ್ರಮುಖ ಬೇಡಿಕೆಗಳು.

ತನ್ನ ರಾಷ್ಟ್ರವಿರೋಧಿ, ಕಲ್ಲಿದ್ದಲು ನೀತಿಗಳನ್ನು ಭಾರತ ಸರಕಾರ ನಿಲ್ಲಿಸದಿದ್ದರೆ ರಾಷ್ಟ್ರೀಯ ಹಿತಾಸಕ್ತಿಗಳನ್ನು ಕಾಪಾಡಲು ಕಲ್ಲಿದ್ದಲು ಕಾರ್ಮಿಕರ ದೀರ್ಘ ಕಾಲದ ಮುಷ್ಕರದ ಕಾರ್ಯಚರಣೆಯಲ್ಲದೆ ಬೇರೆ ದಾರಿಯಿಲ್ಲ ಎಂದು ಕಲ್ಲಿದ್ದಲು ಕಾರ್ಮಿಕರ ಮುಖಂಡರು ಭಾರತ ಸರಕಾರಕ್ಕೆ ಮುಷ್ಕರದ ನೋಟೀಸು ನೀಡುತ್ತಾ ಎಚ್ಚರಿಸಿದ್ದಾರೆ. (ಐಎನ್‌ಎನ್)

ವಾರದ ವ್ಯಂಗ್ಯ ಚಿತ್ರ

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉಣ್ಣಿ



ಅಂತರಾಷ್ಟ್ರೀಯ ವಿದ್ಯಾರ್ಥಿ ಯುವಜನೋತ್ಸವಕ್ಕೆ ಸುವರ್ಣವರ್ಷದ ಸಂಭ್ರಮ



ಈ ವರ್ಷ ಜುಲೈ 28 ರಿಂದ ಆಗಸ್ಟ್ 5 ರ ವರೆಗೆ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಕ್ಕೆ ಚಿರಂತನ ಸ್ಫೂರ್ತಿಯ ಸೆಲೆಯಾಗಿರುವ ಕ್ಯೂಬಾದಲ್ಲಿ ಅಂತರ್ರಾಷ್ಟ್ರೀಯ ಯುವಜನೋತ್ಸವ ನಡೆಯಲಿದೆ. ವಿಶ್ವದ ಪ್ರಗತಿಪರ ಜನತೆ 14ನೇ ಈ ಯುವ ಜನೋತ್ಸವವನ್ನು ಕಾತರದಿಂದ ಎದುರು ನೋಡುತ್ತಿದೆ. ಅಂತರ್ರಾಷ್ಟ್ರೀಯ ರಂಗದಲ್ಲಿ ಇಂದು ವಿದ್ಯಾರ್ಥಿ-ಯುವಜನರನ್ನು ಬಾಧಿಸುತ್ತಿರುವ ಸಮಸ್ಯೆಗಳ ವಿರುದ್ಧ ಹೋರಾಟದ ಇತಿಹಾಸವೇ ಈ ಉತ್ಸವದ ಇತಿಹಾಸದೊಂದಿಗೆ ಬೆಸೆದುಕೊಂಡಿದೆ.

ನವೆಂಬರ್ 7 ರ 1945 ರಂದು 12 ದಿನಗಳ ಚರ್ಚೆಯ ನಂತರ ವಿಶ್ವ ವಿದ್ಯಾರ್ಥಿ ಯುವಜನ ಒಕ್ಕೂಟ ಒಂದು ಗೊತ್ತುವಳಿ ಅಂಗೀಕರಿಸಿ 'ವಿದ್ಯಾರ್ಥಿ ಯುವಜಗತ್ತ'ನ್ನು ಸಂಘಟಿಸಲಾಯಿತು.

ದ್ವಿತೀಯ ಮಹಾಯುದ್ಧ ಅತ್ಯಂತ ವಿನಾಶಕಾರಿ ಮಾರಣಹೋಮ ಕಂಡಿತ್ತಲ್ಲದೇ ಮಾರ್ಷಲ್ ಯೋಜನೆ ಮತ್ತು 'ಟ್ರೂಮನ್ ಸೂತ್ರ'ಗಳನ್ನು ಪಶ್ಚಿಮ ಯುರೋಪಿನ ರಾಷ್ಟ್ರಗಳ ಮೇಲೆ ಹೇರಲಾಗಿತ್ತು. ಇದಲ್ಲದೇ ಇಂಡೋ-ಚೀನಾ ಮತ್ತು ಗ್ರೀಸ್‌ನಲ್ಲಿ ಅತ್ಯಂತ ಆತಂಕಕಾರಿ ಪರಿಸ್ಥಿತಿ ನಿರ್ಮಾಣವಾಗಿತ್ತು.

ನಾಜಿವಾದ-ಫ್ಯಾಸಿವಾದಗಳು ಮಣ್ಣುಮುಕ್ಕಿದ್ದರಿಂದ ಸಾಮ್ರಾಜ್ಯಶಾಹಿ ಅಮೆರಿಕಾ-ಇಂಗ್ಲೆಂಡ್‌ಗಳಿಗೆ ಒಂದೆಡೆ ಸಂತೋಷವಾಗಿದ್ದರೆ ಇನ್ನೊಂದೆಡೆ ಸೋವಿಯತ್ ಒಕ್ಕೂಟ ಬಲಯುತಗೊಂಡ ಬಗ್ಗೆ ಅಸಂತೋಷವೂ ಇತ್ತು. ಸೋವಿಯತ್ ಒಕ್ಕೂಟ ಯುದ್ಧಾನಂತರದಲ್ಲಿ ಹೆಚ್ಚು ಬಲಿಷ್ಠಗೊಂಡದ್ದರಿಂದ ಈ ರಾಷ್ಟ್ರಗಳು (ಅಮೆರಿಕ, ಇಂಗ್ಲೆಂಡ್) ಕುತಂತ್ರ ರಚಿಸುವುದರಲ್ಲಿ ನಿರತವಾಗಿದ್ದವು.

ವಿಫಲಗೊಳಿಸುವ ಸನ್ನಾಹ

ಈ ಅಂತರ್ರಾಷ್ಟ್ರೀಯ ಹಿನ್ನೆಲೆಯಲ್ಲಿ ಈ ವಿದ್ಯಾರ್ಥಿ-ಯುವಜನ ಒಕ್ಕೂಟಕ್ಕೂ ವಿಶೇಷ ಮಹತ್ವ ಬಂದಿತ್ತು. ಎರಡು ವರ್ಷಗಳ ನಿರಂತರ ಪರಿಶ್ರಮದ ನಂತರ ಸಂಘಟಿಸಲಾಗಿದ್ದ ಈ ಸಮ್ಮೇಳನವನ್ನು ಹೇಗಾದರೂ ಮಾಡಿ ವಿಫಲಗೊಳಿಸಬೇಕೆಂದು ಅಮೆರಿಕಾ-ಇಂಗ್ಲೆಂಡುಗಳು ನಿರ್ಧರಿಸಿದವು. ಬ್ರೆಜಿಲ್, ಗ್ರೀಸ್ ದೇಶಗಳಂತೂ ತಮ್ಮ ಪ್ರತಿನಿಧಿಗಳನ್ನು ಬಂಧಿಸಿಟ್ಟವು. ಬ್ರಿಟನ್ ಲೇಬರ್ ಪಕ್ಷ ತನ್ನ ಯುವಜನ ಸಂಘಟನೆ ಭಾಗವಹಿಸಬಾರದೆಂದು ನಿರ್ಧರಿಸಿತು. ವ್ಯಾಟಿಕನ್ ದೇಶವು 'ಉತ್ಸವಕ್ಕೆ ಹೋಗುವ ದಾರಿ ಮಾಸ್ಕೋಗೆ ಹೋಗುತ್ತದೆ' ಎಂದು ಎಚ್ಚರಿಸಿತು.

ಈ ಯಾವ ಸನ್ನಾಹಗಳೂ ಯುವ ಜನತೆಯ ಅದಮ್ಯ ಉತ್ಸಾಹವನ್ನು ಕುಂದಿಸಲಾಗಲಿಲ್ಲ. ವಿಶ್ವದ ಇತಿಹಾಸದಲ್ಲೇ ಅತ್ಯಂತ ಹೆಚ್ಚು ಅವಧಿಯ ಈ ಪ್ರಪ್ರಥಮ ಉತ್ಸವ 1947 ರ ಜುಲೈ 25 ರಿಂದ ಆಗಸ್ಟ್ 17 ರ ವರೆಗೆ 71 ರಾಷ್ಟ್ರಗಳ 17000 ಪ್ರತಿನಿಧಿಗಳು ಜೆಕೋಸ್ಲೋವಿಯಾದ ರಾಜಧಾನಿ ಪ್ರಾಹಾದಲ್ಲಿ ಭಾಗವಹಿಸುವುದರೊಂದಿಗೆ ಯಶಸ್ವಿಯಾಗಿ ನಡೆಯಿತು.

ನಂತರದ ಸಮ್ಮೇಳನಗಳು 1949 ರಲ್ಲಿ ಬುಡಾಪೆಸ್ಟ್‌ನಲ್ಲಿ, 1951 ರಲ್ಲಿ ಬರ್ಲಿನ್‌ನಲ್ಲಿ ಸಂಘಟಿಸಲ್ಪಟ್ಟವು. ಪಶ್ಚಿಮ ಬರ್ಲಿನ್‌ನ ಮೇಯರ್‌ರವರ ಆಹ್ವಾನಕ್ಕೆ ಪಶ್ಚಿಮ ಜರ್ಮನಿಯಲ್ಲಿ ಸೇರಿದ ಸಾವಿರಾರು ಯುವಜನರ ಮೇಲೆ ಹಲ್ಲೆ ಮಾಡಲು ಸಾಮ್ರಾಜ್ಯಶಾಹಿಗಳು ಹೇಸಲಿಲ್ಲ. ನಿರಾಯುಧರಾದ ಸಾವಿರಾರು ಯುವಕರು ಗಾಯಗೊಂಡರು.

1953ರಲ್ಲಿ ಬುಖಾರೆಸ್ಟ್‌ನಲ್ಲಿ 1955 ರಲ್ಲಿ ವಾರ್ಸಾದಲ್ಲಿ ನಡೆದ ಯುವಜನ ಸಮ್ಮೇಳನ 1957 ರಲ್ಲಿ ಮಾಸ್ಕೊದಲ್ಲಿ ನಡೆಯಿತು. ಪ್ರಪಂಚದ ವಿವಿಧೆಡೆಯಿಂದ ಬಂದ 34,000 ಪ್ರತಿನಿಧಿಗಳು ಈ ಸಮಾಜವಾದಿ ರಾಷ್ಟ್ರದ ಅದ್ಭುತ ಪ್ರಗತಿಯನ್ನು ಪ್ರತ್ಯಕ್ಷವಾಗಿ ಕಾಣುವಂತಾಯಿತು. ಪ್ರಪಂಚದ ಪ್ರಥಮ ಸಮಾಜವಾದಿ ರಾಷ್ಟ್ರವಾದ ಸೋವಿಯತ್ ಒಕ್ಕೂಟದ ಬಗ್ಗೆ ವಿಶ್ವದ ಜನತೆ ಸಮೀಪದಿಂದ ಕಂಡು ಸರಿಯಾದ ಕಲ್ಪನೆಯನ್ನು ಬೆಳೆಸಿಕೊಳ್ಳಲು ಉತ್ಸವ ಸಹಾಯಕವಾಯಿತು.

ವಿಯೆನ್ನಾದ 1959 ರ ಉತ್ಸವಕ್ಕೆ ಪಾಲ್ ರಾಬಿನ್‌ಸನ್, ಬ್ರಿಟಿಷ್ ವಿಜ್ಞಾನಿ ಜೆ.ಡಿ. ಬರ್ನಾಲ್ ಸೋವಿಯತ್ ಮನೋವಿಜ್ಞಾನಿ ಪ್ರೊ.ಓಪಾರಿನ್ ಮತ್ತು ಪ್ರೊ ಹೊಲಿಶ್ವರ್ ಭಾಗವಹಿಸಿದ್ದರು.

ಫಿನ್‌ಲ್ಯಾಂಡ್‌ನ ರಾಜಧಾನಿ ನಗರ ಹೆಲ್ಸಿಂಕಿಯಲ್ಲಿ 1962 ರಲ್ಲಿ ನಡೆದ ಉತ್ಸವದ ಸಂದರ್ಭದಲ್ಲಿ ಕೊರಿಯಾದ ಮತ್ತು ತುರ್ಕಿಯ ಜನತೆ ಸ್ವಾತಂತ್ರ್ಯಕ್ಕಾಗಿ ಹವಣಿಸುತ್ತಿತ್ತು. ಜೊತೆಗೆ ಸಾಮ್ರಾಜ್ಯಶಾಹಿ-ಫ್ಯಾಸಿವಾದ ವಿರೋಧಿ ಹೋರಾಟವೂ ಸಾಕಷ್ಟು ಬಿರುಸಿನಿಂದ ಸಾಗಿತ್ತು. ಒಂದೆಡೆ ಅಲ್ಜೀರಿಯಾ, ಅಂಗೋಲಾಗಳು ಹೋರಾಡುತ್ತಿದ್ದರೆ ಅಮೆರಿಕನ್ ಆಕ್ರಮಣದ ವಿರುದ್ಧ ಲಾವೋಸ್, ದ.ವಿಯೆಟ್ನಾಂಗಳು ಸಂಘರ್ಷ ನಡೆಸಿದ್ದವು. ಶೀತಲ ಯುದ್ಧದ ಆ ಸಂದರ್ಭದಲ್ಲಿ ಸೋವಿಯತ್ ಒಕ್ಕೂಟದ ಎಲ್ಲಾ ಶಾಂತಿ ಪ್ರಸ್ತಾಪಗಳನ್ನು ಅಮೆರಿಕಾ ತಿರಸ್ಕರಿಸಿತು. ಪರಮಾಣು ವಿರೋಧಿ ಪರೀಕ್ಷೆಗಳನ್ನು ಕೂಡ ನಿರಾಕರಿಸಿತು. ಥಾಯ್‌ಲ್ಯಾಂಡಿಗೆ ತನ್ನ ಪಡೆಗಳನ್ನು ಕಳಿಸಿದ್ದಲ್ಲದೇ ಜರ್ಮನಿಯನ್ನು ಆಕ್ರಮಿಸಲು ಪ್ರಯತ್ನಿಸಿತು. ನಾಟೋ ಪ್ರಚಾರ ಕಛೇರಿಯಿಂದ ಸಂಘಟಿಸಲಾಗಿದ್ದ 250,000 ಡಾಲರುಗಳ ಮೊದಲ ಕಂತಿನ ಮೊತ್ತ ಉತ್ಸವವನ್ನು ವಿಫಲ ಗೊಳಿಸುವ ಪ್ರಯತ್ನ ಮಣ್ಣು ಮುಕ್ಕಿತು. ಉತ್ಸವ ಯಶಸ್ವಿಯಾಯಿತು.

ಹೊಸ ಅವಧಿಯಲ್ಲಿ

1968 ರಲ್ಲಿ ಬಲ್ಗೇರಿಯಾದಲ್ಲಿ ನಡೆದ ಉತ್ಸವ 1973 ರಲ್ಲಿ ಬರ್ಲಿನ್‌ನಲ್ಲಿ ನಡೆಯಿತು. ಈ ಬೆಳ್ಳಿವರ್ಷದ ಸಮ್ಮೇಳನದಲ್ಲೂ ಅನೇಕ ಕ್ರಿಶ್ಚಿಯನ್ ಡೆಮಾಕ್ರಟಿಕ್ ಮತ್ತಿತರ ಯುವ ಸಂಘಗಳೂ ಭಾಗವಹಿಸಿ ಪ್ರೋತ್ಸಾಹಿಸಿದವು. ವಿಶ್ವಶಾಂತಿ ಮತ್ತು ಸ್ವಾತಂತ್ರ್ಯದ ಹೊಸ ಯುಗಕ್ಕೆ ಕಾಲಿಡುತ್ತಿದ್ದ ಈ ಸಂದರ್ಭದಲ್ಲಿ ಉತ್ಸವ ನಡೆಯುತ್ತಿತ್ತು. ಪ್ರಮುಖವಾಗಿ 1973 ರಲ್ಲಿ ಪ್ಯಾರಿಸ್‌ನಲ್ಲಿ ವಿಯೆಟ್ನಾಂ ಶಾಂತಿ ಸಂಧಾನ ಏರ್ಪಟ್ಟಿತ್ತು. ಅಮೆರಿಕಾ ಸೋವಿಯತ್ ಸಂಧಾನ, ಗಿನಿಯಾ ಬಿಸಾವು ಸ್ವಾತಂತ್ರ್ಯ ಕಂಡರೆ, ಪಶ್ಚಿಮ ಮತ್ತು ಪೂರ್ವ ಜರ್ಮನಿಗಳಿಗೆ ವಿಶ್ವಸಂಸ್ಥೆ ಮಾನ್ಯತೆ ಕೊಟ್ಟಿತ್ತು.

ಇನ್ನೊಂದೆಡೆ ವಿಯೆಟ್ನಾಂ ಶಾಂತಿ ಸಂಧಾನವನ್ನು ಅಮೆರಿಕಾ ಧಿಕ್ಕರಿಸಿತು. ಕಾಂಬೋಡಿಯಾ ಯುದ್ಧ, ಫ್ಯಾಸಿಸ್ಟ್ ಮಿಲಿಟರಿ ಬಂಡಾಯ ಚಿಲಿಯಲ್ಲಿ ನಡೆದಿತ್ತು. ನಂತರ ಕ್ಯೂಬಾದಲ್ಲಿ 1978 ರಲ್ಲಿ ಮಾಸ್ಕೋದಲ್ಲಿ 1985 ರಲ್ಲಿ ಉತ್ಸವ ನಡೆಯಿತು. ಅದು ರಶಿಯಾದ ಯುವ ಜನತೆಯ ಮಹಾನ್ ದೇಶಪ್ರೇಮಿ ಯುದ್ಧದ 40ನೇ ಜಯಂತಿಯ ಸಂದರ್ಭ. ಇಲ್ಲಿನ ಯುವಜನತೆ ಸಮಾಜ ವಾದಿ ಆದರ್ಶಗಳಿಗೆ ತನ್ನ ಅದ್ಭುತ ಸಮರ್ಥನೆ ತೋರಿತು. ಸಮಾಜವಾದದ ಅಮೂಲ್ಯ ಸಾಧನೆಗಳನ್ನು ಕಾಪಾಡಿಕೊಳ್ಳುವ ಪ್ರತಿಜ್ಞೆ ತೊಟ್ಟಿತು.

ಪ್ಯಾಂಗ್‌ಯಾಂಗ್‌ನಲ್ಲಿ ನಡೆದ1989 ರ ಯುವಜನೋತ್ಸವ ಏಷ್ಯಾದಲ್ಲಿ ನಡೆದ ಪ್ರಥಮ ಉತ್ಸವವಾಗಿತ್ತು. ಕಾರ್ಮಿಕ ವರ್ಗದ ತ್ಯಾಗ ಬಲಿದಾನದೊಂದಿಗೆ ರಕ್ತ ಪಿಪಾಸು ಅಮೆರಿಕೆಯನ್ನು ಹೊಡೆದೋಡಿಸಿದ ಕೋರಿಯನ್ ಜನತೆಯ ವೀರಗಾಥೆಯನ್ನು ಸಮೀಪದಿಂದ ವಿಶ್ವದ ವಿದ್ಯಾರ್ಥಿ ಯುವಜನತೆ ಕಂಡಿತು.

ಈ ರೀತಿ ಈ ವಿದ್ಯಾರ್ಥಿ ಯುವ ಜನೋತ್ಸವ 50 ಸುವರ್ಣ ವರ್ಷಗಳನ್ನು ಕಂಡಿದೆ.

ಈ ಬಾರಿ ಮತ್ತೆ ಕ್ಯೂಬಾದಲ್ಲಿ

ಈಗ 14ನೇ ವಿಶ್ವ ಯುವಜನ ಮತ್ತು ವಿದ್ಯಾರ್ಥಿ ಉತ್ಸವವು ಕ್ಯೂಬಾ ದೇಶದಲ್ಲಿ ಜರುಗಲಿದೆ. ಜಗತ್ತಿನ 150 ಕ್ಕೂ ಅಧಿಕ ದೇಶಗಳ 5000 ಯುವ ಪ್ರತಿನಿಧಿಗಳು ಇದರಲ್ಲಿ ಪಾಲ್ಗೊಳ್ಳಲಿದ್ದು, **ಭಾರತ ತಂಡದಲ್ಲಿ ಕರ್ನಾಟಕದಿಂದ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ)ನ ರಾಜ್ಯಕಾರ್ಯದರ್ಶಿ ಎಸ್.ವೈ.ಗುರುಶಾಂತ್ ಮತ್ತು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ)ನ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ್, ಪತ್ರಕರ್ತ ಜೆ.ಎನ್.ಮೋಹನ್‌ರವರು ಪ್ರತಿನಿಧಿಗಳಾಗಿ ಭಾಗವಹಿಸಲಿದ್ದಾರೆ.** ಅಲ್ಲದೇ ವಿವಿಧ ವಿಭಾಗಗಳಿಂದ ಸಂಘ ಸಂಸ್ಥೆಗಳಿಂದ ಒಟ್ಟು 100 ಪ್ರತಿನಿಧಿಗಳು ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಈ ಉತ್ಸವವನ್ನು ಜುಲೈ 28 ರಂದು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಡಾ|| ನೆಲ್ಸನ್ ಮಂಡೆಲಾರವರು ಹವಾನಾದಲ್ಲಿ ಉದ್ಘಾಟಿಸಲಿದ್ದಾರೆ. ಕ್ಯೂಬಾದ ಕ್ರಾಂತಿಕಾರಿ ನಾಯಕ, ಅಧ್ಯಕ್ಷ ಡಾ|| ಫಿಡೆಲ್ ಕ್ಯಾಸ್ಟ್ರೋರವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಆಗಸ್ಟ್ 5 ರಂದು ಉತ್ಸವವು ಸಮಾರೋಪಗೊಳ್ಳಲಿದೆ.

ಎರಡನೇಯ ಮಹಾಯುದ್ಧ ಅಂತ್ಯವಾಗುತ್ತಿದ್ದ ಒಡಲಲ್ಲೇ ಹಿರೋಶಿಮಾ, ನಾಗಸಾಕಿಗಳ ಮೇಲೆ ಅಮೇರಿಕಾವು ನ್ಯೂಕ್ಲಿಯರ್ ಬಾಂಬ್ ಸುರಿಸಿ ಇಡೀ ಮನು ಕುಲವನ್ನೇ ನಾಶಗೊಳಿಸುವ ಇನ್ನೊಂದು ಕ್ರೂರ ಯುದ್ಧದ ಅಪಾಯದ ಗಂಟೆ ಬಾರಿಸಿತು. ಏಕಾಧಿಪತ್ಯ ಸಾಧಿಸಬಯಸಿದ ಸಾಮ್ರಾಜ್ಯಶಾಹಿಗಳ ಎದುರು, ಶಾಂತಿ, ಸಮಾನತೆ, ಸ್ವಾತಂತ್ರ್ಯ ಅದಕ್ಕಾಗಿ ಸೌಹಾರ್ದತೆ ಸಾಧಿಸುವ ಆಶಯದಲ್ಲಿ ಮೂಡಿದ್ದು ಈ ಉತ್ಸವ.

ಸ್ವಾತಂತ್ರ್ಯ, ಸ್ನೇಹ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಸೌಹಾರ್ದತೆ ಎಂಬ ಮುಖ್ಯ ಘೋಷಣೆ ಆಧಾರದಲ್ಲಿ ಈ ಉತ್ಸವ ಜರುಗಲಿದೆ. ಈ ಉತ್ಸವದಲ್ಲಿ ಯುವಜನತೆಯು ತಮ್ಮ ಭವಿಷ್ಯ ಮತ್ತು ನೋವು ನಲಿವುಗಳನ್ನು ಹಂಚಿಕೊಳ್ಳಲಿದ್ದಾರೆ. ಸಾಮಾನ್ಯ ಸಮಸ್ಯೆಗಳ ಮೇಲೆ ಕಾರ್ಯಯೋಜನೆ ರೂಪಿಸಲಿದ್ದಾರೆ. ಗ್ಯಾಟ್, ಡಂಕಲ್‌ನಂತಹ ಪ್ರಸ್ತಾಪಗಳ ಮೂಲಕ ಜಗತ್ತನ್ನೇ ತನ್ನ ಅಂಕೆಯೊಳಗೆ ಇಟ್ಟುಕೊಳ್ಳಲು ಹವಣಿಸುತ್ತಿರುವ ಸಾಮ್ರಾಜ್ಯಶಾಹಿ ಶಕ್ತಿಗಳ ಅಟ್ಟಹಾಸದೆದುರು ತಮ್ಮ ತಾಯ್ನಾಡಿನ ಜನರ ಸ್ವಾತಂತ್ರ್ಯ, ಸಾರ್ವಭೌಮತ್ವ, ಸ್ವಾವಲಂಬನೆ ಮತ್ತು ಸಾಧನೆಗಳ ರಕ್ಷಣೆಗೆ ಕಟಿಬದ್ಧರಾಗಿ ಹೋರಾಡಲು ಪಣ ತೊಡಲಿದ್ದಾರೆ. ಸ್ನೇಹ, ಶಾಂತಿ, ಸೌಹಾರ್ದತೆ ಸಾರಲಿದ್ದಾರೆ. ಈ ಉತ್ಸವದಲ್ಲಿ ಶಾಂತಿ, ಪ್ರಗತಿ, ಪರಿಸರ,ಪ್ರಜಾಪ್ರಭುತ್ವ, ಆರೋಗ್ಯ, ಶಿಕ್ಷಣ, ಯುವ ಮಹಿಳೆ, ಮಾನವ ಹಕ್ಕುಗಳು, ಉದ್ಯೋಗ ಮುಂತಾದ ವಿಷಯಗಳ ಬಗ್ಗೆ ವಿಶೇಷವಾಗಿ ಚರ್ಚೆ ನಡೆಯಲಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಈ ಉತ್ಸವದ ಆಂದೋಲನಕ್ಕೆ 50 ತುಂಬುತ್ತಿದೆ. ಭಾರತವೂ ಸ್ವಾತಂತ್ರ್ಯದ ಸುವರ್ಣ ಮಹೋತ್ಸವ ಆಚರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿನಿಧಿಗಳು ಭಾಗವಹಿಸಿ ದೇಶದ ಸ್ಥಿತಿ-ಗತಿ ಅನುಭವಗಳನ್ನು ಹಂಚಿಕೊಳ್ಳಲಿರುವ ಈ ಉತ್ಸವವು ಸಾಮ್ರಾಜ್ಯಶಾಹಿ ಎದುರು ಯುವಜನತೆಯ ಆಶೋತ್ತರಗಳ ಗಳಿಕೆಗಾಗಿ ನಡೆಯುವ ಪ್ರಯತ್ನಗಳಲ್ಲಿ ಮತ್ತೊಂದು ಸುವರ್ಣ ಅಧ್ಯಾಯವಾಗಲಿದೆ.

- ಶ್ರೀಧರ ಪ್ರಭು

KRNM/BGS-405 MAG (2) PRB DECR 319-79/79

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶಕ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ.
2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು-9 ಮುದ್ರಣ: ಹಸು ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು